ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 31 ಬುಧವಾರ 2024

₹4

ಸಂಪುಟ: 45 | ಸಂಚಿಕೆ: 106 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಷ್ಠಾಪನೆ

ಭರದಿಂದ ಸಾಗಿದೆ ದೇವರಾಜ ಅರಸು ಪ್ರತಿಮೆ ಕೆತ್ತನೆ ಕಾರ್ಯ

ಎಂಎಲ್‌ಸಿ ವಿಶ್ವನಾಥ್ ಭೇಟಿ, ಕೆತ್ತನೆ ಕಾರ್ಯ ವೀಕ್ಷಣೆ



ಡಿ.ದೇವರಾಜ ಅರಸು ಅವರ ಪ್ರತಿಮೆಯ ಕೆತ್ತನೆಯ ಕಾರ್ಯವನ್ನು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಪರಿಶೀಲಿಸಿದರು.

ಮೈಸೂರು, ಜು.30(ಜಿಎ)–ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯನ್ನೂ ಒಳಗೊಂಡಿರುವ ಜಿಲ್ಲಾಮಟ್ಟದ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಮಾಜಿ ಮುಖ್ಯಮಂತ್ರಿ, ಹಿಂದುಳಿದ ವರ್ಗಗಳ ಅಭಿವೃದ್ಧಿಯ ಹರಿಕಾರ ಡಿ.ದೇವರಾಜ ಅರಸು ಅವರ ಪ್ರತಿಮೆಯ ಕೆತ್ತನೆಯ ಕಾರ್ಯ ಭರದಿಂದ ಸಾಗುತ್ತಿದೆ.

ಮೈಸೂರಿನ ಚಾಮರಾಜ ಜೋಡಿ (ಕಾಡ ಕಚೇರಿ ಬಳಿ) ರಸ್ತೆಯಲ್ಲಿರುವ ಶಿಲ್ಪಿ ಸೂರ್ಯ ಪ್ರಕಾಶ್ ಯೋಗಿರಾಜ್ ಮನೆಯ ಬಳಿ ಡಿ.ದೇವರಾಜ ಅರಸು ಅವರ ಪ್ರತಿಮೆ ಕೆತ್ತನೆಯ ಕಾರ್ಯ ನಡೆಯುತ್ತಿದ್ದು, ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಮಂಗಳವಾರ ಭೇಟಿ ನೀಡಿ ಪ್ರತಿಮೆಯ ಕೆತ್ತನೆಯ ಕಾರ್ಯ ಪರಿಶೀಲಿಸಿದರು.

ಫೆ.19ರಂದು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. 92 ಲಕ್ಷ ರೂ. ವೆಚ್ಚದಲ್ಲಿ 12 ಅಡಿ ಎತ್ತರದ ಪ್ರತಿಮೆ ಪ್ರತಿಷ್ಠಾಪಿಸಲಾಗುತ್ತಿದ್ದು, ಶಿಲ್ಪಿ ಸೂರ್ಯ ಪ್ರಕಾಶ್ ಯೋಗಿರಾಜ್ ಪ್ರತಿಮೆ ಸಿದ್ಧಪಡಿಸುತ್ತಿದ್ದಾರೆ. ಈಗಾಗಲೇ ದೇವರಾಜ ಅರಸು ಅವರ ಅನೇಕ ಪುತ್ಥಳಿ, ಫೋಟೋಗಳನ್ನು ಆಧರಿಸಿಕೊಂಡು ಥರ್ಮಕೋಲ್‌ನಲ್ಲಿ ಪ್ರತಿಮೆಯ ಪ್ರತಿರೂಪವನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಚಾಮರಾಜನಗರದ ಮುಳ್ಳೂರಿನ ಕ್ವಾರೆಯೊಂದರ ಕಲ್ಲನ್ನು ಗುರುತಿಸಿ, ಕೆತ್ತನೆ ಕಾರ್ಯ ನಡೆಯುವ ಸ್ಥಳಕ್ಕೆ ಸ್ಥಳಾಂತರಿಸಿ ಕೆತ್ತನೆ ಕಾರ್ಯ ಆರಂಭಿಸಿದ್ದಾರೆ. ಇಂದು ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಜಾಕೀರ್ ಹುಸೇನ್ ಜೊತೆಗೆ ಆಗಮಿಸಿದ್ದ ಹೆಚ್.ವಿಶ್ವನಾಥ್ ಪ್ರತಿಮೆ ಕೆತ್ತನೆ ಕಾರ್ಯ ಪರಿಶೀಲಿಸಿ, ಶಿಲ್ಪಿಗಳಿಗೆ ಕೆಲ ಸಲಹೆ ನೀಡಿದರು.

ಆ.20ರಂದು ದೇವರಾಜ ಅರಸು ಅವರ ಜಯಂತಿಗೆ ಪ್ರತಿಮೆ ಅನಾವರಣಗೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಪ್ರತಿಮೆ ಕೆತ್ತನೆ ಕಾರ್ಯ ಉತ್ತಮವಾಗಿ ನಡೆಯುತ್ತಿದೆ. ಆ.20ರಂದು ಅನಾವರಣಗೊಳ್ಳುವುದು ಸ್ವಲ್ಪ ಕಷ್ಟಕರ. ದಸರಾ ಮಹೋತ್ಸವದ ಒಳಗೆ ಅನಾವರಣಗೊಳ್ಳುವ ಭರವಸೆ ಇದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಟ್ರಿನಿಟಿ ಕೊಲಾಜ್ ಆಫ್ ಲಂಡನ್‌ನ ಡ್ರಮ್ಸ್ ಪರೀಕ್ಷಾರ್ಥಿಗಳು



ಮೈಸೂರಿನ ಪ್ರಸಾದ್ ಸ್ಕೂಲ್ ಆಫ್ ರಿದಮ್ಸ್ ವತಿಯಿಂದ ವಿಶ್ವೇಶ್ವರನಗರದ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಟ್ರಿನಿಟಿ ಕೊಲಾಜ್ ಆಫ್ ಲಂಡನ್‌ನ ಡ್ರಮ್ಸ್ ವಿಭಾಗದ ಪರೀಕ್ಷೆಗಳು ನಡೆಯಿತು. ಸುಮಾರು 24 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಸಾದ್ ಸ್ಕೂಲ್ ಆಫ್ ರಿದಮ್ಸ್‌ನ ಸಂಸ್ಥಾಪಕರು ಮತ್ತು ಡ್ರಮ್ಸ್ ಟೀಚರ್ ಸಿ.ಆರ್.ರಾಘವೇಂದ್ರ ಪ್ರಸಾದ್ ಈ ವೇಳೆ ಉಪಸ್ಥಿತರಿದ್ದರು.

ಮಾನವ ಕಳ್ಳ ಸಾಗಾಣಿಕೆ ತಡೆಗೆ ಪ್ರತಿಯೊಬ್ಬರು ಸಹಕರಿಸಬೇಕು

- ಜಿಲ್ಲಾ ನ್ಯಾಯಾಧೀಶರಾದ ರವೀಂದ್ರ ಹೆಗ್ಡೆ ಅಭಿಮತ
- ಫುಟ್‌ಪಾತ್‌ನಲ್ಲಿ ಪೆನ್ನು ಇನ್ನಿತರೆ ಪದಾರ್ಥ ಮಾರುವ ಮಕ್ಕಳ ಬಗ್ಗೆ ಎಚ್ಚರವಿರಲಿ

ಮೈಸೂರು, ಜು.30(ಎಂಟಿವೈ)–ಸಮಾಜದಲ್ಲಿ ಗಂಭೀರ ಸಮಸ್ಯೆಯಾಗಿ ಪರಿಣಮಿಸಿರುವ ಮಾನವ ಕಳ್ಳ ಸಾಗಣಿಕೆ ತಡೆಗಟ್ಟಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರವೀಂದ್ರ ಹೆಗ್ಡೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಖಿ ಸ್ಟ್ಯಾಂಪ್ ಸೆಂಟರ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ 'ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ' ಉದ್ಘಾಟಿಸಿ ಮಾತನಾಡಿದ ಅವರು, ಮಾನವ ಕಳ್ಳ ಸಾಗಾಣಿಕೆ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಕೆಲವರು ಬಡವರಿಗೆ ಉದ್ಯೋಗ ನೀಡುವುದಾಗಿ ನಂಬಿಸಿ, ಮಕ್ಕಳನ್ನು ಕಾನೂನುಬಾಹಿರವಾಗಿ ಬಾಲ ಕಾರ್ಮಿಕರನ್ನಾಗಿ ದುಡಿಸಿಕೊಳ್ಳುತ್ತಿದ್ದಾರೆ. ಇಂತಹವರ ವಿರುದ್ಧ ಕೈಗೊಂಡ ಕ್ರಮಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಬೇಕು. ಇದರಿಂದ ಜನರಲ್ಲಿ ಅರಿವು ಮೂಡುತ್ತದೆ ಎಂದು ತಿಳಿಸಿದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ' ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರವೀಂದ್ರ ಹೆಗ್ಡೆ ಉದ್ಘಾಟಿಸಿದರು. ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಪಂ ಕಾರ್ಯದರ್ಶಿ ಕೃಷ್ಣರಾಜು ಇನ್ನಿತರರು ಉಪಸ್ಥಿತರಿದ್ದರು.

ಮಕ್ಕಳನ್ನು ಮಾನವ ಕಳ್ಳ ಸಾಗಾಣಿಕೆ ಮಾಡಿ, ರಸ್ತೆ ಬದಿ ಅವರಿಂದ ಪೆನ್, ಸ್ಟಿಕ್ಕರ್ಸ್ ಸೇರಿದಂತೆ ಇನ್ನಿತರ ವಸ್ತುಗಳನ್ನು ಮಾರಾಟ ಮಾಡಲು, ಭಿಕ್ಷೆ ಬೇಡಲು ಬಿಡುತ್ತಿರುವುದು ಕಂಡು ಬರುತ್ತಿದೆ. ಸಾರ್ವಜನಿಕರು ಇಂತಹ ಮಕ್ಕಳಿಂದ ವಸ್ತುಗಳನ್ನು ಕೊಂಡುಕೊಳ್ಳುವ ಮೂಲಕ ಪರೋಕ್ಷವಾಗಿ ಈ ದಂಧೆಗೆ ಸಹಾಯ ಮಾಡುತ್ತಿದ್ದಾರೆ. ಇನ್ನು ಮುಂದೆ ಮಕ್ಕಳು ಮಾರಾಟ ಮಾಡುವುದು ಕಂಡು ಬಂದರೆ ಅವರ ಹಿನ್ನೆಲೆಯನ್ನು ತಿಳಿದುಕೊಳ್ಳುವುದರೊಂದಿಗೆ ಜಾಗೃತಿ ಮೂಡಿಸಲು ಮುಂದಾಗಬೇಕು. ಮಾನವ ಕಳ್ಳ ಸಾಗಾಣಿಕೆ ಎಂಬ ದೊಡ್ಡ ಪಿಡುಗನ್ನು ನಾಶ ಮಾಡಲು ಕೇವಲ ಒಬ್ಬರಿಂದ ಸಾಧ್ಯವಿಲ್ಲ. ಎಲ್ಲಾ ಇಲಾಖೆ, ಪ್ರತಿಯೊಂದು ಸಂಸ್ಥೆ ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದರು.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಮಕ್ಕಳು ಕಾಣೆಯಾದ ಪ್ರಕರಣವನ್ನು ನಿರ್ಲಕ್ಷಿಸದೆ ಪತ್ತೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಂದು ಬಡ ಕುಟುಂಬ, ನಿರುದ್ಯೋಗಿಗಳಿಗೆ ಉದ್ಯೋಗದ ಆಸೆ ತೋರಿಸಿ, ನಂಬಿಸಿ ಮಾನವ ಕಳ್ಳ ಸಾಗಾಣಿಕೆ ಮಾಡುತ್ತಿದ್ದಾರೆ. ಇದನ್ನು ಜನರು ಅರಿತುಕೊಳ್ಳಬೇಕು. ಈ ಸಂಚಿಗೆ ಒಳಗಾಗದೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮುಂದಾಗಬೇಕು. ಆಗ ಮಾತ್ರವೇ ಕಳ್ಳ ಸಾಗಾಣಿಕೆ ಅಂತ್ಯವಾಗಲು ಸಾಧ್ಯ. ಮಾನವ ಕಳ್ಳ ಸಾಗಾಣಿಕೆ ಎಂಬುದು ದೊಡ್ಡ ಮಟ್ಟದ ಅಪರಾಧವಾಗಿದ್ದು, ದೇಶದ ಭದ್ರತೆಗೆ ಮಾರಕವಾಗಿ ಪರಿಣಮಿಸಿದೆ. ಹಾಗಾಗಿ ಪ್ರತಿಯೊಬ್ಬರೂ ಇದನ್ನು ತಡೆಗಟ್ಟಲು ಮುಂದಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಅಸಂಘಟಿತ ವಲಯಗಳು ಸಂಘಟಿತಗೊಂಡು ಮಾಡುವ ಶೋಷಣೆಯೂ ಮಾನವ ಕಳ್ಳ ಸಾಗಾಣಿಕೆಯೇ ಆಗಿದೆ. ಇದರ ಬಗ್ಗೆ ಪ್ರತಿಯೊಂದು ಇಲಾಖೆಯೂ ತಮ್ಮ ವ್ಯಾಪ್ತಿಯೊಳಗೆ ಸಾರ್ವಜನಿಕರಿಗೆ ವಿಶೇಷ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಬೇಕು. ಶಾಲೆಯಿಂದಲೇ ಮಕ್ಕಳಿಗೆ ಅಪರಿಚಿತರಿಂದ ದೂರವಿರುವಂತೆ ಎಚ್ಚರಿಕೆಯ ಅರಿವು ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮಾನವ ಕಳ್ಳ ಸಾಗಣಿಕೆ ಕುರಿತಂತೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್, ಜಿಪಂ ಉಪ ಕಾರ್ಯದರ್ಶಿ ಎಂ.ಕೃಷ್ಣರಾಜು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಉಪನ್ಯಾಸ ಕಾರ್ಯಕ್ರಮ

ಮೈಸೂರು, ಜು.30– ಮೈಸೂರಿನ ಹಿರಿಯ ನಾಗರಿಕರ ಮಂಡಳಿಯಿಂದ ಆ.5ರಂದು ಸಂಜೆ 5 ಗಂಟೆಗೆ ಜಯ ಲಕ್ಷ್ಮಿಪುರಂನ ಮಂಡಳಿಯ ಸರಸ್ವತಿ ಸಮುದಾಯ ಭವನದಲ್ಲಿ ಡಾ.ಜೆ.ಪ್ರಸನ್ನಕುಮಾರ್ ಅವರಿಂದ ಆಕ್ಯುಪಂಕ್ಚರ್ ಚಿಕಿತ್ಸೆಯಿಂದ ಶಾರೀರಿಕ ಪರಿಣಾಮಗಳು ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

ಪಿಎಚ್.ಡಿ ಪದವಿ

ಮೈಸೂರು, ಜು. 30–ಡಾ.ವಿ. ರವಿಶಂಕರ ರಾಯ್ ಅವರ ಮಾರ್ಗದರ್ಶನದಲ್ಲಿ ಸೋಮಾ ಮಂಡಲ್ ಅವರು ಸೂಕ್ಷ್ಮ ಜೀವಾಣುಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಕಾಂಗ್ರೆಸ್ ಗ್ಯಾರಂಟಿಯಿಂದ ಜನ ನೆಮ್ಮದಿಯಾಗಿದ್ದಾರೆ

ಶ್ರೀ ಚಾಮುಂಡೇಶ್ವರಿ ಉತ್ಸವದಲ್ಲಿ ದೇವಿಗೆ ಪೂಜೆ ಸಲ್ಲಿಸಿ, ಮುಡಾ ಅಧ್ಯಕ್ಷ ಕೆ.ಮರೀಗೌಡರ ವಿಶ್ವಾಸ

ಮೈಸೂರು, ಜು.30– ನಾಡದೇವತೆ ಚಾಮುಂಡೇಶ್ವರಿ ತಾಯಿ ನಾಡಿನ ಜನತೆಗೆ ಮತ್ತು ನಾಡಿಗೆ ಒಳ್ಳೆಯದು ಮಾಡಲಿ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.

ಮೈಸೂರು ತಾಲೂಕು ಕೆ.ಆರ್.ಮಿಲ್ ಕಾಲೋನಿಯಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಉತ್ಸವದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಮಾತನಾಡಿದ ಅವರು ಸಿದ್ದರಾಮಯ್ಯರವರು ಮುಖ್ಯಮಂತ್ರಿ ಆದರೆ ಕೆಆರ್‌ಎಸ್ ತುಂಬುವುದಿಲ್ಲ. ಮಳೆ ಬರುವುದಿಲ್ಲ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದರು. ಆದರೆ ಚಾಮುಂಡೇಶ್ವರಿ ಕೃಪೆಯಿಂದ ಈ ಬಾರಿ ರಾಜ್ಯದಲ್ಲಿ ಉತ್ತಮ ಮಳೆಯಾಗಿ ಎಲ್ಲಾ ಜಲಾಶಯಗಳು ಭರ್ತಿಯಾಗಿವೆ. ರೈತರು ಸಂತೋಷದಿಂದ ಇದ್ದಾರೆ. ಕಾಂಗ್ರೆಸ್ ಸರ್ಕಾರ ಬಡವರಿಗೆ ನೀಡಿರುವ ಗ್ಯಾರಂಟಿಗಳಿಂದ ಜನರು ನೆಮ್ಮದಿಯಾಗಿದ್ದಾರೆ.



ಮೈಸೂರು ತಾಲೂಕು ಕೆ.ಆರ್.ಮಿಲ್ ಕಾಲೋನಿಯಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಉತ್ಸವದಲ್ಲಿ ದೇವಿಗೆ ಮುಡಾ ಅಧ್ಯಕ್ಷ ಕೆ.ಮರೀಗೌಡ ವಿಶೇಷ ಪೂಜೆ ಸಲ್ಲಿಸಿದರು.

ಇದನ್ನು ಸಹಿಸದ ವಿರೋಧ ಪಕ್ಷಗಳು ಕಾಂಗ್ರೆಸ್ ಸರ್ಕಾರದ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ಸರ್ಕಾರವನ್ನು ಅಭದ್ರಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇವರ ಆಟ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಮುಂದೆ ನಡೆಯುವುದಿಲ್ಲ ಎಂದರು.

ಸಿದ್ದರಾಮಯ್ಯರವರು ತಮ್ಮ 40 ವರ್ಷದ ರಾಜಕೀಯ ಇತಿಹಾಸದಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದೆ ಅಧಿಕಾರ ನಡೆಸಿರುವ ರಾಜ್ಯದ ಏಕೈಕ ಮುಖ್ಯಮಂತ್ರಿಯಾಗಿದ್ದಾರೆ. ಅಹಿಂದ ನಾಯಕ 2ನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದನ್ನು ಸಹಿಸದೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ತಾಯಿ ಚಾಮುಂಡಿ ಅವರಿಗೆ ಒಳ್ಳೆಯದು ಮಾಡಲಿ ಎಂದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಸತೀಶ್‌ಕುಮಾರ್, ಡಿ.ರವಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 31 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 106 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕೇರಳದ ವಯನಾಡಲ್ಲಿ ಸರಣಿ ಭೂಕುಸಿತ

125ಕ್ಕೂ ಅಧಿಕ ಮಂದಿ ಸಾವು

● ಸಮರೋಪಾದಿ ಪರಿಹಾರ ಕಾರ್ಯ ● ಭಾರಿ ಮಳೆಗೆ ಕೇರಳ ತತ್ತರ ● ಕೆಲವೇ ಗಂಟೆಯಲ್ಲಿ ಮೂರು ಗುಡ್ಡ ಕುಸಿತ ● ಅವಶೇಷಗಳಡಿ ಸಾಕಷ್ಟು ಮಂದಿ ಸಿಲುಕಿರುವ ಶಂಕೆ ● ನಾಲ್ಕು ಗ್ರಾಮಗಳಲ್ಲಿ ಅತೀವ ಹಾನಿ

ಕೇರಳ, ಜು.30– ವರುಣಾಘಾತದಿಂದ 'ದೇವರ ನಾಡು' ಕೇರಳ ಅಕ್ಷರಶಃ ತತ್ತರಿಸಿ ಹೋಗಿದೆ. ಭಾರಿ ಮಳೆಗೆ ಇಲ್ಲಿನ ವಯನಾಡು ಜಿಲ್ಲೆಯ ಮೆಪ್ಪಾಡಿ ಬಳಿಯ ಗುಡ್ಡಗಾಡು ಪ್ರದೇಶದಲ್ಲಿ ಮಂಗಳವಾರ ಮುಂಜಾನೆ ಭೀಕರ ಭೂಕುಸಿತ ಸಂಭವಿಸಿ, 125ಕ್ಕೂ ಅಧಿಕ ಮಂದಿ ಜೀವಂತ ಸಮಾಧಿಯಾಗಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೇರಳದ ಕೆಲ ಭಾಗಗಳಲ್ಲಿ ನಿರಂತರ ಮಳೆಯಾಗುತ್ತಿದ್ದು ಸೋಮವಾರ ತಡರಾತ್ರಿ ನಾಲ್ಕು ಗಂಟೆ ಅಂತರದಲ್ಲಿ ಸರಣಿ ಭೂಕುಸಿತ ಸಂಭವಿಸಿದೆ. ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಮುಂಡಕ್ಕೈ ಪಟ್ಟಣದಲ್ಲಿ, ಮುಂಜಾನೆ 4 ಗಂಟೆ ಸುಮಾರಿಗೆ ಚೋರಲ್ ಮಲಶಾಲೆ ಆಸುಪಾಸಿನಲ್ಲಿ ಮತ್ತೆರಡು ಕಡೆ ಗುಡ್ಡ ಕುಸಿದಿದೆ. ಬೃಹತ್ ಬಂಡೆಗಳು ಉರುಳಿ ಬಿದ್ದಿವೆ. ಪರಿಣಾಮ ನದಿಯ ಮಾರ್ಗವೂ ಬದಲಾಗಿ ಪ್ರಳಯವೇ ಸೃಷ್ಟಿಯಾಗಿದೆ. ಪ್ರಕೃತಿ ವಿಕೋಪ ಶಿಬಿರದ ಮಾದರಿಯಲ್ಲಿ ನಡೆಸಲಾಗುತ್ತಿದ್ದ ಶಾಲೆ, ಸುತ್ತಮುತ್ತಲ ಮನೆಗಳು, ಅಂಗಡಿಗಳು ಮಣ್ಣು ಕುಸಿತದಿಂದ ಕೊಚ್ಚಿ ಹೋಗಿವೆ. ■6ನೇ ಪುಟಕ್ಕೆ









ಎಲ್ಲಾ ನೆರವಿಗೆ ಸಿಎಂ ಸಿದ್ದರಾಮಯ್ಯ ಭರವಸೆ



ಬೆಂಗಳೂರು, ಜು.30(ಕೆಎಂಶಿ)– ನೆರೆ ರಾಜ್ಯ ಕೇರಳದಲ್ಲಿ ಸಂಭವಿಸಿದ ಗುಡ್ಡ ಕುಸಿತ ದುರಂತದಲ್ಲಿ ನೂರಾರು ಮಂದಿ ಸಾವಿಗೀಡಾಗಿದ್ದು, ಕರ್ನಾಟಕದಿಂದ ಎಲ್ಲಾ ನೆರವು ನೀಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ರಾಜ್ಯದಲ್ಲೂ ಎಚ್ಚರ ವಹಿಸಿ



ಬೆಂಗಳೂರು: ಕೇರಳದಂತೆ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದ ಹಾನಿಗಳು ಸಂಭವಿಸುವ ಸಾಧ್ಯತೆ ಇದ್ದು, ರಾಜ್ಯ ಸರ್ಕಾರ ದಿನದ 24 ಗಂಟೆ ರಕ್ಷಣಾ ಸಿಬ್ಬಂದಿಯನ್ನು ಸನ್ನದ್ಧ ಸ್ಥಿತಿಯಲ್ಲಿಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ತೀವ್ರ ಮಳೆ ಬೀಳುತ್ತಿರುವ ಹಾಗೂ ■6ನೇ ಪುಟಕ್ಕೆ

ಮೃತರ ಕುಟುಂಬಸ್ಥರಿಗೆ ಪ್ರಧಾನಿ ಪರಿಹಾರ ಘೋಷಣೆ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೊಂದಿಗೆ ಮಾತನಾಡಿ, ಕೇಂದ್ರದಿಂದ ಎಲ್ಲಾ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ಹಾಗೆಯೇ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಮೃತರ ಕುಟುಂಬಸ್ಥರಿಗೆ ತಲಾ 2 ಲಕ್ಷ ರೂ. ಮತ್ತು ಗಾಯಗೊಂಡವರಿಗೆ ತಲಾ 50 ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

'ವಯನಾಡಿನ ಕೆಲವು ಭಾಗಗಳಲ್ಲಿ ಭೂಕುಸಿತದಿಂದ ಜನರು ಸಂಕಷ್ಟಕ್ಕೀಡಾಗಿದ್ದಾರೆ, ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಗಾಯ ಗೊಂಡವರು ಬೇಗ ಗುಣಮುಖರಾಗಲಿ. ದುರಂತ ಕುರಿತು ■6ನೇ ಪುಟಕ್ಕೆ

ಚಾಮರಾಜನಗರ ಜಿಲ್ಲೆಯ ನಾಲ್ವರು ಸಾವು

ಚಾಮರಾಜನಗರ, ಜು.30–ಕೇರಳದ ವಯನಾಡು ಜಿಲ್ಲೆಯ ಚೂರಲ್‌ಮಲದಲ್ಲಿ ಸೋಮವಾರ ತಡರಾತ್ರಿ ಸರಣಿ ಭೂ ಕುಸಿತ ಉಂಟಾಗಿದ್ದು, ಇದರಲ್ಲಿ ಚಾಮರಾಜನಗರ ಜಿಲ್ಲೆಯ ನಾಲ್ವರು ಸಾವನ್ನಪ್ಪಿದ್ದು, ಹಲವಾರು ಮಂದಿ ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ನಾಪತ್ತೆಯಾದವರಿಗಾಗಿ ರಕ್ಷಣೆ ಕಾರ್ಯ ಭರದಿಂದ ಸಾಗಿದೆ. ಕೇರಳದಲ್ಲಿ ಕಾಫಿ ಹಾಗೂ ಟೀ ಎಸ್ಟೇಟ್‌ನಲ್ಲಿ ಕೆಲಸಕ್ಕೆ

ಜಿಲ್ಲೆಯ ಹಲವರು ನಾಪತ್ತೆ

ತೆರಳಿದ್ದ ಜಿಲ್ಲೆಯ ಹಲವಾರು ಮಂದಿ ದುರಂತದಲ್ಲಿ ಸಿಲುಕಿಕೊಂಡಿದ್ದಾರೆ. ಇವರಲ್ಲಿ ಚಾಮರಾಜನಗರ ಮೂಲದ ಪುಟ್ಟಸಿದ್ದಿ (62), ಇವರ ಮಗಳು ರಾಣಿ, ಇರಸವಾಡಿ ಗ್ರಾಮದ ರಾಜೇಂದ್ರ (50) ಹಾಗೂ ರತ್ನಮ್ಮ (45) ಸಾವನ್ನಪ್ಪಿದ್ದಾರೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ. ಉಳಿದಂತೆ ಚಾಮರಾಜನಗರ ಸಮೀಪದ ಸೋಮವಾರಪೇಟೆ, ನಾಗವಳ್ಳಿ ■6ನೇ ಪುಟಕ್ಕೆ

> "ಗುಡ್ಡದಲ್ಲಿ ಸಿಲುಕಿರುವ ತಮ್ಮ ಪತಿ ವಿನೋದ್‌ನನ್ನು ರಕ್ಷಿಸಿ ಕರೆತರಬೇಕು. ವಿನೋದ್ ತಮ್ಮ ಜೊತೆ ಫೋನ್ ಸಂಪರ್ಕದಲ್ಲಿದ್ದಾರೆ. ಆ ಗುಡ್ಡದಲ್ಲಿ ವಿನೋದ್ ಅವರ ಜೊತೆ ಇನ್ನೂ ಹಲವಾರು ಜನರಿದ್ದಾರೆ.
> –ಪ್ರವೀದಾ, ಚಾಮರಾಜನಗರ

ಕೆ.ಆರ್.ಪೇಟೆಯ ಮೂವರು ನಾಪತ್ತೆ

ಕೆ.ಆರ್.ಪೇಟೆ, ಜು.30– ಕೇರಳದ ವಯನಾಡು ಜಿಲ್ಲೆಯಲ್ಲಿ ಭಾರೀ ಮಳೆಗೆ ಗುಡ್ಡ ಕುಸಿತ ದುರಂತದಲ್ಲಿ ಕೆ.ಆರ್.ಪೇಟೆ ತಾಲೂಕಿನ ತಾಯಿ–ಮಗ ಮತ್ತು ಮಗು ನಾಪತ್ತೆಯಾಗಿದ್ದಾರೆ. ಕೆ.ಆರ್.ಪೇಟೆ ತಾಲೂಕಿನ ಕತ್ತರಘಟ್ಟ ನಿವಾಸಿಯಾದ ಲೀಲಾವತಿ, ಅವರ ಪುತ್ರ ಅನಿಲ್ ಕುಮಾರ್ ಮತ್ತು ಮೊಮ್ಮಗು ನಿಹಾನ್ ನಾಪತ್ತೆಯಾಗಿದ್ದು, ಅವರ ಪತ್ತೆಗಾಗಿ ಶೋಧ ಕಾರ್ಯ ಮುಂದುವರೆದಿದೆ.

ಮೈಸೂರು ಜಿಲ್ಲೆ ಸರಗೂರು ತಾಲೂಕಿನ ನಿವಾಸಿಯಾದ ಅನಿಲ್ ಕುಮಾರ್ ಕತ್ತರಘಟ್ಟದ ಯುವತಿಯನ್ನು ವಿವಾಹವಾಗಿದ್ದು, ದಂಪತಿಗೆ ನಿಹಾಲ್ ಎಂಬ ಪುತ್ರನಿದ್ದ. ಅನಿಲ್ ಕುಮಾರ್ ಪತ್ನಿಯ ಜೊತೆ ಕೆ.ಆರ್.ಪೇಟೆಯ ಕತ್ತರಘಟ್ಟದಲ್ಲಿ ವಾಸಿಸುತ್ತಿದ್ದರು ಎನ್ನಲಾಗಿದೆ. ಇತ್ತೀಚೆಗೆ ಕೇರಳದ ವಯನಾಡಿನಲ್ಲಿ ಕೆಲಸಕ್ಕೆ ಸೇರಿದ್ದ ಅನಿಲ್ ಕುಮಾರ್, ಪತ್ನಿ, ತಾಯಿ ಲೀಲಾವತಿ ■6ನೇ ಪುಟಕ್ಕೆ

ಕೊಡಗಲ್ಲಿ ಮತ್ತೆ ಮಳೆ ಆರ್ಭಟ ಎರಡು ದಿನ ರೆಡ್ ಅಲರ್ಟ್ ಘೋಷಣೆ

ಹಲವೆಡೆ ರಸ್ತೆ ಬಂದ್; ಶಾಲೆಗಳಿಗೆ ರಜೆ



■ಪುಟ–8


ಮುಡಾ, ವಾಲ್ಮೀಕಿ ಹಗರಣ ಸಂಬಂಧ ಕಾಂಗ್ರೆಸ್ ವರಿಷ್ಠರಿಗೆ ಸಿಎಂ ಸಿದ್ದರಾಮಯ್ಯ ವಿವರಣೆ

ಇದಾವುದರಲ್ಲೂ ನನ್ನ ಪಾತ್ರವಿಲ್ಲ

ಬೆಂಗಳೂರು, ಜು.30(ಕೆಎಂಶಿ)– ಮುಡಾ ಹಗರಣದಲ್ಲಿ ಯಾವುದೇ ಅವ್ಯವಹಾರವಾಗಲೀ, ಭ್ರಷ್ಟಾಚಾರವಾಗಲೀ ನಡೆದಿಲ್ಲ, ಇದರಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನದಟ್ಟು ಮಾಡುವ ಪ್ರಯತ್ನ ಮಾಡಿದ್ದಾರೆ.

ದೆಹಲಿಗೆ ಒಂದು ದಿನದ ಭೇಟಿ ನೀಡಿರುವ ಅವರು, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್‌ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಹಲವು ಮುಖಂಡರಿಗೆ ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದ್ದಾರೆ. ಮುಡಾ ಹಗರಣದಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ, ಮುಡಾ ಸ್ವಾಧೀನಪಡಿಸಿಕೊಂಡ ■9ನೇ ಪುಟಕ್ಕೆ





ಬೆಂಗಳೂರಿನ ಕುಮಾರ ಕೃಪಾದಲ್ಲಿ ನ್ಯಾಯಾಂಗ ತನಿಖೆ



ದೇಸಾಯಿ

ಮೈಸೂರು, ಜು.30(ಆರ್‌ಕೆ)–ಶೇ.50:50ರ ಅನುಪಾತದಡಿ ನಿಯಮ ಬಾಹಿರವಾಗಿ ಮುಡಾ ನಿವೇಶನಗಳ ಹಂಚಿಕೆ ಹಗರಣದ ತನಿಖೆಗಾಗಿ ರಚನೆಯಾಗಿರುವ ನ್ಯಾಯಾಂಗ ತನಿಖಾ ಆಯೋಗ ಬೆಂಗಳೂರಿನ ಕುಮಾರ ಕೃಪಾ ಅತಿಥಿಗೃಹದಲ್ಲಿ ಕಚೇರಿ ತೆರೆದಿದೆ. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಏಕ ಸದಸ್ಯ ತನಿಖಾ ಆಯೋಗ ಮುಡಾ ಹಗರಣ ಕುರಿತು ತನಿಖೆ ನಡೆಸಲಿದ್ದು, ನ್ಯಾಯಾಧೀಶರ ನಿರ್ದೇಶನದಂತೆ ಅಧಿಕಾರಿಗಳು ಕುಮಾರ ಕೃಪಾದಲ್ಲಿ ಕಚೇರಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಅಲ್ಲಿ ಕುರ್ಚಿ ■9ನೇ ಪುಟಕ್ಕೆ

ಸಿದ್ದರಾಮಯ್ಯ ಸರ್ಕಾರ ಅಸ್ಥಿರಗೊಳಿಸುವ ಯತ್ನ!

ಬೆಂಗಳೂರು, ಜು.30(ಕೆಎಂಶಿ)– ಮುಡಾ ಹಗರಣ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ಅಸ್ಥಿರಗೊಳಿಸಲು ದೆಹಲಿ ಮಟ್ಟದಲ್ಲಿ ಚಟುವಟಿಕೆಗಳು ನಡೆದಿವೆ. ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮೊಕದ್ದಮೆ ಹೂಡಲು ಅನುಮತಿ ನೀಡುವಂತೆ ನ್ಯಾಯವಾದಿ ಟಿ.ಜೆ. ಅಬ್ರಹಾಂ ಅವರು ಇತ್ತೀಚೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಿ, ಮನವಿ ಮಾಡಿಕೊಂಡಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ■9ನೇ ಪುಟಕ್ಕೆ

ಪ್ಯಾರಿಸ್ ಒಲಿಂಪಿಕ್ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ಶೂಟಿಂಗ್ ವಿಭಾಗ

ಕಂಚು ಗೆದ್ದ ಮನು ಭಾಕರ್, ಸರಬ್ಜೋತ್ ಸಿಂಗ್



ಪ್ಯಾರಿಸ್, ಜು.30–ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಭಾರತದ ಮನು ಭಾಕರ್ ಮತ್ತು ಸರಬ್ಜೋತ್‌ಸಿಂಗ್ ಜೋಡಿ ಕಂಚಿನ ಪದಕಕ್ಕೆ ಮುತ್ತಿಟ್ಟಿದ್ದಾರೆ. ಈ ಮೂಲಕ ಭಾರತಕ್ಕೆ ಶೂಟಿಂಗ್‌ನಲ್ಲಿ 2ನೇ ಪದಕ ಲಭಿಸಿದೆ. ಒಲಿಂಪಿಕ್‌ನ ಮಿಶ್ರ ಪಂದ್ಯದಲ್ಲಿ ಭಾರತಕ್ಕೆ ಇದು ಮೊದಲ ಪದಕವಾಗಿದೆ.

ಮಂಗಳವಾರ ನಡೆದ ಕಂಚಿನ ಪದಕದ ಸ್ಪರ್ಧೆಯಲ್ಲಿ ದಕ್ಷಿಣ ಕೊರಿಯಾದ ಓಹ್ ಯೆ ಜಿನ್ ಮತ್ತು ಲೀ ವೊನ್ಹೋ ವಿರುದ್ಧ 22 ವರ್ಷದ ಭಾರತದ ಮನು ಭಾಕರ್ ಹಾಗೂ ಸರಬ್ಜೋತ್ ಸಿಂಗ್ ಜೋಡಿ 16–10 ಅಂತರದಲ್ಲಿ ಗೆಲುವು ಪಡೆಯಿತು. ಈ ಗೆಲುವಿನ ಮೂಲಕ ಮನು ಭಾಕರ್ ಅವರು ಭಾರತದ ■9ನೇ ಪುಟಕ್ಕೆ

ಮೈಸೂರಲ್ಲಿ ದಿಕ್ಕಿಲ್ಲದಂತೆ ರಸ್ತೆಬದಿ ನಿಂತಿರುವ ವಾಹನಗಳು

ಗುಜರಿಗೆ; ಹಾಗೆಯೇ ಬಿಡಾಡಿ ದನಗಳು ಪಿಂಜರಾಪೋಲ್‌ಗೆ

ಮೈಸೂರು ಮಹಾನಗರಪಾಲಿಕೆ ಸಾಮಾನ್ಯ ಸಭೆ ಮಹತ್ವದ ನಿರ್ಣಯ

ಮೈಸೂರು, ಜು. 30(ಆರ್‌ಕೆ)– ಮೈಸೂರು ನಗರದ ಯಾವುದೇ ಭಾಗದಲ್ಲಿ ದಿಕ್ಕಿಲ್ಲದಂತೆ ನಿಂತಿರುವ ವಾಹನಗಳನ್ನು ಗುಜರಿಗೆ ಕಳುಹಿಸಲು ಮೈಸೂರು ಮಹಾನಗರ ಪಾಲಿಕೆ ನಿರ್ಧರಿಸಿದೆ.

ಪಾಲಿಕೆ ಆಡಳಿತಾಧಿಕಾರಿಯೂ ಆದ ಮೈಸೂರು ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಅಧ್ಯಕ್ಷತೆಯಲ್ಲಿ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಇಂದು ನಡೆದ ಸಾಮಾನ್ಯ ಸಭೆಯಲ್ಲಿ ಸುದೀರ್ಘ ಚರ್ಚೆ ಬಳಿಕ ಮಾಲೀಕರು, ದಾಖಲಾತಿಗಳಿಲ್ಲದೆ, ತಿಂಗಳುಗಟ್ಟಲೇ ರಸ್ತೆ ಬದಿ ನಿಂತಿರುವ ವಾಹನಗಳ ಸಂಖ್ಯೆ ನಮೂದಿಸಿ ಆರ್‌ಸಿ ಮಾಲೀಕರ ಪತ್ತೆಗೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ, ನಿಗದಿತ ಸಮಯದೊಳಗೆ ಯಾರೂ ಬಾರದಿದ್ದಲ್ಲಿ ಅಂತಹ ವಾಹನಗಳನ್ನು ಗುಜರಿಗೆ ನಿಯಮಾನುಸಾರ ಸಾಗಿಸಿ ವಿಲೇವಾರಿಗೆ ಕ್ರಮ ವಹಿಸುವುದೆಂದು ಸಭೆಯು ತೀರ್ಮಾನಿಸಿತು. ಪತ್ರಿಕೆಗಳಲ್ಲಿ ಪ್ರಕಟಣೆ ನೋಡಿ ನಿಗದಿತ ಅವಧಿಯೊಳಗಾಗಿ ಬಂದು ದಾಖಲಾತಿ ತೋರಿಸಿದರೆ ಮಾಲೀಕನಿಗೆ 5,000 ರೂ. ದಂಡ ವಿಧಿಸಿ ವಾಹನ ನೀಡುವುದು. ಯಾರೂ ಬಾರದಿದ್ದಲ್ಲಿ ಓನರ್ ಇಲ್ಲ ಎಂದು ಪರಿಗಣಿಸಿ ಅಂತಹ ವಾಹನಗಳನ್ನು ಗುಜರಿಗೆ ನೀಡುವ ಮೂಲಕ ವಿಲೇವಾರಿ ಮಾಡಬೇಕೆಂದು ಸಭೆ ನಿರ್ಣಯಿಸಿದೆ.

ಮೈಸೂರು ನಗರದಾದ್ಯಂತ ಅಲ್ಲಲ್ಲಿ ರಸ್ತೆ ಬದಿ ಸುಮಾರು ವರ್ಷಗಳಿಂದ ವಾಹನಗಳನ್ನು ನಿಲ್ಲಿಸಲಾಗಿದೆ. ಇದರಿಂದ ಇತರೆ ವಾಹನಗಳ ಸಂಚಾರ ಮತ್ತು ಪಾದಚಾರಿಗಳು ಓಡಾಡಲು ಅಡ್ಡಿಯಾಗಿದ್ದು, ಈ ಬಗ್ಗೆ ಸುದ್ದಿ ಮಾಧ್ಯಮದಲ್ಲಿ ಪೊಲೀಸರು ಹಾಗೂ ಸ್ಥಳೀಯ ಸಂಸ್ಥೆ ಅಧಿಕಾರಿಗಳ ವಿರುದ್ಧ ನಿರ್ಲಕ್ಷ್ಯದ ಆರೋಪ ಕೇಳಿಬರುತ್ತಿತ್ತು.

ನಿಂತಲ್ಲೇ ನಿಂತಿರುವ ವಾಹನಗಳ ಬಗ್ಗೆ ಸಾರ್ವಜನಿಕರು, ಸಂಘ–ಸಂಸ್ಥೆಗಳು, ಪೊಲೀಸ್ ಘಟಕದ ಸಿಬ್ಬಂದಿ ಸಹ ಪಾಲಿಕೆ ಮತ್ತು ನಗರಪಾಲಿಕೆ ಆಯುಕ್ತರಿಗೆ ಲಿಖಿತ ದೂರು ನೀಡಿದ್ದರು.

ಬಿಡಾಡಿ ದನಗಳು: ಬಿಡಾಡಿ ದನಗಳು ಅಡ್ಡಾದಿಡ್ಡಿಯಾಗಿ ರಸ್ತೆಯಲ್ಲಿ ಓಡಾಡುತ್ತಿರುವುದರಿಂದ ಮೈಸೂರು ನಗರದಾದ್ಯಂತ ವಾಹನ ಸಂಚಾರಕ್ಕೆ ■9ನೇ ಪುಟಕ್ಕೆ



ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ಜಿ.ಸಿ. ಪ್ರಕಾಶ್ ನೇತೃತ್ವದಲ್ಲಿ ಮಂಗಳವಾರ ಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ ಹಾಗೂ ಇತರ ಅಧಿಕಾರಿಗಳು ಭಾಗವಹಿಸಿದ್ದರು.





ನಕ್ಕರೆ ಅದೇ ಸ್ವರ್ಗ

ಗುಂಡ : ಕೆಲವು ಹುಡುಗಿಯರು ತುಂಬಾ ಕಲಿಯೋದಿಕ್ಕೆ ಆಸಕ್ತಿ ತೋರಿಸೊಲ್ಲ.

ತಿಮ್ಮ : ಯಾಕೆ?

ಗುಂಡ : ಅವರಿಗೆ ಚೆನ್ನಾಗಿ ಗೊತ್ತು. ಪ್ರಪಂಚದ ಯಾವುದೋ ಮೂಲೆಯಲ್ಲಿ ತನಗಾಗಿ ಒಬ್ಬ ನಿದ್ದೆ ಬಿಟ್ಟು ಓದುತ್ತಾ ಇದ್ದಾನೆ ಅಂತ!

ಮೈಸೂರು ಮಿತ್ರ

ಬುಧವಾರ, 31 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇನ್ನೊಬ್ಬರು ಹೇಗಿರಬೇಕು ಎಂದು ವಿಮರ್ಶಿಸುವ ಬದಲು ನಾವು ಹೇಗಿದ್ದೇವೆ ಎಂದು ನಮ್ಮೊಳಗೇ ಇಣುಕಿ ನೋಡಿಕೊಂಡು ನ್ಯೂನತೆ ಸರಿಪಡಿಸಿಕೊಳ್ಳೋಣ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಚ್ಚರ ತಪ್ಪಿ ಮಾತನಾಡಬಾರದು, ಹುಚ್ಚನಂತೆ ವರ್ತಿಸಬಾರದು.

ನಿಮ್ಮ ಪತ್ರಗಳು

■ ಜಿಲ್ಲಾಧಿಕಾರಿಗಳ ಹಳೆಯ ಕಚೇರಿಗೆ ಕಾಯಕಲ್ಪ ನೀಡಿ

ಮಾನ್ಯರೆ,



ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಹಳೆಯ ಕಚೇರಿಯು ದಶಕಗಳ ಕಾಲ ಸಾರ್ವಜನಿಕರ ಸೇವೆಗೆ ತನ್ನನ್ನು ಒಡ್ಡಿಕೊಂಡಿತ್ತು ಬಹು ಸುಂದರವಾದ ಪಾರಂಪರಿಕ ಕಟ್ಟಡವಾದ ಈ ಕಟ್ಟಡವು 1895ರಲ್ಲಿ ಉದ್ಘಾಟನೆಯಾಗಿ ಬ್ರಿಟಿಷ್ ಸರಕಾರದ ಪ್ರತಿನಿಧಿ ಸರ್ ಜೇಮ್ಸ್ ಗಾರ್ಡನ್‌ನ ನೆನಪಿಗಾಗಿ ನಿರ್ಮಾಣವಾದ ಸುಸಜ್ಜಿತ ಬಂಗಲೆ ಆಗಿನ ಕಾಲದ ಅರಮನೆಯಂತೆ ಇತ್ತು. ಬ್ರಿಟಿಷ್ ಅಧಿಕಾರಿಗಳ ಕಚೇರಿಯಂತೆ ಬಳಕೆಯಾಗುತ್ತಿದ್ದ ಇದು ಸ್ವತಂತ್ರ ನಂತರ ಜಿಲ್ಲಾಧಿಕಾರಿಗಳ ಕಚೇರಿಯಾಗಿ ಬದಲಾಗಿತ್ತು. ರೈಲು ಮತ್ತು ಬಸ್ ನಿಲ್ದಾಣಕ್ಕೆ ಹತ್ತಿರವಾಗಿದ್ದು, ಗ್ರಾಮೀಣ ಜನರು ತಮ್ಮ ದೂರು -ದುಮ್ಮಾನಗಳನ್ನೂ ಹೊತ್ತು ತಂದು ಇಲ್ಲಿ ಅಧಿಕಾರಿಗಳನ್ನು ಭೇಟಿ ಮಾಡಿ ಬಗೆಹರಿಸಿಕೊಳ್ಳುತ್ತಿದ್ದರು. ಸಾವಿರಾರು ಪ್ರತಿಭಟನೆಗಳಿಗೆ ಸಾಕ್ಷಿಯಾಗಿದ್ದ ಈ ಭವ್ಯ ಬಂಗಲೆಯು ನೂತನ ಜಿಲ್ಲಾಧಿಕಾರಿಗಳ ಕಚೇರಿ ಸ್ಥಳಾಂತರವಾದಾಗಿನಿಂದ ತೀವ್ರ ತಾತ್ಸಾರಕ್ಕೆ ಒಳಗಾಗಿ ಶಿಥಿಲಗೊಂಡಿದ್ದು, ಗೋಡೆಗಳ ಬಿರುಕುಗಳ ನಡುವೆ ಗಿಡಗಂಟಿಗಳು ಬೆಳೆದುಕೊಂಡು ಕಟ್ಟಡದ ಅಸ್ತಿತ್ವಕ್ಕೆ ಧಕ್ಕೆ ತರುತ್ತಿವೆ. ಮೇಲ್ಭಾಗದ ಗೋಪುರದ ಕಿಟಕಿ ಮುರಿದು ಮಳೆ ನೀರು ಸೋರುತ್ತಿದೆ. ಬಣ್ಣ ಮಾಸಿ ಅದರ ಮೂಲ ಸ್ವರೂಪಕ್ಕೆ ಕುಂದಾಗುತ್ತಿದೆ. ಗೋಡೆಗಳು ಸಹ ಅಲ್ಲಲ್ಲಿ ನೀರು ಇಳಿದು ಚೆಕ್ಕೆ ಎದ್ದು ಬರುತ್ತಿದ್ದು, ಮೈಸೂರಿನ ಅಸ್ಮಿತೆಗಳಲ್ಲಿ ಒಂದಾದ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮತ್ತೊಂದು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಆಗುವ ಮುನ್ನ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ಈ ಬಂಗಲೆಗೆ ಕಾಯಕಲ್ಪ ಒದಗಿಸಿ ದುರಸ್ತಿಗೆ ಕ್ರಮ ಕೈಗೊಳ್ಳಿ. ಹಾಗೆ ಈ ಕಟ್ಟಡದ ಪಕ್ಕದಲ್ಲಿ ಇರುವ ಉದ್ಯಾನವನ ಸಹ ಯಾವುದೇ ನಿರ್ವಹಣೆ ಇಲ್ಲದೆ ಪಾಳು ಬಿದ್ದಿದ್ದು, ಇದನ್ನು ಹಸಿರೀಕರಣಗೊಳಿಸಿದರೆ ಕಟ್ಟಡಕ್ಕೆ ಮತ್ತಷ್ಟು ಮೆರಗು ಬರುತ್ತದೆ. ಸಾರ್ವಜನಿಕರ ಬಳಕೆಗೆ ಯೋಗ್ಯವಾಗುತ್ತದೆ. ದುರಸ್ತಿ ನಂತರ ಈ ಕಟ್ಟಡದಲ್ಲಿ ಇರುವ ಕೊಠಡಿಗಳನ್ನು ಬೇರೆ ಕಡೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಸರಕಾರಿ ಇಲಾಖೆಗಳಿಗೆ ಬಳಸಿಕೊಂಡರೆ ಸಾರ್ವಜನಿಕರ ತೆರಿಗೆ ಹಣ ಉಳಿಸಿದಂತೆ ಆಗುತ್ತದೆ ಹಾಗೂ ಉತ್ತಮವಾದ ಸುಂದರ ಬಂಗಲೆಯನ್ನು ಕಾಪಾಡಿಕೊಂಡಂತೆ ಆಗುತ್ತದೆ.

–ನಾಗೇಂದ್ರ ಕಿಲಗೆರೆ, ಮೈಸೂರು

■ ಒಲಿಂಪಿಕ್ಸ್‌ನಲ್ಲಿ ಭಾರತದ ನಿರೀಕ್ಷೆಗಳು ಸಾಕಾರಗೊಳ್ಳಲಿ

ಮಾನ್ಯರೆ,

ಮೂವತ್ತಮೂರನೇ ಆವೃತ್ತಿಯ ಒಲಿಂಪಿಕ್ಸ್‌ಗೆ ಪ್ಯಾರಿಸ್‌ನಲ್ಲಿ ಅದ್ದೂರಿ ಚಾಲನೆ ಈಗಾಗಲೇ ಸಿಕ್ಕಿದೆ. ಈ ಮಹಾ ಕ್ರೀಡಾಕೂಟದಲ್ಲಿ ಪದಕ ಗೆಲ್ಲಲು ಭಾರತದಿಂದ ಒಟ್ಟು 117 ಸ್ಪರ್ಧಿಗಳು ಕಣಕ್ಕಿಳಿದಿದ್ದಾರೆ. ಕಳೆದ ಆವೃತ್ತಿಯಲ್ಲಿ 7 ಪದಕ ಗೆಲ್ಲುವ ಮೂಲಕ ಭಾರತ ಒಲಿಂಪಿಕ್ಸ್‌ನಲ್ಲಿ ತನ್ನ ಅತ್ಯುತ್ತಮ ಪ್ರದರ್ಶನ ನೀಡಿತ್ತು. ಹೀಗಾಗಿ ಈ ಆವೃತ್ತಿಯಲ್ಲಿ ಆ ದಾಖಲೆ ಮುರಿಯಲಿ ಎಂಬುದು ಕೋಟ್ಯಾಂತರ ಅಭಿಮಾನಿಗಳ ಆಶಯವಾಗಿದೆ.

ಇದಕ್ಕೆ ಪೂರಕವಾಗಿ ನಮ್ಮ ಭಾರತ ಸರ್ಕಾರ ಕೂಡ ಸ್ಪರ್ಧಿಗಳಿಗೆ ಅವಶ್ಯವಿರುವ ಎಲ್ಲಾ ಸವಲತ್ತುಗಳನ್ನು ಒದಗಿಸಿದ್ದು, ಈ ನಿಟ್ಟಿನಲ್ಲಿ ಭಾರತದ ನಿರೀಕ್ಷೆಗಳು ಉಜ್ವಲವಾಗಿದೆ. ನೀರಜ್ ಚೋಪ್ರಾ, ಮೀರಾಬಾಯಿ ಚಾನು ಮತ್ತು ಪಿವಿ ಸಿಂಧುರಂತಹ ಅಥ್ಲೀಟ್‌ಗಳ ನಾಯಕತ್ವದಲ್ಲಿ ಭಾರತ ಮುನ್ನಡೆ ಸಾಧಿಸಲು ಉತ್ತಮ ಅವಕಾಶಗಳಿದ್ದು, ಹೀಗಾಗಿ ಪ್ರತಿಯೊಬ್ಬ ಸ್ಪರ್ಧಿಯು ಸವಾಲುಗಳನ್ನು ಎದುರಿಸಿ ಅನನ್ಯ ಸಾಧನೆಗಳನ್ನು ಮಾಡುತ್ತಾರೆ ಎಂಬ ಭರವಸೆಯನ್ನು ಮೂಡಿಸಿದ್ದಾರೆ. ಒಟ್ಟಾರೆಯಾಗಿ ಭಾರತೀಯ ಕ್ರೀಡಾಪಟುಗಳು ಪದಕ ಗಳಿಕೆಯಲ್ಲಿ ಹೆಚ್ಚಿನ ಯಶಸ್ಸು ಸಾಧಿಸಲಿ ಎಂಬುದು ಭಾರತೀಯ ಕೋಟ್ಯಾಂತರ ಕ್ರೀಡಾಪ್ರೇಮಿಗಳ ಸದಾಶಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಸರಳ ಜೀವಿ ನಮ್ಮ ಧ್ರುವನಾರಾಯಣ

ಮಾನ್ಯರೆ,



ಸ್ನೇಹಿತರಿಗೂ ಸ್ನೇಹಿ ವೈರಿಗೂ ಸ್ನೇಹಿ ಈ ಸರಳಜೀವಿ,
ಮತದಾರನ ಮನೆಮಗನಾಗಿ ವಿರಮಿಸದೆ ದುಡಿದು
ಸೇವಕನಾಗಿ ಹಮ್ಮುಬಿಮ್ಮು ಇಲ್ಲದೆ ತೋರಿಸಿಕೊಟ್ಟರು
ರಾಜಕಾರಣಿಗಳು ಹೀಗೂ ಇರಬಹುದೆಂದು!,
ಸದ್ದಿಲ್ಲದೆ ದೀನದಲಿತರ ದೊಡ್ಡಧ್ವನಿಯಾಗಿದ್ದವರು,
ಜಾತಿಧರ್ಮಗಳನು ಮೀರಿ ನಿಂತ ಸಂತನಿವನು,
ಮತದಾರ ಚಲಾಯಿಸುವ ಒಂದೊಂದು ಓಟಿಗೂ
ಮಹತ್ವ ಇರುವುದನ್ನು ತಿಳಿಸಿದ ಪುಣ್ಯಾತ್ಮ!, ಇಲ್ಲ
ಹಾದಿಬೀದಿಯಲ್ಲಿ ಎದುರಾಳಿಯ ತೇಜೋವಧೆ,
ಕಾಮ–ಕ್ರೋಧ–ಲೋಭ–ಮದ–ಮತ್ಸರ ಅರಿಯದ
ಶ್ರೀಮನ್ನಾರಾಯಣ ನಮ್ಮ 'ಧ್ರುವ'ನಾರಾಯಣ ದೇವರು!,
ಗೆದ್ದು ಗದ್ದುಗೆ ಏರಿದಾಗಲೂ 'ಧ್ರುವ'ರಾಜನೇ,
ಸೋಲುಂಡರು ಧರ್ಮರಾಜನಾಗಿ ಸುಖದುಃಖಗಳಿಗೆ
ಸ್ಪಂದಿಸಿ ಪರಿಹರಿಸಿದ ಧ್ರುವ ಹರ ಹರಹರ ಮಹದೇವ
ಪರಮಾತ್ಮನಿಗೂ ಪ್ರಿಯವಾಗಿರಬೇಕು 'ಕೈ'ಬೀಸಿ
ಕರೆದು ನಭೋಮಂಡಲದ ಧ್ರುವತಾರೆ ಪಟ್ಟಕೊಟ್ಟನು!,
ಅಭಿಮಾನಿಗಳಿಗೆ ಏಕಿಷ್ಟು ಸಹಿಸಲಾಗದ ನೋವು?,
ಹುಟ್ಟಿದವರೊಮ್ಮೆ ಸಾಯಲೇಬೇಕು ಜಗದ ನಿಯಮ,
ಮನಸ್ಸುಗಳನ್ನು ಗೆದ್ದು ಸತ್ತು ಬದುಕಿದ್ದಾರೆ ನಮ್ಮೊಳಗೆ
ಇದ್ದವರಿಗೆ ಮಾದರಿಯಾಗಿ ನಾಯಕ ಶ್ರೀಧ್ರುವನಾರಾಯಣ
ಇಲ್ಲಿಯೇ ಹುಟ್ಟಿಬರಲಿ ಮತ್ತೊಮ್ಮೆ ಚಾಮರಾಜನಗರದಲ್ಲೇ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

■ ಕುಸಿತ

ಮಾನ್ಯರೆ,

ಬಿಹಾರದಲ್ಲಿ ಒಂದರ ಮೇಲೊಂದು ಸೇತುವೆಗಳ ಕುಸಿತ!
ಸಾಲದ್ದಕ್ಕೆ ಸರ್ವತ್ರ ಮಾನವ–ಮಾನವರ ನಡುವಣ
ಮನಃಸೇತುವೆಗಳ ಕುಸಿತ; ಮೌಲ್ಯ ಪಾತ!

–ಸಿಪಿಕೆ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಗವದ್ಗೀತೆಯ ಪ್ರಸ್ತುತತೆ ಅಂದು, ಇಂದು, ಮುಂದೆ–2

ದ್ವಾಪರಯುಗದಲ್ಲಿ, ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ, ಅರ್ಜುನನು ವಿಷಾದದಿಂದ ಕರ್ತವ್ಯ ವಿಮುಖನಾಗಿದ್ದಾಗ ಪ್ರಸ್ತುತವಾಗಿತ್ತು ಎಂಬುದನ್ನು ಒಪ್ಪಿದರೂ ಸಹಸ್ರಾರು ವರ್ಷಗಳು ಕಳೆದ ಮೇಲೆ ಇಂದು ಅದು ಹೇಗೆ ಪ್ರಸ್ತುತವಾಗುತ್ತದೆ ಎಂಬುದು ಸಹಜವಾದ ಸಕಾರಣವಾದ ಪ್ರಶ್ನೆ. ಇಂದು ಪ್ರಪಂಚ ಬದಲಾಗಿದೆ. ವಿಜ್ಞಾನದ ಆವಿಷ್ಕಾರಗಳು ನಮ್ಮ ದೃಷ್ಟಿಯಲ್ಲಿ ಪರಿವರ್ತನೆಯನ್ನು ತಂದಿವೆ. ನಾವು ಇಂದು ಪ್ರಬುದ್ಧರೂ ವಿದ್ಯಾಸಂಪನ್ನರೂ ಆಗಿದ್ದೇವೆ. ನಮಗೇಕೆ ಭಗವದ್ಗೀತೆ? ಎಂದು ಹಲವರು ಕೇಳುತ್ತಾರೆ.

ಆದರೆ ಜಗತ್ತಿನ ಸಾಹಿತ್ಯದ ಶ್ರೇಷ್ಠ ಕೃತಿಗಳು ಎಲ್ಲ ಕಾಲಕ್ಕೂ ಹೊಸವೇ. ಬೈಬಲ್, ಕುರಾನ್, ಧಮ್ಮಪದ, ತಿರುಕ್ಕುರುಳ್, ಭಗವದ್ಗೀತೆ ಇವೆಲ್ಲ ಸಾರ್ವಕಾಲಿಕ ಕೃತಿಗಳು. ಅವುಗಳ ವ್ಯಾಖ್ಯಾನಗಳು, ಅನುವಾದಗಳು ನೂರಾರು ಇದ್ದರೂ, ನಾವು ಅವನ್ನು ಓದಿದಾಗ ಹೊಸ ಕಿರಣಗಳು ಮೂಡುತ್ತವೆ. ಭಾರತದಲ್ಲಿ ನಾಸ್ತಿಕಮತ ಪ್ರಬಲವಾಗಿ ಆತ್ಮನ ಮತ್ತು ಪರಮಾತ್ಮನ ಅಸ್ತಿತ್ವವನ್ನೇ ಅಲ್ಲಗಳೆದಾಗ ಆಸ್ತಿಕ ಮತವನ್ನು ಸಂರಕ್ಷಿಸಲು ಶಂಕರಾಚಾರ್ಯರು ಭಗವದ್ಗೀತೆಯನ್ನೇ ಆಧಾರವಾಗಿ ಬಳಸಿಕೊಂಡರು. ಸಾಕಾರನಾದ ಸಗುಣಬ್ರಹ್ಮವನ್ನು ನಿರಾಕರಿಸುವವರು ಮೇಲೆ ಬಂದಾಗ ಅವರಿಗೆ ಉತ್ತರವನ್ನು ಕೊಡಲು ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಭಾಷ್ಯಗಳನ್ನು ಬರೆಯಬೇಕಾಯಿತು. ಅಂತೆಯೇ ಭಾರತ ದೇಶ ಪರಾಕ್ರಾಂತವಾಗಿದ್ದಾಗ ಭಾರತೀಯರ ದಾಸ್ಯ ಮನೋಭಾವವನ್ನು ತೊಲಗಿಸಿ ಧೈರ್ಯದಿಂದ ಹೋರಾಟದಲ್ಲಿ ತೊಡಗಿಸಲು ಬಾಲಗಂಗಾಧರ ತಿಲಕರು ಭಗವದ್ಗೀತೆಗೆ ಗೀತಾ ರಹಸ್ಯವೆಂಬ ಹೊಸ ವ್ಯಾಖ್ಯಾನವನ್ನು ಬರೆದರು. ಇಪ್ಪತ್ತನೆಯ ಶತಮಾನದಲ್ಲಿ ಕನ್ನಡದ ದಾರ್ಶನಿಕ ಕವಿ ಡಿ.ವಿ.ಜಿ. 'ಜೀವನ ಧರ್ಮ ಯೋಗ' ಎಂಬ ಹೊಸ ಗ್ರಂಥವನ್ನು ರಚಿಸಿದರು. ಇವೆಲ್ಲ ಉದಾಹರಣೆ ಮಾತ್ರ. ಪ್ರಪಂಚದ ನಾನಾ ಭಾಷೆಗಳಲ್ಲಿ ಧೀಮಂತರು ಎಲ್ಲ ಶತಮಾನಗಳಲ್ಲಿ, ಎಲ್ಲ ದಶಕಗಳಲ್ಲಿ ಭಗವದ್ಗೀತೆಯ ಮೇಲೆ ಭಾಷ್ಯಗಳನ್ನೂ, ವಿವರಣೆಗಳನ್ನೂ, ವ್ಯಾಖ್ಯಾನಗಳನ್ನೂ ಬರೆದಿದ್ದರು, ಬರೆಯುತ್ತಿದ್ದಾರೆ, ಬರೆಯುವವರು ಎಂಬುದರಲ್ಲಿ ಸಂಶಯವಿಲ್ಲ. ಇದರಿಂದ ಭಗವದ್ಗೀತೆಯ ಮೌಲ್ಯ ಎಲ್ಲ ಕಾಲದಲ್ಲೂ ಉಂಟು ಎಂಬುದು ನಿಚ್ಚಳ, ಅದನ್ನು ಯಾರೂ ಸಾಧಿಸಬೇಕಾಗಿಲ್ಲ.


"ನಾವು ಜ್ಞಾನಿಗಳು, ಸರ್ವಜ್ಞರು, ನಮಗೆ ಭಗವದ್ಗೀತೆಯಿಂದ ಯಾವ ಪ್ರಯೋಜನವೂ ಇಲ್ಲ. ನಮಗೆ ಅದು ಬೇಕಾಗಿಲ್ಲ" ಎಂದು ಹೇಳುವ ಮಹಾನುಭಾವರಿಗೆ ನಾವು ತಿಳಿಸಬೇಕಾದುದೂ ಏನಿಲ್ಲ. ಅಂತಹವರ ಮುಂದೆ ಭಗವದ್ಗೀತೆಯನ್ನು ಹೇಳಬೇಕಾಗಿಲ್ಲ ಎಂದು ಶ್ರೀ ಕೃಷ್ಣನೇ ಹೇಳಿದ್ದಾನೆ.

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ॥

ತಪಸ್ಸನ್ನು ಮಾಡಿಲ್ಲದವನಿಗೆ, ಭಕ್ತನಲ್ಲದವನಿಗೆ, ಕೇಳಲು ಆಸಕ್ತಿ ಇಲ್ಲದವನಿಗೆ, ಅಸೂಯೆಯಿಂದ ಕೂಡಿದವನಿಗೆ ಈ ಗ್ರಂಥವನ್ನು ಕೇಳಿಸುವುದು ಬೇಡ ಎಂದು ಭಗವಂತನೇ ಹೇಳಿದ್ದಾನಲ್ಲವೆ? ಆದ್ದರಿಂದ ಅವರ ಗೊಡವೆ ನಮಗೆ ಬೇಡ. ಶುಶ್ರೂಷುಗಳಿಗೆ, ಎಂದರೆ ಕೇಳಿ ತಿಳಿದುಕೊಳ್ಳಲು ಆಸಕ್ತಿ ಇದ್ದವರಿಗೆ ಮಾತ್ರ ಹೇಳಿದರೆ ಸಾಕು. ಜಿಜ್ಞಾಸುಗಳಿಗೆ ಭಗವದ್ಗೀತೆ ರತ್ನಗಳ ಗಣಿ.

ಭಗವದ್ಗೀತೆಯನ್ನು ಯೋಗ ಶಾಸ್ತ್ರ ಎಂದು ಕರೆದಿದ್ದಾರೆ. ಶ್ರೀ ಕೃಷ್ಣನು ಯೋಗೇಶ್ವರ. ಇಂದು ಇಪ್ಪತ್ತೊಂದನೆಯ ಶತಮಾನದಲ್ಲಿ ಅನೇಕ ಸಹಸ್ರಮಾನಗಳಷ್ಟು ಪ್ರಾಚೀನವಾದ ಯೋಗಕ್ಕೆ ವಿಶ್ವಮಾನ್ಯತೆ ದೊರಕಿದೆಯೆಂಬುದು ರಹಸ್ಯವೇನಲ್ಲ. ವಿಜ್ಞಾನ ಕ್ಷೇತ್ರದಲ್ಲಿ ಮುಂದಾಳು ಎಂದೆನಿಸಿರುವ ಅಮೇರಿಕದಲ್ಲಿ ಇಂದು ನೂರಾರು ಅಲ್ಲ, ಸಾವಿರಾರು ಯೋಗ ಕೇಂದ್ರಗಳಿವೆ. ಲಕ್ಷಾಂತರ ಮಂದಿ ಯೋಗಾಭ್ಯಾಸವನ್ನು ಮಾಡುತ್ತಿದ್ದಾರೆ. ಯೋಗದರ್ಶನದ ಅಂತರಂಗವನ್ನು ಅರಿತುಕೊಳ್ಳಲು ಭಗವದ್ಗೀತೆಯನ್ನೂ ಓದುತ್ತಿದ್ದಾರೆ. 'ಯೋಗಃ ಕರ್ಮಸು ಕೌಶಲಮ್' 'ಸಮತ್ವಂ ಯೋಗ ಉಚ್ಯತೇ' ಎಂಬ ಭಗವದ್ಗೀತಾವಾಕ್ಯಗಳ ಅರ್ಥದ ಬಗೆಗೆ ಕುತೂಹಲವನ್ನು ಹೊಂದಿದ್ದಾರೆ. ಎಂದಿನವರೆಗೆ ಯೋಗ ವಿಶ್ವದಲ್ಲಿರುವುದೋ ಅಂದಿನವರೆಗೆ ಭಗವದ್ಗೀತೆ ಪ್ರಸ್ತುತ.

ಭಗವದ್ಗೀತೆ ಬ್ರಹ್ಮ ವಿದ್ಯೆ ಎಂಬುದು ನಿಜವಾದರೂ ಅದು ನಿತ್ಯ ಜೀವನಕ್ಕೆ ಅತ್ಯಂತೋಪಯುಕ್ತವಾದ ವಿಷಯಗಳನ್ನೂ



ತಿಳಿಸುತ್ತದೆ. ಅದರ ಒಂದೊಂದು ಶ್ಲೋಕದ ಬಗೆಗೆ ಗಂಭೀರ ಚಿಂತನೆಯನ್ನು ಮಾಡಿ ಜನರು ತಮ್ಮ ಬದುಕನ್ನೇ ಪರಿವರ್ತಿಸಿಕೊಳ್ಳಬಹುದು. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ॥

ಮಾನವನು ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ತನ್ನನ್ನು ತಾನೇ ನಾಶ ಮಾಡಿಕೊಳ್ಳಬಾರದು. ಮನುಷ್ಯನಿಗೆ ಅವನೇ ಬಂಧು. ಅವನೇ ಶತ್ರುವೂ ಆಗಬಹುದು.

ಉದ್ಧರೇದಾತ್ಮನಾತ್ಮಾನಂ

ಮನುಷ್ಯನಿಗೆ ಪ್ರಕೃತಿಯು ಸಮಸ್ತವನ್ನೂ ಕೊಟ್ಟಿದೆ. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಬುದ್ಧಿ, ಮನಸ್ಸು ಇತ್ಯಾದಿ. ಇವುಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಯಾರು ಬೇಕಾದರೂ ಉದ್ಧಾರವನ್ನು ಮಾಡಿಕೊಳ್ಳಬಹುದು. ಹಾಗೆ ಮಾಡಿಕೊಳ್ಳದಿದ್ದರೆ ತನಗೆ ತಾನೇ ಮೋಸ ಮಾಡಿಕೊಂಡ ಹಾಗೆ. ತನ್ನಿಂದಲೇ ತನ್ನ ಉದ್ಧಾರ. ತಾನು ಪ್ರಯತ್ನ ಮಾಡದೇ ಇದ್ದರೆ ಯಾವ ದೇವರೂ ಉದ್ಧರಿಸಲಾರ.

ಅದೇ ರೀತಿಯಾಗಿ ನಾವು ಸರಿಯಾಗಿದ್ದರೆ ಯಾರೂ ನಮ್ಮನ್ನು ನಾಶಪಡಿಸಲಾರರು. ನಮ್ಮ ಉನ್ನತಿಗೂ ಅವನತಿಗೂ ನಾವೇ ಕಾರಣ. ಯಾರೋ ನಮ್ಮನ್ನು ಹಾಳು ಮಾಡಿದರೆಂದು ದೂರುವುದು ಸರಿಯಲ್ಲ. ಅನೇಕರು ತಮ್ಮನ್ನು ತಾವೇ ಹಾಳು ಮಾಡಿಕೊಳ್ಳುತ್ತಾರೆ. ಕೆಟ್ಟ ಚಟಗಳಿಗೆ ದಾಸರಾಗಿ ಆತ್ಮನಾಶವನ್ನು ಮಾಡಿಕೊಳ್ಳುತ್ತಾರೆ. ಇದು ಸರಿಯಲ್ಲವೆಂದು ಭಗವಂತನು ಎಚ್ಚರಿಸಿದ್ದಾನೆ. ಇದನ್ನೇ **ನಾತ್ಮಾನಮವಸಾದಯೇತ್** ಎಂದಿರುವುದು.

ಆತ್ಮೈವ ಹ್ಯಾತ್ಮನೋ ಬಂಧು :

ನಿನಗೆ ನೀನೇ ಬಂಧು. ಯಾರೋ ಬಂಧುವಾಗಿ ಬಂದರೆ ಅದಕ್ಕೆ ಯಾವುದೋ ಕಾರಣವಿರುತ್ತದೆ. ನಿಷ್ಕಾರಣ ಬಂಧು ನಿನಗೆ ನೀನೇ. ನಿನ್ನ ಮನಸ್ಸನ್ನು ಬುದ್ಧಿಯಿಂದ ಗೆದ್ದರೆ ನಿನಗೆ ನೀನೇ ಪರಮಬಂಧುವಾಗುವೆ. ಶ್ರೇಯಸ್ಸನ್ನೇ ಗುರಿಯಾಗಿಟ್ಟುಕೊಂಡರೆ ನಿನಗೆ ನೀನೇ ನಿಕಟಬಂಧು.

ಆತ್ಮೈವ ರಿಪುರಾತ್ಮನಃ

ಮನುಷ್ಯನು ತನಗೆ ತಾನೇ ಶತ್ರು. ಇಂದ್ರಿಯಗಳಿಗೆ ವಶನಾಗಿ ನಡೆದುಕೊಳ್ಳುವವನು ತನಗೆ ತಾನೇ ಮೃತ್ಯುವನ್ನು ತಂದುಕೊಳ್ಳುತ್ತಾನೆ. ರಾವಣನು ಇದಕ್ಕೆ ಒಳ್ಳೆಯ ಉದಾಹರಣೆ. ನಮ್ಮ ಸೋಮಾರಿತನದಿಂದ, ಜಿಹ್ವಾಚಾಪಲ್ಯದಿಂದ ನಮಗೆ ನಾವೇ ಶತ್ರುಗಳಾಗಿರುವುದು ನಮ್ಮ ಅನುಭವಕ್ಕೇ ಬಂದಿರುತ್ತದೆ.

ಇಂತಹ ಉಪದೇಶಕ್ಕೆ ಕಾಲದ, ದೇಶದ ಮಿತಿ ಇಲ್ಲ. ಇದು ಎಲ್ಲ ಕಾಲ ದೇಶಗಳಲ್ಲಿ ಸತ್ಯ. ಆದ್ದರಿಂದ ಇದನ್ನು ಬೋಧಿಸುವ ಭಗವದ್ಗೀತೆ ಸರ್ವ ಕಾಲಗಳಲ್ಲೂ ಪ್ರಸ್ತುತವೆನ್ನಬೇಕು.

ಇಂದು ನಾವು ಬುದ್ಧಿಶಾಲಿಗಳಾಗಿದ್ದೇವೆ. ನಾವೇ ತಾರ್ಕಿಕವಾಗಿ ಚಿಂತಿಸಬಲ್ಲೆವು. ವೈಜ್ಞಾನಿಕವಾಗಿ ಮುಂದುವರಿದಿದ್ದೇವೆ. ನಮಗೆ ಉಪದೇಶ ಬೇಕಿಲ್ಲ ಎನ್ನುವವರು ಪ್ರಪಂಚವನ್ನು ತೆರೆದ ಕಣ್ಣುಗಳಿಂದ ನೋಡಬೇಕು. ಪ್ರತಿದಿನವೂ ಎಷ್ಟು ಕೊಲೆಗಳಾಗುತ್ತಿವೆ, ಎಷ್ಟು ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಅಪಘಾತಗಳಲ್ಲಿ ಎಷ್ಟು ಮಂದಿ ಸಾಯುತ್ತಿದ್ದಾರೆ ಎಂಬುದನ್ನು ಯೋಚಿಸಬೇಕು. ನಾವು ಮನುಷ್ಯರು ಎಂದುಕೊಂಡು ಪ್ರಾಣಿಗಳಿಗಿಂತ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದೇವೆ. ಭಗವದ್ಗೀತೆಯಂತಹ ಗ್ರಂಥ ದ್ವಾಪರಯುಗಕ್ಕಿಂತ ಈಗ ಹೆಚ್ಚು ಆವಶ್ಯಕ ಎಂದುಕೊಂಡರೆ ತಪ್ಪಿಲ್ಲ.

ಭಗವದ್ಗೀತೆಯ ಇನ್ನೊಂದು ಉಪದೇಶ ಇಂದೂ ಹೇಗೆ ಪ್ರಸ್ತುತ ಎಂಬುದನ್ನು ನೋಡೋಣ–

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ ತ್ರಯಂ ತಜೇತ್॥

ನರಕಕ್ಕೆ ಮೂರು ಬಾಗಿಲುಗಳಿವೆ. ಅವು ಆತ್ಮನಾಶಕ್ಕೆ ಕಾರಣ. ಅವು ಯಾವುದೆಂದರೆ ಕಾಮ, ಕ್ರೋಧ, ಲೋಭ. ಈ ಮೂರನ್ನೂ ಮಾನವನು ತ್ಯಜಿಸಬೇಕು.

ಇದು ಎಲ್ಲ ಕಾಲಕ್ಕೂ ಸಲ್ಲುವ ಮಾತಲ್ಲವೇ? ವಿಧಾನ ಸಭಾ ಸದಸ್ಯರು, ಸಂಸದರೂ ಆಗಿದ್ದವರು ಕಾಮವಶರಾಗಿ ಇಂದು ಕಾರಾಗೃಹದಲ್ಲಿ ಕೈದಿಗಳಾಗಿ ಕಂಬಿ ಎಣಿಸುತ್ತಿರುವುದನ್ನು ನೋಡುತ್ತಿದ್ದೇವೆ. ಹಾಗೆಯೇ ಜನಪ್ರಿಯ ನಟರಾಗಿ, ಅಭಿಮಾನಿಗಳ ಕಣ್ಮಣಿಯಾಗಿದ್ದವರು ಕ್ರೋಧಕ್ಕೆ ಈಡಾಗಿ ಮಾಡಬಾರದ ತಪ್ಪನ್ನು ಮಾಡಿ ಈಗ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಬೇರೆ ಸುಖ ಹೋಗಲಿ, ತಮಗೆ ಇಷ್ಟವಾದ ಊಟವನ್ನು ಮಾಡುವುದಕ್ಕೂ ಅವರಿಗೆ ಸ್ವಾತಂತ್ರ್ಯವಿಲ್ಲ. ಇದು ಸಿನಿಮಾ ಕಥೆಯಲ್ಲ. ಪ್ರಪಂಚದ ವಾಸ್ತವ. ಕೋಪದ ಆವೇಶಕ್ಕೆ ಒಳಗಾಗಿ ಏನೂ ಮಾಡಬೇಡ. ಅದು ನರಕದ ದಾರಿ ಎಂದು ಭಗವದ್ಗೀತೆ ಹೇಳುವ ಮಾತು ಸತ್ಯಸ್ಯ ಸತ್ಯವಲ್ಲವೆ?

ಇನ್ನು ಲೋಭದ ವಿಚಾರ. ದೊಡ್ಡ ರಾಜಕಾರಣಿಗಳು, ಉನ್ನತಾಧಿಕಾರದಲ್ಲಿ ಇರುವವರು ತಮ್ಮ ಬದುಕಿಗೆ ಸಾಕಾಗುವಷ್ಟನ್ನು ಗಳಿಸಿದ್ದರೂ, ಮಕ್ಕಳಿಗೆ ಬೇಕಾದಷ್ಟನ್ನು ಉಳಿಸಿದ್ದರೂ, ಇನ್ನೂ ಬೇಕು, ಮತ್ತೂ ಬೇಕು ಎಂಬ ಲೋಭದಿಂದ ಏನೇನನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ ಎಂಬುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಶ್ರೀ ಕೃಷ್ಣನ ಮಾತನ್ನು ಜನರು ಅನುಸರಿಸಿ ಲೋಭವನ್ನು ತ್ಯಜಿಸಿದರೆ ಇಳೆಯೇ ಸ್ವರ್ಗವಾಗುತ್ತದೆ. ಇದು ದ್ವಾಪರಯುಗಕ್ಕಿಂತ ಇಂದು ಹೆಚ್ಚು ಪ್ರಸ್ತುತ.

ಇಂದು ಬಹುದೊಡ್ಡ ಸಮಸ್ಯೆಯನ್ನು ಒಡ್ಡಿರುವುದು ಧರ್ಮಾಂಧತೆ. ನಾನು ಪೂಜಿಸುವ ದೇವರೇ ದೊಡ್ಡವನು, ನನ್ನ ಪೂಜಾವಿಧಾನವನ್ನೇ ಎಲ್ಲರೂ ಅನುಸರಿಸಬೇಕು, ಬೇರೆಯವರೆಲ್ಲ ತಪ್ಪುದಾರಿಗಳು ಎಂಬ ದುರಾಗ್ರಹ ಅನೇಕ ಕಷ್ಟಗಳಿಗೆ ಕಾರಣವಾಗಿದೆ. ಇಂದಿನ ಆವಶ್ಯಕತೆ ವಿಶಾಲದೃಷ್ಟಿ. ಭಗವಂತನನ್ನು ಸೇರಲು ನಾನಾ ಮಾರ್ಗಗಳಿವೆ. ಅವರು ಅವರಿಗೆ ಇಷ್ಟವಾದ, ಅವರಿಗೆ ಅನುಕೂಲವಾದ ದಾರಿಯಲ್ಲಿ ನಡೆಯಲಿ, ನಾವು ನಮ್ಮ ದಾರಿಯಲ್ಲಿ ನಡೆಯೋಣ, ನಮ್ಮ ದಾರಿಗೇ ಎಲ್ಲರೂ ಬರಬೇಕೆಂಬ ಒತ್ತಾಯವನ್ನು ಮಾಡದಿರೋಣ. ನೂರು ದಿಕ್ಕುಗಳಿಂದ ನೋಡಿದಾಗ ಒಂದೇ ಬೆಟ್ಟ ನೂರು ರೀತಿಗಳಲ್ಲಿ ಆಕಾರವನ್ನು ತಳೆಯಬಹುದಲ್ಲವೆ? ಎಂಬುದು ಮುಖ್ಯ. ದಾರಿ ಬೇರೆಯಾದರೂ ಗುರಿ ಒಂದೇ. ಶ್ರೀ ಕೃಷ್ಣ ಹೇಳಿದ್ದಾನೆ –

ಯೇಽಪ್ಯನ್ಯ ದೇವತಾ ಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ।
ತೇಽಪಿ. ಮಾಮೇವ ಕೌಂತೇಯ
ಯಜಂತ್ಯವಿಧಿಪೂರ್ವಕಮ್ ॥

'ಬೇರೆ ಬೇರೆ ದೇವತೆಗಳ ಭಕ್ತರೂ ಶ್ರದ್ಧೆಯಿಂದ ಆಯಾ ದೇವತೆಗಳನ್ನು ಪೂಜಿಸುತ್ತಾರೆ. ಈ ವಿಧಾನವಲ್ಲದೆ ಬೇರೆ ವಿಧಾನದಿಂದ ಅವರೂ ನನ್ನನ್ನೇ ಪೂಜಿಸಿದಂತೆ'.

ಈ ತೀರಿಯಾದ ವೈಚಾರಿಕ ಚಿಂತನೆಗಳ ಖನಿ ಭಗವದ್ಗೀತೆ. ಪೂರ್ವಾಗ್ರಹವಿಲ್ಲದೆ ಗುಣಗ್ರಾಹಿಗಳು ಇದನ್ನು ಓದಿದಾಗ ನೂರು ಪಾಠಗಳನ್ನು ಕಲಿಯಬಹುದು. ಭಗವದ್ಗೀತೆಯಲ್ಲಿ ದೋಷಗಳನ್ನು ತೋರಿಸುವವರು ಇಲ್ಲವೆಂದಲ್ಲ. ಅವರ ಖಂಡನೆಗಳೂ ಈ ಗ್ರಂಥಕ್ಕೆ ಹೊಳಪನ್ನು ಕೊಟ್ಟಿವೆ. ಚಿನ್ನವು ಬೆಂಕಿಯಲ್ಲಿ ಬಿದ್ದಾಗ ಅದರ ಶುದ್ಧಿ ಹೆಚ್ಚುತ್ತದೆ. ಟೀಕೆ, ಟಿಪ್ಪಣಿ, ಖಂಡನೆ, ಮಂಡನೆ ಗ್ರಂಥದ ಪ್ರಸ್ತುತತೆಗೆ ಸಾಕ್ಷಿಗಳು.

ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈ: ಶಾಸ್ತ್ರವಿಸ್ತರೈಃ।
ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ ವಿನಿಃಸೃತಾ॥

ಡಿವೈಡರ್‌ಗೆ ಅಪ್ಪಳಿಸಿ ಕಾರು ಪಲ್ಟಿ: ಇಬ್ಬರು ಯುವಕರಿಗೆ ಗಾಯ

ದಟ್ಟಗಳ್ಳಿ ಬಳಿ ರಿಂಗ್ ರಸ್ತೆಯಲ್ಲಿ ಮಂಗಳವಾರ ದುರ್ಘಟನೆ

ಮೈಸೂರು, ಜು. 30(ಆರ್‌ಕೆ)– ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ಮೂರು ಸುತ್ತು ಪಲ್ಟಿಯಾದ ಪರಿಣಾಮ ಯುವಕರಿಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ದಟ್ಟಗಳ್ಳಿಯ ಕೆಇಬಿ ಜಂಕ್ಷನ್ ಬಳಿ ರಿಂಗ್ ರಸ್ತೆಯಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ರಾಮಕೃಷ್ಣನಗರ ನಿವಾಸಿ ಪ್ರೀತಮ್(24) ಹಾಗೂ ಕುವೆಂಪುನಗರ ಪಂಚಮಂತ್ರ ರಸ್ತೆಯ ಗೌತಮ್(20) ಗಾಯಗೊಂಡವರಾಗಿದ್ದು, ಅವರನ್ನು ಸುಯೋಗ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬೋಗಾದಿ ಕಡೆಯಿಂದ ಬರುತ್ತಿದ್ದ ಮಾರುತಿ ಬ್ರೆಜ್ಜಾ (ಕೆಎ 09–ಎಂಸಿ 4969) ಕಾರು ದಟ್ಟಗಳ್ಳಿಯ ಕೆಇಬಿ ಜಂಕ್ಷನ್ ಸಮೀಪ ಸಾರಾ ಕನ್ವೆನ್ಷನ್ ಹಾಲ್ ಎದುರು ಬೆಳಗ್ಗೆ 11.15 ಗಂಟೆ ವೇಳೆಯಲ್ಲಿ ರಸ್ತೆ ವಿಭಜಕಕ್ಕೆ ಅಪ್ಪಳಿಸಿದ ಬಳಿಕ ಸಿನಿಮೀಯ ಶೈಲಿಯಲ್ಲಿ ಉರುಳಿ ಬಿದ್ದಿತು. ಘಟನೆಯಿಂದ ತೀವ್ರ ಗಾಯಗಳಾಗಿ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಯುವಕರನ್ನು ಸಾರ್ವಜನಿಕರ ಸಹಾಯದಿಂದ ಕೆ.ಆರ್. ಸಂಚಾರ ಠಾಣೆ ಪೊಲೀಸರು ಹತ್ತಿರದ ಆಸ್ಪತ್ರೆಗೆ ಕರೆದೊಯ್ದು ದಾಖಲು ಮಾಡಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸ್ಥಳ ಮಹಜರು ನಡೆಸಿ ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.



ಮೈಸೂರಿನ ದಟ್ಟಗಳ್ಳಿಯ ಕೆಇಬಿ ಜಂಕ್ಷನ್ ಬಳಿ ಮಂಗಳವಾರ ಬೆಳಗ್ಗೆ ರಿಂಗ್ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ಮೂರು ಸುತ್ತು ಪಲ್ಟಿಯಾಗಿದ್ದ ಕಾರನ್ನು ಕ್ರೇನ್ ಮೂಲಕ ಸ್ಥಳಾಂತರಿಸುತ್ತಿರುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು ಪಾದಯಾತ್ರೆ ಮುಂದೂಡಿಕೆಗೆ ಜೆಡಿಎಸ್ ಕೋರ್ ಕಮಿಟಿ ಸಭೆ ನಿರ್ಣಯ



ಜಿ.ಟಿ.ದೇವೇಗೌಡ

ಬೆಂಗಳೂರು: ರಾಜ್ಯದ ಹಲವೆಡೆ ಮಳೆ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾದರೆ, ಕೆಲವೆಡೆ ತೀವ್ರ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವುದರಿಂದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ –ಜೆಡಿಎಸ್ ಹಮ್ಮಿಕೊಂಡಿರುವ ಪಾದಯಾತ್ರೆಯನ್ನು ಮುಂದೂಡಲು ಜೆಡಿಎಸ್ ಕೋರ್ ಕಮಿಟಿ ಸಭೆ ನಿರ್ಣಯ ಕೈಗೊಂಡಿದೆ. ಪಕ್ಷದ ಕಚೇರಿ ಜೆ.ಪಿ.ಭವನದಲ್ಲಿ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಮುಡಾ ಹಗರಣದ ವಿರುದ್ಧ ಆ.3ರಿಂದ ಬೆಂಗಳೂರಿನಿಂದ ಮೈಸೂರಿನವರಗೆ ನಡೆಸಲು ಕೈಗೊಂಡಿರುವ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ಬಿಜೆಪಿ ಮತ್ತು ಜೆಡಿಎಸ್ ವರಿಷ್ಠರಿಗೆ ಮನವಿ ಮಾಡಲು ನಿರ್ಧರಿಸಲಾಯಿತು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಪಕ್ಷದ ಸ್ಥಳೀಯ ನಾಯಕರು ಪಾದಯಾತ್ರೆ ಮುಂದೂಡಿಕೆಗೆ ತೀವ್ರ ಒತ್ತಡ ಹಾಕಿದ್ದಾರೆ. ಮಳೆ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳು ಆರಂಭಗೊಂಡಿವೆ. ರೈತರು ಉಳುಮೆ ಕಾರ್ಯದಲ್ಲಿ ತೊಡಗಿರುತ್ತಾರೆ. ಅಲ್ಲದೇ, ಕೆಲವೆಡೆ ತೀವ್ರತರ ಮಳೆಯಿಂದಾಗಿ ಪ್ರವಾಹ ಭೀತಿ ತಲೆದೋರಿದ್ದು, ಜನತೆ ಸಂಕಷ್ಟದಲ್ಲಿದ್ದಾರೆ. ಇಂತಹ ಸಮಯದಲ್ಲಿ ಜನಪ್ರತಿನಿಧಿಗಳಾಗಿ ಜನತೆಯ ಜೊತೆ ನಿಲ್ಲಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪಾದಯಾತ್ರೆ ದಿನವನ್ನು ಮುಂದೂಡುವಂತೆ ಒತ್ತಾಯಗಳು ಕೇಳಿ ಬಂದಿವೆ ಎಂದು ತಿಳಿಸಿದರು.

ಕೋರ್ ಕಮಿಟಿಯಲ್ಲಿ ವಿಸ್ತೃತ ಚರ್ಚೆ: ಪಕ್ಷದ ಸ್ಥಳೀಯ ಮುಖಂಡರ ಅಭಿಪ್ರಾಯಗಳ ಕುರಿತು ಕೋರ್ ಕಮಿಟಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಅಂತೆಯೇ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಪಕ್ಷದ ವರಿಷ್ಠರಾದ ಎಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಪಾದಯಾತ್ರೆ ದಿನಾಂಕವನ್ನು ಮುಂದೂಡುವಂತೆ ಮನವಿ ಮಾಡಲಾಗುವುದು. ಮುಡಾ ವಿಚಾರ ಸಂಬಂಧ ಕಾಂಗ್ರೆಸ್ ವಿರುದ್ಧ ಹೋರಾಟವನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಜನರ ಹಿತಾಸಕ್ತಿಯಿಂದಾಗಿ ಪಾದಯಾತ್ರೆ ಮುಂದೂಡುವುದು ಒಳಿತು ಎಂಬುದು ಕೋರ್ ಕಮಿಟಿಯ ನಿರ್ಣಯವಾಗಿದೆ. ಈ ಬಗ್ಗೆ ಬಿಜೆಪಿ ಮತ್ತು ಜೆಡಿಎಸ್ ವರಿಷ್ಠರ ಮನವರಿಕೆ ಮಾಡಿಕೊಡಲಾಗುವುದು. ಪಕ್ಷದ ಸ್ಥಳೀಯರ ಅಭಿಪ್ರಾಯಗಳನ್ನು ಮುಂದಿಟ್ಟು ತಿಳಿಸಲಾಗುವುದು ಎಂದರು. ಮುಂಗಾರು ಅಧಿವೇಶನದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮುಡಾ ಹಗರಣ ಸಂಬಂಧ ಸರ್ಕಾರ ವಿರುದ್ಧ ಬಿಜೆಪಿ – ಜೆಡಿಎಸ್ ಸಮರ್ಥ ವಾಗಿ ಹೋರಾಟ ನಡೆಸಿದೆ. ಪ್ರತಿಪಕ್ಷಗಳ ಹೋರಾಟವನ್ನು ಲೆಕ್ಕಿಸದೇ ಸರ್ಕಾರ ಸದನವನ್ನು ಅರ್ಧಕ್ಕೆ ಮೊಟಕುಗೊಳಿಸಿತು. ಹೀಗಾಗಿ ಸರ್ಕಾರದ ನಡೆಯನ್ನು ವಿರೋಧಿಸಿ ಬೆಂಗಳೂರಿನಿಂದ ಮೈಸೂರಿನವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಎರಡು ಪಕ್ಷದ ಮುಖಂಡರು ಪಾದಯಾತ್ರೆ ಕೈಗೊಳ್ಳುವ ನಿರ್ಣಯ ಕೈಗೊಂಡರು. ತೀರ್ಮಾನ ಕೈಗೊಳ್ಳುವ ವೇಳೆ ಮಳೆಯ ಅಬ್ಬರ ಇರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಮಳೆಯ ತೀವ್ರತೆಯಿಂದ ಪ್ರವಾಹ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಮುಂದೂಡಿಕೆಗೆ ಮನವಿ ಮಾಡಲು ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದರು. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಕೇರಳದಲ್ಲಿ ಮಳೆಯಿಂದ ಜನರ ಜೀವನ ಸಂಕಷ್ಟಕ್ಕೀಡಾಗಿದೆ. ಅದೇ ರೀತಿ ಕರ್ನಾಟಕದಲ್ಲೂ ಸಂಕಷ್ಟಕ್ಕೆ ಸಿಲುಕುವ ಸ್ಥಿತಿ ಇದೆ. ಪಾದಯಾತ್ರೆಗೆ ಸಾಕಷ್ಟು ಜನ ಬರ್ತಾರೆ. ಅವರ ಆರೋಗ್ಯವು ಮುಖ್ಯ ಆದ್ದರಿಂದ ಪಾದಯಾತ್ರೆ ಮುಂದೂಡಿಕೆ ಮಾಡಲು ಹೇಳುತ್ತೇವೆ ಎಂದು ತಿಳಿಸಿದರು. ಈ ವೇಳೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಮಾಜಿ ಶಾಸಕ ಸಾ.ರಾ. ಮಹೇಶ್, ಎಚ್.ಕೆ. ಕುಮಾರಸ್ವಾಮಿ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಮುಡಾ, ವಾಲ್ಮೀಕಿ ಹಗರಣ ಖಂಡಿಸಿ; ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ, ಜೆಡಿಎಸ್ ಪಾದಯಾತ್ರೆ

ಪಾದಯಾತ್ರೆಯ ಸಮಗ್ರ ಪಟ್ಟಿ ಬಿಡುಗಡೆ ಮಾಡಿದ ಬಿಜೆಪಿ



ಮೈಸೂರು, ಜು.30(ಬಿಎಲ್‌ಯು)– ಮುಡಾ ಹಾಗೂ ವಾಲ್ಮೀಕಿ ಹಗರಣ ಖಂಡಿಸಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಬೆಂಗಳೂರಿನಿಂದ ಮೈಸೂರು ತನಕ ನಡೆಸುತ್ತಿರುವ ಪಾದಯಾತ್ರೆ ಮಾರ್ಗ ಹಾಗೂ ಇನ್ನಿತರೆ ಮಾಹಿತಿಯ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದೆ.

ಆಗಸ್ಟ್ 3 ರಂದು ಬೆಂಗಳೂರಿನ ಕೆಂಗೇರಿಯ ಕೆಂಪಮ್ಮ ದೇವಸ್ಥಾನದ ಬಳಿಯಿಂದ ಪಾದಯಾತ್ರೆ ಆರಂಭವಾಗಲಿದೆ. ಅಂದು ಮಧ್ಯಾಹ್ನ ಬಿಡದಿಯ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿದ್ದು, ರಾತ್ರಿ ಬಿಡದಿಯ ಶ್ರೀ ಮಂಜುನಾಥ ಕನ್ವೆನ್ಷನ್ ಹಾಲ್‌ನಲ್ಲಿ ವಾಸ್ತವ್ಯ ಹೂಡಲಾಗುತ್ತದೆ. ಅಂದು ಪಾದಯಾತ್ರೆ 16 ಕಿಲೋಮೀಟರ್ ಕ್ರಮಿಸಲಿದೆ.

ಆಗಸ್ಟ್ 4ರಂದು ಬೆಳಿಗ್ಗೆ ಬಿಡದಿಯಿಂದ ಹೊರಡಲಿದ್ದು, ರಾಮನಗರದ ಶ್ರೀ ಪದ್ಮಾವತಿ ದೇವಸ್ಥಾನದಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ಕೆಂಗಲ್‌ನ ಕೆವಿಕೆ ಕನ್ವೆನ್ಷನ್ ಹಾಲ್‌ನಲ್ಲಿ ವಾಸ್ತವ್ಯ ಹೂಡಲಾಗುತ್ತದೆ. ಅಂದು 22 ಕಿಲೋಮೀಟರ್ ಸಾಗಲಿದೆ. ಆಗಸ್ಟ್ 5ರಂದು ಕೆಂಗಲ್‌ನಿಂದ ಬೆಳಿಗ್ಗೆ ಪಾದಯಾತ್ರೆ ಆರಂಭವಾಗಲಿದ್ದು, ಮಧ್ಯಾಹ್ನ ವಾಳೂರಿನ ಶ್ರೀ ಚೌಡೇಶ್ವರಿ ಕನ್ವೆನ್ಷನ್ ಹಾಲ್‌ನಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ನಿಡಘಟ್ಟದ ಸುಮಿತ್ರಾದೇವಿ ಕನ್ವೆನ್ಷನ್ ಹಾಲ್‌ನಲ್ಲಿ ವಾಸ್ತವ್ಯ ಹೂಡಲಾಗುತ್ತದೆ. ಅಂದು 20 ಕಿಲೋಮೀಟರ್ ಕ್ರಮಿಸಲಿದೆ.

ಆಗಸ್ಟ್ 6ರಂದು ಬೆಳಿಗ್ಗೆ ನಿಡಘಟ್ಟದಿಂದ ಹೊರಡಲಿದ್ದು, ಮಧ್ಯಾಹ್ನ ಮದ್ದೂರಿನ ಬಾಲಾಜಿ ಕನ್ವೆನ್ಷನ್ ಹಾಲ್‌ನಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ಮಂಡ್ಯದ ಶಶಿಕಿರಣ ಕನ್ವೆನ್ಷನ್ ಹಾಲ್‌ನಲ್ಲಿ ವಾಸ್ತವ್ಯ. ಅಂದು ಪಾದಯಾತ್ರೆ 20 ಕಿಲೋಮೀಟರ್ ಸಾಗಲಿದೆ. ಆಗಸ್ಟ್ 7ರಂದು ಬೆಳಿಗ್ಗೆ ಮಂಡ್ಯದಿಂದ ಪಾದಯಾತ್ರೆ ಆರಂಭವಾಗಲಿದ್ದು, ಸುಮಾ ರವಿ ಕನ್ವೆನ್ಷನ್ ಹಾಲ್‌ನಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ತೂಬಿನಕೆರೆಯಲ್ಲಿ ವಾಸ್ತವ್ಯ ಹೂಡಲಾಗುತ್ತದೆ. ಅಂದು ಪಾದಯಾತ್ರೆ 16 ಕಿಲೋಮೀಟರ್ ಕ್ರಮಿಸಲಿದೆ.

ಆಗಸ್ಟ್ 8ರಂದು ತೂಬಿನಕೆರೆಯಿಂದ ಪಾದಯಾತ್ರೆ ಆರಂಭವಾಗಲಿದ್ದು, ಗೌಡಗಳ್ಳಿಯಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ಶ್ರೀರಂಗಪಟ್ಟಣದ ಶ್ರೀ ಮಂಜುನಾಥ ಕಲ್ಯಾಣ ಮಂಟಪದಲ್ಲಿ ವಾಸ್ತವ್ಯ. ಅಂದು 17 ಕಿಲೋಮೀಟರ್ ಕ್ರಮಿಸಲಿದೆ. ಆಗಸ್ಟ್ 9ರಂದು ಬೆಳಿಗ್ಗೆ ಶ್ರೀರಂಗಪಟ್ಟಣದಿಂದ ಪಾದಯಾತ್ರೆ ಆರಂಭವಾಗಿ, ಮೈಸೂರಿನಲ್ಲಿ ವಾಸ್ತವ್ಯ ಹೂಡಲಾಗುತ್ತದೆ. ಅಂದು ಪಾದಯಾತ್ರೆ 10 ಕಿಲೋಮೀಟರ್ ಸಾಗಲಿದೆ. ಆಗಸ್ಟ್ 10ರಂದು ಮೈಸೂರಿನಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ. ಪಾದಯಾತ್ರೆಯಲ್ಲಿ ಸಾವಿರಾರು ಜನರು ಭಾಗವಹಿಸಲಿದ್ದು, ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರು, ಸಂಸದರು ಪಾಲ್ಗೊಳ್ಳಲಿದ್ದಾರೆ.

ಮುಡಾ ಹಗರಣದಲ್ಲಿ ಅಸಹಾಯಕರಾಗಿ ಅಹಿಂದ ರಕ್ಷಣೆ ಪಡೆಯಲು ಯತ್ನಿಸುವ ನಿಮಗೆ

ನಿಮ್ಮ ಪಕ್ಷದವರೇ 'ಶರಪಂಜರ' ಸೃಷ್ಟಿಸುತ್ತಿದ್ದಾರೆ

ಮುಖ್ಯಮಂತ್ರಿ ಸಿದ್ದರಾಮಯ್ಯರ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ



ಕುಮಾರಸ್ವಾಮಿ

ಬೆಂಗಳೂರು, ಜು.30(ಕೆಎಂಶಿ)– ಮುಡಾ ಭೂಮಿಯನ್ನು ಸಿದ್ದರಾಮಯ್ಯ ಅವರ ಕುಟುಂಬ ಮುಕ್ಕಿದೆ ಎಂಬುದಾಗಿ ಇಡೀ ದೇಶವೇ ಮಾತನಾಡುತ್ತಿದ್ದು, ಈಗ ಮುಖ್ಯಮಂತ್ರಿ ಅವರ ಸಮಾಜವಾದಿ ಮುಖವಾಡ, ಅಹಿಂದ ಅಲಂಕಾರ, ಸತ್ಯವಂತನ ಸಿಂಗಾರ ಎಲ್ಲವೂ ಕಳಚಿ ಬಿದ್ದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಠೋರ ಶಬ್ದಗಳಿಂದ ಟೀಕಾಪ್ರಹಾರ ಮಾಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮುಖ್ಯಮಂತ್ರಿ ಕುಟುಂಬದ ವಿರುದ್ಧದ ಮುಡಾ ಅವ್ಯವಹಾರದ ದಾಖಲೆಗಳು ಹಾದಿಬೀದಿಯಲ್ಲಿ ಹೊರಳಾಡುತ್ತಿವೆ, ಅಸಹ್ಯವಾಗುವಷ್ಟು ಅನಾಚಾರ ಮಾಡಿ ಅಸಹಾಯಕರಾಗಿ ಅಹಿಂದ ರಕ್ಷಣೆ ಪಡೆಯಲು ಯತ್ನಿಸುತ್ತಿರುವ ನಿಮಗೆ, ನಿಮ್ಮ ಪಕ್ಷದವರೇ 'ಶರಪಂಜರ' ಸೃಷ್ಟಿಸುತ್ತಿದ್ದಾರೆ ಎಂದಿದ್ದಾರೆ. ಮುಡಾ ನನಗೆ ನಿವೇಶನ ಹಂಚಿದೆ ನಿಜ, ಸ್ವಾಧೀನ ಪತ್ರವನ್ನೂ ನೀಡಿದೆ, ಅದನ್ನು ನಾನು ಮಾಧ್ಯಮಗಳ ಮುಂದೆಯೂ ತೋರಿಸಿದ್ದೇನೆ. ಆದರೆ, ಹಂಚಿದ ನಿವೇಶನವನ್ನು ಸುಪರ್ದಿಗೆ ಕೊಡಬೇಕಲ್ಲವೇ, ಏಕೆ ಇದುವರೆಗೂ ಕೊಟ್ಟಿಲ್ಲ ಎಂದು ಪ್ರಶ್ನಿಸಿದ್ದಾರೆ.

ವಸ್ತುಸ್ಥಿತಿ ಹೀಗಿರುವಾಗ, ಮುಡಾ ಸಿದ್ದರಾಮಯ್ಯ ಮಾಡಿದ ಸಂಶೋಧನೆ ಏನಿದೆ, ಸುಳ್ಳು ಸಂಶೋಧಕರೇ, ನಿಮ್ಮ ಮುಖಕ್ಕೆ ಮೆತ್ತಿಕೊಂಡಿರುವ ಕೊಳಕನ್ನು ನನ್ನ ಮೇಲೆ ಹಾಗೂ ಇತರರ ಮೇಲೆ ಸಿಡಿಸಲು ಯತ್ನಿಸಿ ಲಜ್ಜೇಡಿತನದ ಪರಮಾವಧಿ ಮೆರೆದಿದ್ದೀರಿ. ಸಿದ್ದರಾಮಯ್ಯನವರೇ ನಿಮಗೆ ಸುಳ್ಳು ಹೇಳುವುದು ಅಭ್ಯಾಸವೋ, ಆಚಾರವೋ, ಚಾಳಿಯೋ ಗೊತ್ತಿಲ್ಲ, ಹಸಿ ಹಸಿ ಸುಳ್ಳು ಹೇಳುತ್ತಿರುವ ನಿಮ್ಮಲ್ಲಿ ನೈತಿಕತೆ ಸತ್ತಿದೆ, ನಮ್ಮ ಬಗ್ಗೆ ಮಾತನಾಡುವ ಯೋಗ್ಯತೆಯೂ ನಿಮಗಿದೆ ಎನಿಸುವುದಿಲ್ಲ. ಮುಡಾ ಹಗರಣ ವಿಷಯದಲ್ಲಿ ಆರೋಪಿ ಸ್ಥಾನದಲ್ಲಿರುವ ನೀವು ನನ್ನ ಹಾಗೂ ನನ್ನ ತಂದೆಯವರ ಬಗ್ಗೆ ಆಡುತ್ತಿರುವ ಸುಳ್ಳುಗಳು ನಿಮ್ಮ ಯೋಗ್ಯತೆಗೆ ತಕ್ಕುದಲ್ಲ ಎಂದು ಟೀಕಿಸಿದ್ದಾರೆ.

ಕುಮಾರಸ್ವಾಮಿ ರಾಜ್ಯಕ್ಕೆ ಕೈಗಾರಿಕೆ ತರಲಿ, ರಾಜ್ಯಕ್ಕೆ ಒಳ್ಳೆಯದು ಮಾಡಲಿ ಎನ್ನುತ್ತೀರಿ. ಏನು ಮಾಡಬೇಕೆಂದು ನನಗೆ ಗೊತ್ತಿದೆ. ಕೇಂದ್ರ ಸಚಿವನಾಗಿ ಅಧಿಕಾರ ವಹಿಸಿಕೊಂಡು ಇನ್ನೂ ಎರಡು ತಿಂಗಳು ಕಳೆದಿಲ್ಲ, ರಾಜ್ಯದ ಕೆಲಸ ಮಾಡೋಣವೆಂದರೆ ನಿಮ್ಮಗಳ ಅಸಹಕಾರ, ಅಸೂಯೆ ಅಡ್ಡಿಯಾಗಿದೆ. ಒಂದು ನಾಲಿಗೆ ಮೇಲೆ ಸಹಕಾರ, ಇನ್ನೊಂದು ನಾಲಿಗೆಯಲ್ಲಿ ಅಸಹಕಾರ ಅಲ್ಲವೇ ಸಿದ್ದರಾಮಯ್ಯನವರೇ ಎಂದಿದ್ದಾರೆ.

ಹನ್ನೊಂದು ವರ್ಷದ ಬಾಲಕ ಆತ್ಮಹತ್ಯೆ!

ಮೈಸೂರು, ಜು.30– ಹನ್ನೊಂದು ವರ್ಷದ ಬಾಲಕ ನೇಣು ಬಿಗಿದ ಸ್ಥಿತಿಯಲ್ಲಿ ಸಾವನ್ನಪ್ಪಿರುವ ಘಟನೆ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ. ಮೈಸೂರಿನ ಪ್ರತಿಷ್ಠಿತ ಶಾಲೆಯೊಂದರಲ್ಲಿ ಐದನೇ ತರಗತಿ ಓದುತ್ತಿದ್ದ ಮೃತ ಬಾಲಕ, ಇಂದು ಶಾಲೆಯಲ್ಲಿ ಪೋಷಕರ ಸಭೆ ಇದ್ದ ಕಾರಣ ಮಧ್ಯಾಹ್ನ 2.30ಕ್ಕೆ ಮನೆಗೆ ಬಂದಿದ್ದ. ದೇವಾಲಯಕ್ಕೆ ಹೋಗಿದ್ದ ತಾಯಿ ಮಧ್ಯಾಹ್ನ 3.30ಕ್ಕೆ ಮನೆಗೆ ಬಂದಾಗ ಅವರ ದುಪ್ಪಟದಲ್ಲೇ ಮತ್ರ ನೇಣು ಬಿಗಿದ ಸ್ಥಿತಿಯಲ್ಲಿದ್ದ. ಕುಣಿಕೆಯಿಂದ ಇಳಿಸಿ ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತಾದರೂ ಆತ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಕಲಿಕೆಯಲ್ಲೂ ಚುರುಕಾಗಿದ್ದ ಬಾಲಕ, ಫುಟ್‌ಬಾಲ್ ಇನ್ನಿತರ ಕ್ರೀಡೆಯಲ್ಲೂ ಆಸಕ್ತಿ ಹೊಂದಿದ್ದ. ಪೋಷಕರ ಸಭೆಯಲ್ಲೂ ಶಿಕ್ಷಕರು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದರು ಎಂದು ತಿಳಿದುಬಂದಿದೆ. ಮೇಲ್ನೋಟಕ್ಕೆ ಬಾಲಕ ಆತ್ಮಹತ್ಯೆ ಮಾಡಿಕೊಂಡಿರುವಂತೆ ಕಂಡುಬಂದಿದ್ದು, ಈ ಸಂಬಂಧ ನಜರ್‌ಬಾದ್ ಠಾಣೆ ಪೊಲೀಸರು ಅನುಮಾನಾಸ್ಪದ ಸಾವು (ಯುಡಿಆರ್) ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಬುಧವಾರ ಮರಣೋತ್ತರ ಪರೀಕ್ಷೆ ಬಳಿಕ ಪೋಷಕರಿಗೆ ಬಾಲಕನ ದೇಹವನ್ನು ಹಸ್ತಾಂತರಿಸಲಿದ್ದು, ನಂತರ ಅಂತ್ಯಕ್ರಿಯೆ ನಡೆಯಲಿದೆ.

ವಯನಾಡು ದುರಂತದ ಬಗ್ಗೆ 20 ದಿನಗಳ ಹಿಂದೆಯೇ ಹೇಳಿದ್ದೆ!

ರಾಜ್ಯದಲ್ಲಿ ಜಲಕಂಟಕ, ಪ್ರಕೃತಿ ವಿಕೋಪ ಮುಂದುವರೆಯುತ್ತೆ: ಕೋಡಿಮಠ ಶ್ರೀ



ಬೆಳಗಾವಿ: ಕೇರಳದ ವಯನಾಡಿನಲ್ಲಿ ಇಂತಹ ದುರಂತ ಆಗುತ್ತೆ ಎಂದು ನಾನು 20 ದಿನಗಳ ಹಿಂದೆಯೇ ಹೇಳಿದ್ದೆ ಎಂದು ಕೋಡಿಮಠದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಬೆಳಗಾವಿಯ ರಾಮತೀರ್ಥ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಳೆ ಆಗುತ್ತೆ, ಗುಡ್ಡ ಉರುಳುತ್ತೆ, ಜನರು ಸಾಯುತ್ತಾರೆ, ರೋಗ–ರುಜಿನಗಳು ಹೆಚ್ಚಾಗುತ್ತವೆ ಅಂತ ಹೇಳಿದ್ದೆ. ಇದು ಭಾರತಕ್ಕಷ್ಟೇ ಹೇಳಿರಲಿಲ್ಲ, ಜಾಗತಿಕ ಮಟ್ಟದಲ್ಲಿ ಕೆಲ ರಾಜ್ಯಗಳು ಮುಳುಗುತ್ತವೆ ಅಂತಲೂ ಹೇಳಿದ್ದೆ ಎಂದಿದ್ದಾರೆ.

ನನ್ನ ಪ್ರಕಾರ ಮುಂದಿನ ಅಮಾವಾಸ್ಯೆವರೆಗೆ ಮಳೆ ಇರುತ್ತೆ. ಬಳಿಕ ಬೇರೆ ಭಾಗಕ್ಕೆ ಹೋಗುತ್ತೆ. ಇದು ಕ್ರೋಧಿನಾಮ ಸಂವತ್ಸರ. ಕ್ರೋಧಿ ಅಂದ್ರೆ ಸಿಟ್ಟು ಇದರಲ್ಲಿ ಒಳ್ಳೆಯದ್ದೂ ಇದೆ, ಕೆಟ್ಟದ್ದೂ ಇದೆ. ಈ ಪೈಕಿ ಕೆಟ್ಟದ್ದೇ ಜಾಸ್ತಿ ಇರುತ್ತೆ. ಹಾಗಾಗಿ ಈ ಪ್ರಾಕೃತಿಕ ದೋಷ ಮುಂದುವರಿಯುತ್ತೆ. ಮುಂದೆ ಅನಿಷ್ಟ ಜಾಸ್ತಿ ಇದೆ. ಕತ್ತಲು–ಬೆಳಕು ಎರಡೂ ಇದ್ದರೂ ಅದರಲ್ಲಿ ಕತ್ತಲು ಜಾಸ್ತಿ ಇರುತ್ತೆ. ಅಷ್ಟೇ ಅಲ್ಲ ಪ್ರಕೃತಿ ವಿಕೋಪವಾಗಿ ಭೂಮಿ ಕಂಪಿಸುತ್ತೆ, ಜನ ಸಾಯುತ್ತಾರೆ. ಕೆಲ ರಾಜ್ಯಗಳು ಮುಳುಗಡೆಯಾಗುತ್ತವೆ. ರಾಜ್ಯದಲ್ಲಿ ಜಲಕಂಟಕ ಹಾಗೂ ಪ್ರಕೃತಿ ವಿಕೋಪ ಮುಂದುವರಿಯಲಿದೆ. ಲಾಭಕ್ಕಿಂತ ಹಾನಿ ಜಾಸ್ತಿಯಾಗಲಿದೆ. ಬರುವ ಅಮಾವಾಸ್ಯೆವರೆಗೆ ಕಾಲ ಚೆನ್ನಾಗಿಲ್ಲ. ಕೇವಲ ಭಾರತಕ್ಕೆ ಅಷ್ಟೇ ಅಲ್ಲ ಇಡೀ ವಿಶ್ವಕ್ಕೆ ಜಲ ಕಂಟಕವಿದೆ ಎಂದು ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ. ರಾಜ್ಯದಲ್ಲಿ ಸಿಎಂ ಬದಲಾವಣೆ ಚರ್ಚೆ ಬಗ್ಗೆ ಪ್ರತಿಕ್ರಿಯಿಸಿದ ಶ್ರೀಗಳು, ಸದ್ಯಕ್ಕೆ ಏನೂ ತೊಂದರೆ ಕಾಣ್ತಿಲ್ಲ. ಮುಂದೆ ತೊಂದರೆ ಆಗುತ್ತಾ ಎಂಬ ವಿಚಾರಕ್ಕೆ 'ಬೇಡ ಸನ್ಯಾಸಿ' ಕಥೆ ಹೇಳಿದರು. ಏನಾದರೂ ಹೇಳಿದ್ರೆ ಮುಂದೆ ಓಡಾಡದ ಹಾಗೆ ಮಾಡಿಬಿಟ್ಟೀರಾ. ಜನರು ಎಲ್ಲವನ್ನೂ ಮನಃಶಾಂತಿಯಿಂದಲ್ಲ ದ್ವೇಷ ಭಾಷೆಯಿಂದ ತೆಗೆದುಕೊಳ್ಳುತ್ತಿದ್ದಾರೆ. ಆತ್ಮಸಾಕ್ಷಿಯಾಗಿ ಜನರು ಮತ ನೀಡುತ್ತಿಲ್ಲ. ಎಲ್ಲಿಯವರೆಗೆ ಮತ ಮಾರಿಕೊಳ್ಳುತ್ತಾರೋ ಅಲ್ಲಿಯವರೆಗೆ ಲಾಭ–ನಷ್ಟ ಇರುತ್ತೆ. ಹಿಂದಿನ ಕಾಲದಲ್ಲಿ ಧರ್ಮದ ಅನುಮತಿ ಪಡೆದು ರಾಜಕಾರಣ ಮಾಡುತ್ತಿದ್ರು. ಈಗ ಧರ್ಮವೂ ಇಲ್ಲ, ಗುರಿಯೂ ಇಲ್ಲ, ದುಡ್ಡು ಮಾಡೋದಷ್ಟೇ ಗುರಿ. ಹಾಗಾಗಿ ಬಹುಬೇಗ ಇವರಿಗೆ ಅಪಘಾತಗಳು ಆಗ್ತಿವೆ. ಮನುಷ್ಯ ಯಾವುದೇ ಅಪೇಕ್ಷೆ ಇಲ್ಲದೇ ಎಲ್ಲಿವರೆಗೆ ಮತ ಹಾಕೋದಿಲ್ಲವೋ, ಅಲ್ಲಿಯವರೆಗೆ ರಾಮರಾಜ್ಯ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.





ಕರ್ನಾಟಕ ಸರ್ಕಾರ ತ್ವರಿತ ಸ್ಪಂದನೆ; ಇಬ್ಬರು ಐಎಎಸ್ ಅಧಿಕಾರಿಗಳ ನಿಯೋಜನೆ

ಬೆಂಗಳೂರು: ಕೇರಳದ ವಯನಾಡು ಜಿಲ್ಲೆ ಮೆಪ್ಪಾಡಿ ಪ್ರದೇಶದಲ್ಲಿ ಭೂಕುಸಿತದಿಂದ ಉಂಟಾಗಿರುವ ವಿಪತ್ತಿನ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಕರ್ನಾಟಕ ಸರ್ಕಾರ ತ್ವರಿತವಾಗಿ ಸ್ಪಂದಿಸಿದೆ. ಎಲ್ಲಾ ರೀತಿಯ ಸಹಕಾರ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ ಹಿನ್ನೆಲೆಯಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿ, ಗಡಿಭಾಗದ ಮೈಸೂರು, ಚಾಮರಾಜನಗರ ಜಿಲ್ಲೆಗಳಿಂದ ತಂಡಗಳನ್ನು ಕಳುಹಿಸಿ, ಅಗತ್ಯ ವೈದ್ಯಕೀಯ ಸೌಕರ್ಯಗಳ ಏರ್ಪಾಡು ಮಾಡಿಕೊಳ್ಳಲಾಗಿದೆ.

ನವದೆಹಲಿಯಲ್ಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಅವರು ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ್ದು, ವಯನಾಡಿನಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯಾಚರಣೆಗೆ ನೆರವಾಗಲು ಬೆಂಗಳೂರಿನಲ್ಲಿರುವ ಎನ್‌ಡಿಆರ್‌ಎಫ್ ತಂಡ ಹಾಗೂ ಭಾರತೀಯ ಸೇನೆಯ ಮದ್ರಾಸ್ ಎಂಜಿನಿಯರ್ ಗ್ರೂಪ್‌ನ ಪಡೆಯ ತಂಡಗಳು ತ್ವರಿತವಾಗಿ ತೆರಳಲು ಹಾಗೂ ಅಗತ್ಯ ಉಪಕರಣಗಳು ಮತ್ತು ಇತರ ಅಗತ್ಯ ಪರಿಹಾರ ಸಾಮಗ್ರಿಗಳನ್ನು ಕಳುಹಿಸಲು ಸೂಚಿಸಿದ್ದಾರೆ.

ಎಂಇಜಿಯ ಒಬ್ಬರು ಅಧಿಕಾರಿ, ಇಬ್ಬರು ಜೆಸಿಓ ಗಳು ಹಾಗೂ 70 ಮಂದಿ ವಿವಿಧ ಶ್ರೇಣಿಗಳ ಸಿಬ್ಬಂದಿ ಈಗಾಗಲೇ ರಕ್ಷಣೆ ಹಾಗೂ ಪರಿಹಾರ ಸಾಮಗ್ರಿಗಳೊಂದಿಗೆ 15 ವಾಹನಗಳಲ್ಲಿ ವಯನಾಡಿಗೆ ತೆರಳಿದ್ದಾರೆ. ಇನ್ನೂ ಇಬ್ಬರು ಅಧಿಕಾರಿಗಳು, ನಾಲ್ಕು ಮಂದಿ ಜೆಸಿಓಗಳು, ಹಾಗೂ 100 ಮಂದಿ ಸೇನಾ ಸಿಬ್ಬಂದಿ ರಕ್ಷಣಾ ಉಪಕರಣಗಳೊಂದಿಗೆ 40 ವಾಹನಗಳಲ್ಲಿ ತೆರಳಲಿದ್ದಾರೆ. ಬಂಡಿಪುರ ಚೆಕ್ ಪೋಸ್ಟ್‌ನಲ್ಲಿ ಎನ್‌ಡಿಆರ್‌ಎಫ್ ಹಾಗೂ ಸೇನೆಯ ತಂಡಗಳಿಗೆ ಮತ್ತು ಪರಿಹಾರ ಸಾಮಗ್ರಿಗಳ ಸಾಗಾಣಿಕೆ ವಾಹನಗಳಿಗೆ ಗ್ರೀನ್ ಕಾರಿಡಾರ್ ಮೂಲಕ ಅನಿರ್ಬಂಧಿತ ಸಂಚಾರಕ್ಕೆ ಅವಕಾಶ ಕಲ್ಪಿಸುವಂತೆ ಸೂಚನೆ ನೀಡಲಾಗಿದೆ.

ಕರ್ನಾಟಕ ಸರ್ಕಾರವು ಕೇರಳ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅಗತ್ಯ ನೆರವು ಒದಗಿಸಲಾಗುತ್ತಿದೆ. ಅಲ್ಲದೆ ಗಡಿ ಭಾಗದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ. ವಯನಾಡಿನಲ್ಲಿ ಭೂಕುಸಿತದಿಂದ ಉಂಟಾಗಿರುವ ತ್ಯಾಜ್ಯಗಳ ತೆರವಿಗೆ ರಾಜ್ಯದಿಂದ ಅಗತ್ಯ ಜೆಸಿಬಿ, ಕ್ರೇನ್ ಮತ್ತಿತರ ಭಾರಿ ವಾಹನಗಳ ಸೌಕರ್ಯಗಳನ್ನು ಲೋಕೋಪಯೋಗಿ ಇಲಾಖೆ ಕೈಗೊಳ್ಳುತ್ತಿದೆ. ವಯನಾಡಿನಲ್ಲಿ ಕನ್ನಡಿಗರು ಸಿಲುಕಿಕೊಂಡಿರುವ ಬಗ್ಗೆ ಪ್ರಾಥಮಿಕ ಮಾಹಿತಿ ದೊರೆತಿದ್ದು, ಅವರ ರಕ್ಷಣೆಗೆ ಎಲ್ಲ ಪ್ರಯತ್ನ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಗುಂಡ್ಲುಪೇಟೆ ಮಾರ್ಗವಾಗಿ ಸಾಗುವ ಬೆಂಗಳೂರು–ವೈನಾಡ್ ರಾಷ್ಟ್ರೀಯ ಹೆದ್ದಾರಿ 766 ರ ಮಾರ್ಗದಲ್ಲಿ ಸಂಚಾರ ಮುಂಜಾಗ್ರತಾ ಕ್ರಮವಾಗಿ ನಿರ್ಬಂಧಿಸಲಾಗಿದ್ದು, ಪರ್ಯಾಯವಾಗಿ ಗುಂಡ್ಲುಪೇಟೆ–ಬಂಡೀಪುರ–ಗುಡಲೂರ ಮಾರ್ಗದಲ್ಲಿ ತೆರಳಲು ಸೂಚಿಸಲಾಗಿದೆ.

ಸಮನ್ವಯಕ್ಕೆ ಅಧಿಕಾರಿಗಳು

ಸ್ವತಃ ಸಿಎಂ ಪರಿಸ್ಥಿತಿಯ ಮೇಲ್ವಿಚಾರಣೆ ನಡೆಸುತ್ತಿದ್ದು ವಯನಾಡಿನಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಎಲ್ಲ ರೀತಿಯ ಬೆಂಬಲ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅಲ್ಲದೆ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳ ಕುರಿತಂತೆ ಸಮನ್ವಯಕ್ಕಾಗಿ ಹಿರಿಯ ಐಎಎಸ್ ಅಧಿಕಾರಿ ಪಿ.ಸಿ. ಜಾಫರ್ (ಮೊಬೈಲ್ ಸಂಖ್ಯೆ 94483 55577) ಹಾಗೂ ದಿಲೀಶ್ ಶಶಿ (94460 00514) ಅವರನ್ನು ನಿಯೋಜಿಸಲಾಗಿದೆ.

ಮೈಸೂರಲ್ಲೂ ವೈದ್ಯಕೀಯ ನೆರವಿಗೆ ಸಿದ್ಧತೆ

ಮೈಸೂರು ಜಿಲ್ಲಾಡಳಿತ ನಗರದ ಕೆ.ಆರ್. ಆಸ್ಪತ್ರೆ ಹಾಗೂ ಹೆಚ್.ಡಿ.ಕೋಟೆ ತಾಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆಗೆ ಎಲ್ಲ ಸಿದ್ಧತೆಗಳೊಂದಿಗೆ ವೈದ್ಯರನ್ನು ನಿಯೋಜಿಸಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಕರೆತರಲು ಸಾಕಷ್ಟು ಬಸ್ ಇನ್ನಿತರ ವಾಹನಗಳನ್ನು ಅಣಿಗೊಳಿಸಲಾಗಿದೆ. ಪಾರ್ಥಿವ ಶರೀರಗಳ ಸಂರಕ್ಷಣೆಗೆ ಶೈತ್ಯಾಗಾರದ ಘಟಕಗಳನ್ನು ಒದಗಿಸುವ ಸರಬರಾಜುದಾರನ್ನು ಗುರುತಿಸಲಾಗಿದೆ. ಮೈಸೂರು ಜಿಲ್ಲಾಡಳಿತ ಸಹಾಯವಾಣಿ 0821–24223800 ಸಂಪರ್ಕಿಸಬಹುದು.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮಂಡ್ಯ ಟೌನ್, ಗುತ್ತಲು ಕಾಲೋನಿ, ಜಯಲಕ್ಷ್ಮಿ ಶಾಮಿಲ್ ಮುಂಭಾಗ, 2ನೇ ಕ್ರಾಸ್, ಮನೆ ನಂ. 656 ರಲ್ಲಿ ವಾಸವಾಗಿರುವ ಶ್ರೀ ಬಸವರಾಜು ರವರ ಮಗನಾದ ಸಿದ್ದರಾಜು ಎಂ.ಬಿ. (ಆಧಾರ್ ನಂ. 2530 7897 2334) ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ, ಶ್ರೀರಾಂಪುರ 2ನೇ ಹಂತ, ಸಾಯಿಬ್ಬು ಸ್ಟೋರ್, ಹತ್ತಿರ ಮನೆ ನಂ. ಹೆಚ್.ಐ.ಜಿ. 1562 ರಲ್ಲಿ ವಾಸವಾಗಿರುವ ನಾಗ ಎಂ. ರವರ ಮಗನಾದ ಪುನೀತ್ ಎನ್. (ಆಧಾರ್ ನಂ. 6414 0111 1330) ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ತತ್ಸಂಬಂಧ ಯಾರಿಗಾದರೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಸ್ವಾಧೀನ, ಕರಾರುಗಳು ಮತ್ತೆ ಇನ್ಯಾವುದೇ ರೀತಿಯ ಕಾನೂನು ಬದ್ಧ ತಕರಾರುಗಳು ಇದ್ದಲ್ಲಿ ಸದರಿ ತಕರಾರನ್ನು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 01 ವಾರದೊಳಗಾಗಿ ಲಿಖಿತ ದಾಖಲೆಯೊಂದಿಗೆ ಈ ಕೆಳಕಂಡ ಕಛೇರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಸಮಯದ ಒಳಗೆ ಯಾವುದೇ ತಕರಾರುಗಳು ಬರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅವರು ಇಚ್ಛಿಸಿರುವ ವ್ಯವಹಾರವನ್ನು ಪೂರ್ಣಗೊಳಿಸಲು ಬಾಧ್ಯರಾಗಿರುತ್ತಾರೆ ಮತ್ತು ನಿಗದಿತ ಸಮಯದ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ನಮ್ಮ ಕಕ್ಷಿದಾರರನ್ನು ಬಾಧ್ಯಪಡಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ : ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಮೇಟಗಳ್ಳಿ ಬಡಾವಣೆ ಮನೆ ನಂ. 187/ಬಿ ರ ಸ್ವತ್ತು ಮೈಸೂರು ಮಹಾನಗರ ಪಾಲಿಕೆ ದಾಖಲೆಯಾದ ನಮೂನೆ–02 ಪ್ರಕಾರ ಸ್ವತ್ತಿನ ನಂ. 2071745321 ನಿರ್ಧರಣಾ ಸಂಖ್ಯೆ 187/ಬಿ ರ ಸ್ವತ್ತಿಗೆ ಚೆಕ್ಕುಬಂದಿ : ಪೂರ್ವಕ್ಕೆ : 30 ಅಡಿ ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 187/ಎ, ಉತ್ತರಕ್ಕೆ : 30 ಅಡಿ ರಸ್ತೆ, ದಕ್ಷಿಣಕ್ಕೆ : ನಿವೇಶನ ನಂ. 186/ಬಿ. ಈ ಮಧ್ಯೆ ಇರುವ ಪೂರ್ವ – ಪಶ್ಚಿಮ 12.13 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ 13.71 ಮೀಟರ್‌ಗಳು ಒಟ್ಟು 166.30 ಚದರ ಮೀಟರ್‌ಗಳುಳ್ಳ ಆವರಣ ಈ ಆವರಣದಲ್ಲಿ ಕಟ್ಟಿರುವ ಕಟ್ಟಡ.

ದಿನಾಂಕ : 30–07–2024
ಸ್ಥಳ : ಮೈಸೂರು

ಸಹಿ/– ಹೇಚ್.ಎಸ್. ಕುಮಾರ್ ಬಿ.ಎ., ಎಲ್.ಎಲ್.ಬಿ., ವಕೀಲರು, ನಂ. 1411/1, 1ನೇ ಹಂತ, 6ನೇ ಕ್ರಾಸ್ ತ್ಯಾಗರಾಜ ರಸ್ತೆ, ಮೈಸೂರು ಮೊ.: 9448797546

ಮೂರನೇ ಪುಟದಿಂದ

125ಕ್ಕೂ ಅಧಿಕ ಮಂದಿ ಸಾವು

ಬೃಹತ್ ಮರಗಳು, ವಾಹನಗಳು ತರಗೆಲೆಗಳಂತೆ ತೇಲಿ ಹೋಗಿವೆ. ಬೆಳಗಾಗುವಷ್ಟರಲ್ಲಿ ಸರ್ವನಾಶವಾಗಿದ್ದು, ಈ ಭೀಕರ ದುರಂತದಿಂದ ಕೇರಳ ಮಾತ್ರವಲ್ಲದೆ ಇಡೀ ದೇಶವೇ ತಲ್ಲಣಗೊಂಡಿದೆ.

ರಸ್ತೆ, ಸೇತುವೆಗಳು ಕೊಚ್ಚಿ ಹೋಗಿರುವುದರಿಂದ ಮುಂಡಕ್ಕೈ, ಚೂರಲ್ ಮಲ, ಅಟ್ಟಮಾಲ ಹಾಗೂ ನೂಲ್ಪುಳ ಸೇರಿದಂತೆ ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಉಳಿದೊಂದು ರಸ್ತೆಯನ್ನು ಕಾರ್ಯಾಚರಣೆ ಸೇರಿದಂತೆ ತುರ್ತು ಕಾರ್ಯಕ್ಕಾಗಿ ಮಾತ್ರ ಬಳಸಲಾಗುತ್ತಿದೆ. ಸುಮಾರು 150ಕ್ಕೂ ಹೆಚ್ಚು ಮನೆಗಳು ನಾಶವಾಗಿದ್ದು, ಅವಶೇಷದಡಿ ಹಲವರು ಸಿಲುಕಿಕೊಂಡಿರುವ ಸಾಧ್ಯತೆ ಇದೆ. ಚಹಾ ತೋಟದಲ್ಲಿ ಕೆಲಸ ಮಾಡುತ್ತಿದ್ದ ವಲಸೆ ಕಾರ್ಮಿಕರ ಕುಟುಂಬಗಳು ನೆಲೆಸಿದ್ದ ಮುಂಡಕ್ಕೈ ಕೊಳಗೇರಿಗಳೂ ಕೊಚ್ಚಿ ಹೋಗಿವೆ.

ಮಲ್ಲಪುರಂನ ನಿಲಂಬೂರ್ ಪ್ರದೇಶದಲ್ಲಿ ಹರಿಯುವ ಚಾಲಿಯಾರ್ ನದಿಯಲ್ಲಿ ಹಲವರು ಕೊಚ್ಚಿ ಹೋಗಿದ್ದಾರೆ ಎನ್ನಲಾಗಿದೆ. ಚೂರಲ್‌ಮಲ ಪಟ್ಟಣದಲ್ಲಿ ಮಗು ಸೇರಿ ನಾಲ್ವರು, ತೊಂಡರ್‌ನಾಡ್‌ನಲ್ಲಿ ನೇಪಾಳಿ ಕುಟುಂಬದ ಒಂದು ವರ್ಷದ ಮಗು, ಪೋತುಕಲ್ ಗ್ರಾಮದ ಬಳಿ ನದಿ ದಡದಲ್ಲಿ ಐದು ವರ್ಷದ ಮಗು ಶವವನ್ನು ಮೇಲೆತ್ತಲಾಗಿದೆ. ಗುಡ್ಡ ಕುಸಿತ ಹಾಗೂ ಜಲಪ್ರಳಯದಲ್ಲಿ ಅದೆಷ್ಟು ಮಂದಿ ಮೃತಪಟ್ಟಿದ್ದಾರೆ ಎಂಬ ನಿಖರ ಮಾಹಿತಿ ಸದ್ಯಕ್ಕೆ ಲಭ್ಯವಾಗಿಲ್ಲ.

ನಿರಂತರ ರಕ್ಷಣಾ ಕಾರ್ಯ: ಭೂಕುಸಿತದಿಂದ ಭಾರೀ ಹಾನಿಗೀಡಾದ ಚೂರಲ್‌ಮಲದಲ್ಲಿ ಭಾರತೀಯ ಸೇನೆ ಹಾಗೂ ಕೇರಳ ಅಗ್ನಿಶಾಮಕ ದಳ ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿವೆ. ತಾತ್ಕಾಲಿಕ ಸೇತುವೆ ನಿರ್ಮಿಸಿಕೊಂಡು ರಕ್ಷಣಾ ಕಾರ್ಯ ಮುಂದುವರೆಸಲಾಗಿದೆ. ಸೈನಿಕರು ಹಾಗೂ ಎನ್‌ಡಿಆರ್‌ಎಫ್ ಸಿಬ್ಬಂದಿ ಒಳಗೊಂಡ ಮಿಷನ್ ತಂಡ ನದಿಯನ್ನು ದಾಟಿ ಜನರ ರಕ್ಷಣೆಗೆ ಶ್ರಮಿಸುತ್ತಿದೆ. ಕಣ್ಣೂರಿನ ಡಿಫೆನ್ಸ್ ಸೆಕ್ಯುರಿಟಿ ಕಾರ್ಪ್ಸ್ ಕೇಂದ್ರದ 200 ಸೈನಿಕರು ಹಾಗೂ ಭಾರತೀಯ ಸೇನೆಯ ಎರಡು ವಿಭಾಗಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿವೆ. ಕಣ್ಣೂರು ಮಿಲಿಟರಿ ಆಸ್ಪತ್ರೆಯ ವೈದ್ಯಕೀಯ ತಂಡ ಹಾಗೂ ಕೋಝಿಕ್ಕೋಡ್‌ನ ಟೆರಿಟೋರಿಯಲ್ ಆರ್ಮಿ ಪಡೆಗಳನ್ನು ವಯನಾಡಿನಲ್ಲಿ ನಿಯೋಜಿಸಲಾಗಿದೆ. ಕೇರಳ ರಾಜ್ಯ ಸರ್ಕಾರದ ಹಲವು ಇಲಾಖೆಗಳೂ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು ವಿಪತ್ತು ಪರಿಹಾರ ಕಾರ್ಯ ತ್ವರಿತವಾಗಿ ಮುಂದುವರೆದಿದೆ.

ಮೆಪ್ಪಾಡಿ ಬಳಿಯ ವಿವಿಧ ಗುಡ್ಡಗಾಡು ಪ್ರದೇಶಗಳಲ್ಲಿ ಭಾರೀ ಭೂಕುಸಿತ ಸಂಭವಿಸಿದ್ದು, ನೂರಾರು ಮಂದಿ ಸಿಲುಕಿರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಭೂಕುಸಿತದ ಪ್ರದೇಶದಲ್ಲಿ ಎಲ್ಲಾ ಸರ್ಕಾರಿ ಸಂಸ್ಥೆಗಳು ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ರಕ್ಷಣಾ ಚಟುವಟಿಕೆ ನಡೆಯುತ್ತಿದೆ. ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ವಯನಾಡು ಹಾಗೂ ನೆರೆಯ ಮಲ್ಲಪುರಂ, ಕೋಯಿಕ್ಕೋಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ತಿಳಿಸಿದ್ದಾರೆ.

ಕುಟುಂಬಸ್ಥರಿಗೆ ಪ್ರಧಾನಿ ಪರಿಹಾರ ಘೋಷಣೆ

ಪಿಣರಾಯಿ ವಿಜಯ್ ಅವರೊಂದಿಗೆ ಮಾತನಾಡಿದ್ದೇನೆ ಎಲ್ಲಾ ನೆರವನ್ನು ನೀಡಲು ಕೇಂದ್ರ ಸಿದ್ಧವಿದೆ' ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು ಸುರೇಶ್ ಗೋಪಿ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಅವರ ಬಳಿಯೂ ಮಾತನಾಡಿದ್ದು, ಬಿಜೆಪಿ ಕಾರ್ಯಕರ್ತರನ್ನು ಕಳುಹಿಸಿ ಅವರಿಗೆ ಬೇಕಾದ ನೆರವು ಒದಗಿಸುವಂತೆ ತಿಳಿಸಿದ್ದಾರೆ.

ರಾಷ್ಟ್ರಪತಿಗಳ ಸಂತಾಪ: ವಯನಾಡಿನಲ್ಲಿ ಭೂಕುಸಿತದಿಂದ ಪ್ರಾಣ ಕಳೆದುಕೊಂಡವರಿಗೆ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಸಂತಾಪ ಸೂಚಿಸಿದ್ದಾರೆ. ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ. ಗೃಹ ಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರದ ಹಲವು ನಾಯಕರು, ಲೋಕಸಭೆ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಘಟನೆ ಬಗ್ಗೆ ಸಂತಾಪ ಸೂಚಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯ ನಾಲ್ವರು ಸಾವು

ಗ್ರಾಮದ ದಂಪತಿ, ಗುಂಡ್ಲುಪೇಟೆ ಪಟ್ಟಣದ ಕೆಲ ಕುಟುಂಬಗಳು ನಾಪತ್ತೆಯಾಗಿರುವ ಬಗ್ಗೆ ಮಾಹಿತಿ ದೊರಕಿದೆ. ಅಲ್ಲದೆ, ಇನ್ನೂ ಹಲವು ಮಂದಿ ನಾಪತ್ತೆಯಾಗಿದ್ದಾರೆಂದು ಹೇಳಲಾಗುತ್ತಿದ್ದು, ವಯನಾಡಿನಲ್ಲಿ ಸಿಲುಕಿರುವವರ ರಕ್ಷಣೆಗಾಗಿ ಚಾಮರಾಜನಗರ ಜಿಲ್ಲಾಡಳಿತ ಭರದ ಸಿದ್ಧತೆ ಕೈಗೊಂಡಿದ್ದು, ಎಲ್ಲರನ್ನೂ ಸುರಕ್ಷಿತವಾಗಿ ಕರೆತರಲು ಅಗತ್ಯ ಕ್ರಮ ಕೈಗೊಂಡಿದೆ.

ನಗರದ ಮತ್ತೆರಡು ಕುಟುಂಬ ನಾಪತ್ತೆ: ಮುಂಡಕೈನಲ್ಲಿದ್ದ ಗುಂಡ್ಲುಪೇಟೆ ಪಟ್ಟಣದ ನಿವಾಸಿಗಳಾದ ಝಾನ್ಸಿರಾಣಿ, ಎರಡೂವರೆ ವರ್ಷದ ಪುತ್ರ ನಿಹಾಲ್ ನಾಪತ್ತೆಯಾಗಿದ್ದಾರೆ ಎಂದು ತಿಳಿದು ಬಂದಿದೆ. ಇವರು ಮುಂಡಕೈ ಟೀ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, ಇದೀಗ ಅದೇ ಸ್ಥಳದಲ್ಲೇ ಗುಡ್ಡ ಕುಸಿದಿದ್ದು, ಝಾನ್ಸಿರಾಣಿ ಮತ್ತು ಎರಡೂವರೆ ವರ್ಷದ ಮಗು ನಿಹಾಲ್ ಕಾಣೆಯಾಗಿದ್ದಾರೆ.

ಕೇರಳದ ಚೂರಲ್‌ಮಲಾದಲ್ಲಿ ಟೀ ಎಸ್ಟೇಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಚಾಮರಾಜನಗರ ತಾಲೂಕಿನ ನಾಗವಳ್ಳಿ ಗ್ರಾಮದ ಕುಟುಂಬವೊಂದು ನಾಪತ್ತೆಯಾಗಿದೆ. ಆದರೆ, ಇವರ ಸುಳಿವು ಇನ್ನೂ ಪತ್ತೆಯಾಗಿಲ್ಲ.


ಸೋಮವಾರಪೇಟೆ ಕುಟುಂಬ ನಾಪತ್ತೆ: ಕಳೆದ ಮೂರ್ನಾಲ್ಕು ವರ್ಷಗಳಿಂದ ಚೂರಲ್‌ಮಲನಲ್ಲಿ ಕೆಲಸ ಮಾಡಿಕೊಂಡಿದ್ದ ಚಾಮರಾಜನಗರದ ಸೋಮವಾರಪೇಟೆಯ ದಂಪತಿ ರತ್ನಮ್ಮ ಹಾಗೂ ರಾಜೇಂದ್ರ ನಾಪತ್ತೆಯಾಗಿದ್ದಾರೆ.

ಮಧ್ಯರಾತ್ರಿ ದುರಂತ ಸಂಭವಿಸಿದ ಬಳಿಕ ಚಾಮರಾಜನಗರದ ಕುಟುಂಬಸ್ಥರು, ರತ್ನಮ್ಮ ಹಾಗೂ ರಾಜೇಂದ್ರ ದಂಪತಿಗೆ ಕರೆ ಮಾಡಿದ್ದಾರೆ. ಆದರೆ, ದಂಪತಿ ಇನ್ನೂ ಸಂಪರ್ಕಕ್ಕೆ ಸಿಕ್ಕಿಲ್ಲ. ಇದರಿಂದ ಕುಟುಂಬಸ್ಥರು ಆತಂಕಗೊಂಡಿದ್ದಾರೆ.

ಕುಟುಂಬ ರಕ್ಷಣೆ: ಕೇರಳದ ಚೂರಲ್‌ಮಲಾ ಗ್ರಾಮದಲ್ಲಿ ಸಿಲುಕಿಕೊಂಡಿದ್ದ ನಗರದ ಉಪ್ಪಾರ ಬೀದಿಯ ಲಕ್ಷ್ಮಮ್ಮ, ಇವರ ಪತಿ, ಕೃಷ್ಣಾ, ಪುತ್ರಿ ಪ್ರವೀದಾ ಅವರನ್ನು ರಕ್ಷಣೆ ಮಾಡಲಾಗಿದ್ದು, ಆದರೆ, ಪ್ರವೀದಾ ಅವರ ಪತಿ ವಿನೋದಾ ನಾಪತ್ತೆಯಾಗಿದ್ದಾರೆ. ಲಕ್ಷ್ಮಮ್ಮ ಅವರು ಚಾಮರಾಜನಗರದಿಂದ ಕೇರಳದ ವಯನಾಡಿನ ಮೇಪ್ಪಾಡಿಯ ಕೃಷ್ಣಾ ಅವರನ್ನು ವಿವಾಹವಾಗಿ ಅಲ್ಲೇ ವಾಸವಾಗಿದ್ದರು. ಇವರ ಪುತ್ರಿ ಪ್ರವೀದಾ ಅವರನ್ನು ಮೇಪ್ಪಾಡಿಯಿಂದ 4 ಕಿ.ಮೀ. ದೂರದ ಚೂರಲ್‌ಮಲಾದ ವಿನೋದ್ ಅವರೊಂದಿಗೆ ವಿವಾಹ ಮಾಡಿದ್ದರು. ಹೆರಿಗೆಗೆಂದು ಮೆಪ್ಪಾಡಿಯ ತಾಯಿ ಮನೆಗೆ ಪ್ರವೀದಾ ಬಂದಿದ್ದರು. ಪ್ರವೀದಾ ಪತಿ ವಿನೋದ್ ಚೂರಲ್‌ಮಲಾದಲ್ಲೇ ಇದ್ದಾರೆ. ಸೋಮವಾರ ಮಧ್ಯರಾತ್ರಿ ವಿನೋದ್ ಅವರ ಕೊಟ್ಟಿಗೆಯಲ್ಲಿದ್ದ ಹಸು ಒಂದೇ ಸಮನೆ ಅರಚಿಕೊಂಡಿದೆ. ಆಗ ನಿದ್ದೆಯಿಂದ ಎಚ್ಚರಗೊಂಡ ವಿನೋದ್ ಕೊಟ್ಟಿಗೆಗೆ ಹೋಗಿ ನೋಡಿದ್ದಾರೆ. ಕೊಟ್ಟಿಗೆಗೆ ನೀರು ತುಂಬಿಕೊಳ್ಳುತ್ತಿರುವುದನ್ನು ನೋಡಿದ ವಿನೋದ್ ತಕ್ಷಣ ತಮ್ಮ ಕುಟುಂಬದವರನ್ನು ಎತ್ತರದ ಗುಡ್ಡಕ್ಕೆ ಕರೆದೊಯ್ದು ಅಪಾಯದಿಂದ ಪಾರಾಗಿದ್ದಾರೆ. ಈ ಸಂದರ್ಭದಲ್ಲಿ ಹಸು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ.

ಚೂರಲ್‌ಮಲಾದಿಂದ 4 ಕಿ.ಮೀ. ದೂರದ ಮೆಪ್ಪಾಡಿಯಲ್ಲಿದ್ದ ಪ್ರವಿದಾ ಘಟನೆಯ ಬಳಿಕ ತನ್ನ ತಂದೆ-ತಾಯಿಯೊಡನೆ ತಾಯಿಯ ಊರಾದ ಚಾಮರಾಜನಗರಕ್ಕೆ ಸುರಕ್ಷಿತವಾಗಿ ಮರಳಿದ್ದಾರೆ.

ಮಾಹಿತಿ ನೀಡಿದಲ್ಲಿ ಸುರಕ್ಷಿತವಾಗಿ ಕರೆತರಲು ಕ್ರಮ



ಕೇರಳದ ವಯನಾಡು ಜಿಲ್ಲೆಯಲ್ಲಿ ಭೂ ಕುಸಿತ ಉಂಟಾಗಿ ನೂರಾರು ಜನ ಸಿಲುಕಿರುವುದಾಗಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯಿಂದ ಕೇರಳಕ್ಕೆ ಪ್ರವಾಸ, ಜೀವನೋಪಾಯ ಹಾಗೂ ಇನ್ನಿತರೆ ಕಾರಣಕ್ಕೆ ತೆರಳಿರುವವರ ಮಾಹಿತಿಯನ್ನು ಅವರ ಕುಟುಂಬಸ್ಥರು ನೀಡಿದ್ದಲ್ಲಿ ಸುರಕ್ಷಿತವಾಗಿ ಕರೆತರಲು ಅಗತ್ಯ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಜಿಲ್ಲಾಡಳಿತದ ಕಂಟ್ರೋಲ್ ರೂಂ ದೂ.ಸಂ: 08226-223163, 08226-223161, 08226-223160 ಹಾಗೂ ಮೊ.ಸಂ: 9740942901ಕ್ಕೆ ಮಾಹಿತಿ ನೀಡಬಹುದು. ವಯನಾಡು ಜಿಲ್ಲಾಡಳಿತದೊಂದಿಗೆ ಸಂಪರ್ಕಿಸಿ ಸುರಕ್ಷಿತವಾಗಿ ಕರೆತರಲು ಅಗತ್ಯ ಕ್ರಮ ವಹಿಸಲಾಗುವುದು ಎಂದು ಶಿಲ್ಪನಾಗ್ ತಿಳಿಸಿದ್ದಾರೆ.

ರಾಜ್ಯದಲ್ಲೂ ಎಚ್ಚರ ವಹಿಸಿ

ಅಪಾಯಕಾರಿ ಎಂಬುದಾಗಿ ಗುರುತಿಸಿರುವ ಸ್ಥಳಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು ಸಲಹೆ ನೀಡಿದ್ದಾರೆ. ಭೂಕುಸಿತದಂತಹ ಸಮಸ್ಯೆ ಎದುರಾಗಿರುವ ಸ್ಥಳಗಳಲ್ಲಿ ಸಾರ್ವಜನಿಕರು ಬಹಳ ಎಚ್ಚರಿಕೆ ವಹಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಕೇರಳದ ವಯನಾಡಿನಲ್ಲಿ ಸಂಭವಿಸಿದ ಭೀಕರ ಭೂಕುಸಿತದಿಂದ ಅನೇಕ ಮಂದಿ ದಾರುಣ ಸಾವನ್ನಪ್ಪಿರುವುದು ತೀವ್ರ ಆಘಾತ ಉಂಟು ಮಾಡಿದೆ. ಮಣ್ಣು ಕುಸಿತ ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ಕುಮಾರಸ್ವಾಮಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆಯ ಮೂವರು ನಾಪತ್ತೆ

ಮತ್ತು ತಂದೆ ದೇವರಾಜು ಜೊತೆ ಅಲ್ಲಿಯೇ ವಾಸವಾಗಿದ್ದರು ಎನ್ನಲಾಗಿದೆ. ಮಂಗಳವಾರ ಮುಂಜಾನೆ ಭಾರೀ ಮಳೆಯೊಂದಿಗೆ ಗುಡ್ಡ ಕುಸಿದಾಗ ಗಾಢ ನಿದ್ದೆಯಲ್ಲಿದ್ದ ಕುಟುಂಬ ಏನಾಯಿತು ಎಂದು ನೋಡುವಷ್ಟರಲ್ಲಿ ಭಾರೀ ಬಂಡೆಗಳ ಶಬ್ದದೊಂದಿಗೆ ಈ ಕುಟುಂಬ ವಾಸಿಸುತ್ತಿದ್ದ ಮನೆ ಮುರಿದು ಬೀಳಲಾರಂಭಿಸಿತು. ಈ ವೇಳೆ ಲೀಲಾವತಿ ತನ್ನ ಪತಿ ದೇವರಾಜುಗೆ ಮಗುವನ್ನು ಬಿಡಬೇಡ, ಜೋಪಾನ ಎಂದು ಹೇಳುವಷ್ಟರಲ್ಲಿ ಎಲ್ಲರೂ ಕೊಚ್ಚಿಕೊಂಡು ಹೋದರೆನ್ನಲಾಗಿದೆ. ಇದೀಗ ದೇವರಾಜು ಅವರನ್ನು ರಕ್ಷಿಸಲಾಗಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ. ನಾಪತ್ತೆಯಾಗಿರುವ ಲೀಲಾವತಿ, ಅನಿಲ್ ಕುಮಾರ್ ಮತ್ತು ನಿಹಾಲ್ ಅವರುಗಳ ಪತ್ತೆಗಾಗಿ ಶೋಧ ಕಾರ್ಯ ನಡೆಯುತ್ತಿದೆ.

ಪಂಚ ಗ್ಯಾರಂಟಿಗಳಿಗೆ ಎಸ್‌ಎಸ್‌ಪಿ-ಟಿಎಸ್‌ಪಿ ಹಣ ಬಳಕೆ
ಮೈಸೂರು ವಿವಿ ಸಂಶೋಧಕರ ಸಂಘದಿಂದ ಪ್ರತಿಭಟನೆ

7ಸಿ ಕಾಯ್ದೆ ರದ್ದುಪಡಿಸಿ, ಎಸ್‌ಎಸ್‌ಪಿ-ಟಿಎಸ್‌ಪಿ ಹಣ ದಲಿತರ ಆರ್ಥಿಕ ಅಭಿವೃದ್ಧಿಗೆ ಬಳಸಲು ಆಗ್ರಹ

ಮೈಸೂರು, ಜು.30(ಜಿಎ)- ರಾಜ್ಯ ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಾಗಿ ಎಸ್‌ಎಸ್‌ಪಿ-ಟಿಎಸ್‌ಪಿ ಹಣವನ್ನು ಬಳಸಿಕೊಂಡಿರುವುದನ್ನು ಖಂಡಿಸಿ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರು ಸಂಘದ ನೇತೃತ್ವದಲ್ಲಿ ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಮಾನಸಗಂಗೋತ್ರಿಯ ಕ್ಲಾಕ್ ಟವರ್ ಮುಂಭಾಗದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಎಸ್‌ಎಸ್‌ಪಿ-ಟಿಎಸ್‌ಪಿ ಹಣವನ್ನು ದಲಿತರ ಆರ್ಥಿಕ ಅಭಿವೃದ್ಧಿಗೆ ಮಾತ್ರ ಬಳಸಬೇಕು. 7ಸಿ ಕಾಯ್ದೆಯನ್ನು ರದ್ದುಪಡಿಸಬೇಕು. ಪರಿಶಿಷ್ಟ ಜಾತಿ, ಪಂಗಡಗಳ ಪ್ರಬುದ್ಧ ಯೋಜನೆ, ಪ್ರೋತ್ಸಾಹ ಧನ ಇತರ ದಲಿತರ ಯೋಜನೆಗಳನ್ನು ಹಿಂದಿನ ರೀತಿಯಲ್ಲಿ ಮುಂದುವರಿಸಬೇಕು ಎಂದು ಅವರು ಒತ್ತಾಯಿಸಿದರು.

ಸಂಶೋಧನಾ ವಿದ್ಯಾರ್ಥಿ ವರಹಳ್ಳಿ ಆನಂದ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಪ್ರಸಕ್ತ ಸಾಲಿನ 39,121.37 ಕೋಟಿ ರೂ. ಎಸ್‌ಎಸ್‌ಪಿ- ಟಿಎಸ್‌ಪಿ ಹಣದಲ್ಲಿ ಪಂಚ ಗ್ಯಾರಂಟಿಗಳಿಗೆ 25,396 ಕೋಟಿ ರೂಗಳನ್ನು ಹಂಚಿಕೆ ಮಾಡಿಕೊಂಡಿದ್ದಾರೆ ಎಂದು ವರದಿಯಾಗಿದೆ. ಅನ್ಯ ಉದ್ದೇಶಕ್ಕಾಗಿಯೂ ಉಳಿದ ಹಣವನ್ನೂ ಬಳಸಿಕೊಳ್ಳಲು ಮುಂದಾಗಿದೆ ಎಂಬುದಾಗಿ ಹೇಳಲಾಗುತ್ತಿದೆ. ಕರ್ನಾಟಕ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ ಕಾಯ್ದೆಯಲ್ಲಿ 7ಡಿ ವಿಧಿಯನ್ನು ರದ್ದು ಮಾಡಿ, ಇದೇ ಕಾಯ್ದೆಯಲ್ಲಿ ಉಳಿಸಿಕೊಂಡಿರುವ 7ಸಿ ವಿಧಿಯ ಅಡಿಯಲ್ಲಿ ಈ ಹಣವನ್ನು ಅನ್ಯ ಕಾರ್ಯಗಳಿಗೆ ಬಳಸಿಕೊಳ್ಳುವುದಾದರೇ ಎಸ್‌ಎಸ್‌ಪಿ-ಟಿಎಸ್‌ಪಿ ಹಣದ ಮೂಲ ಉದ್ದೇಶವೇ ಮಣ್ಣುಪಾಲು ಆದಂತೆ ಅಲ್ಲವೇ? ಇದನ್ನು ವಂಚನೆ ಅನ್ನಬೇಕೋ? ಬೇಡವೋ? ಎಂದು ಪ್ರಶ್ನಿಸಿದರು.

ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿಯೇ-ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ಪ್ರಯತ್ನದಲ್ಲೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪ್ರತಿಭಾವಂತ ಪರಿಶಿಷ್ಟ ಮಕ್ಕಳ ಪ್ರೋತ್ಸಾಹಧನಕ್ಕೂ ಕತ್ತರಿ ಹಾಕಿ! ಆ ಹಣವನ್ನೂ ಗ್ಯಾರಂಟಿಗಳ ತೂತುಗಳನ್ನು ಮುಚ್ಚಲು ಮನಸ್ಸು ಮಾಡಿರುವುದು ದಲಿತರ ಮೇಲಿರುವ ಅಸಹನೀಯ ಅಲ್ಲದೆ ಮತ್ತೇನು? ಸಮಾಜ ಕಲ್ಯಾಣ ಇಲಾಖೆಯ ಸಚಿವರು ದಲಿತ ಸಮುದಾಯದಲ್ಲೆ ಹುಟ್ಟಿ, ದಲಿತ ಮಕ್ಕಳ ಕೈಕಾಲುಗಳನ್ನು ಕತ್ತರಿಸುವುದು ನಿಮಗೆ ನೋವಲ್ಲವೇ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ, ಗೌರವಾಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಕುಶಾಲ್, ಉಪಾಧ್ಯಕ್ಷ ಕೆ.ಮಲ್ಲೇಶ್, ಕಲ್ಲಹಳ್ಳಿ ಕುಮಾರ್, ಕೆ.ಆರ್. ರಂಗಸ್ವಾಮಿ, ಮಹೇಶ ಪಿ.ಮರಳ್ಳಿ, ವಜ್ರಮುನಿ, ವರಹಳ್ಳಿ ಆನಂದ, ಸುಪ್ರೀತ್, ಲೋಕೇಶ್, ಸಂಜಯ್, ಜಯ, ಕಾರ್ತಿಕ, ಅಸ್ಕರ್ ಅಲಿ, ಪ್ರತಾಪ್, ನಟರಾಜ್, ದಿಲೀಪ್, ಗಣೇಶ್, ಜಗದೀಶ್ ಮಹದೇವಯ್ಯ, ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾಧ್ಯಕ್ಷ ವಿಶ್ವಪ್ರಸಾದ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸಚಿನ್ ರೋಹಿತ್, ಮುತ್ತುರಾಜ್ ಮತ್ತಿತರರು ಪಾಲ್ಗೊಂಡಿದ್ದರು.



ಎಸ್‌ಎಸ್‌ಪಿ- ಟಿಎಸ್‌ಪಿ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿರುವುದನ್ನು ಖಂಡಿಸಿ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ನೇತೃತ್ವದಲ್ಲಿ ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಮಾನಸಗಂಗೋತ್ರಿಯ ಕ್ಲಾಕ್ ಟವರ್ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಹಿರಿಯ ಮಕ್ಕಳ ತಜ್ಞೆ ಡಾ.ಜಿ.ಮಾಲತಿಗೆ ಸನ್ಮಾನ...



ಮೈಸೂರಿನ ಭೈರವಿ ಗೌಡ್ತಿಯರ ಬಳಗದಿಂದ ವಿಜಯನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ವೈದ್ಯರ ದಿನಾಚರಣೆ ಸಂದರ್ಭದಲ್ಲಿ ಹಿರಿಯ ಮಕ್ಕಳ ತಜ್ಞೆ ಡಾ.ಜಿ.ಮಾಲತಿ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಮಟ್ಟದ ಬಹುಭಾಷಾ ಗೀತಾ ಗಾಯನ ಸ್ಪರ್ಧೆ

ಮೈಸೂರು, ಜು.30(ಬಿಎಲ್‌ಯು)- 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗಸ್ಟ್ 25ರಂದು ಮೈಸೂರು ಜಿಲ್ಲಾ ಮಟ್ಟದ ಬಹುಭಾಷಾ ದೇಶಭಕ್ತಿ ಗೀತಾ ಗಾಯನ ಸ್ಪರ್ಧೆ ಆಯೋಜಿಸಿದೆ ಎಂದು ಪರಿಷತ್‌ನ ವಲಯ ಅಧ್ಯಕ್ಷ ಡಾ. ರಂಗನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಸರಸ್ವತಿಪುರಂನ ವಿಜಯ ವಿಠಲ ವಿದ್ಯಾಸಂಸ್ಥೆ ಆವರಣದಲ್ಲಿ ಅಂದು ಬೆಳಗ್ಗೆ 10 ಗಂಟೆಯಿಂದ ಸ್ಪರ್ಧೆ ಆರಂಭವಾಗಲಿದೆ ಎಂದು ತಿಳಿಸಿದರು.

ವೈಯಕ್ತಿಕ ಗೀತೆ ಗಾಯನ ಹಾಗೂ ಸಾಮೂಹಿಕ ಗೀತ ಗಾಯನ ಹೀಗೆ ಎರಡು ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ನಮ್ಮ ದೇಶದ ಯಾವುದೇ ಭಾಷೆಯಲ್ಲಿ ರಚಿತವಾಗಿರುವ ದೇಶಭಕ್ತಿ ಗೀತೆಗಳನ್ನು ಹಾಡಲು ಅವಕಾಶವಿದೆ ಎಂದು ತಿಳಿಸಿದರು.

ವೈಯಕ್ತಿಕ ಹಾಡುಗಾರಿಕೆಗೆ 100 ರೂ. ಹಾಗೂ ಸಮೂಹ ಗಾಯನಕ್ಕೆ 200 ರೂ. ಶುಲ್ಕ ವಿಧಿಸಲಾಗಿದ್ದು, ಭಾಗವಹಿಸಲು ಇಚ್ಛಿಸುವ ಸ್ಪರ್ಧಿಗಳು ಪರಿಷತ್‌ನ ಎಸ್.ಸುಬ್ರಹ್ಮಣ್ಯ 94482 53359, ಹೆಚ್.ಡಿ. ರಮೇಶ್ 97400 26889, ಕಾತ್ಯಾಯಿನಿ 81052 44398 ಹಾಗೂ ಜಯಮಾಲ 72596 82938 ಇವರನ್ನು ಸಂಪರ್ಕಿಸಿ ಆಗಸ್ಟ್ 15ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಡಾ.ರಂಗನಾಥ್ ಮಾಹಿತಿ ನೀಡಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಪರಿಷತ್‌ನ ಪಿ.ವಿಠೋಬ, ದೇವರಾಜ್ ಅರಸ್, ಗಾಯತ್ರಿ ಹಾಗೂ ಜಯಮಾಲ ಉಪಸ್ಥಿತರಿದ್ದರು.



ಮೈಸೂರು ಪತ್ರಕರ್ತರ ಭವನದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಯೋಜಿಸಿರುವ ಮೈಸೂರು ಜಿಲ್ಲಾ ಮಟ್ಟದ ಬಹುಭಾಷಾ ದೇಶಭಕ್ತಿ ಗೀತಾ ಗಾಯನ ಸ್ಪರ್ಧೆಯ ಪೋಸ್ಟರ್ ಅನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು.


ಹೂಟಗಳ್ಳಿ ಬಡಾವಣೆಯಲ್ಲಿ ಚಾಮುಂಡೇಶ್ವರಿ ವರ್ಧಂತ್ಯುತ್ಸವ

ಮೈಸೂರು, ಜು.30(ಬಿಎಲ್‌ಯು)- ಮೈಸೂರಿನ ಹೂಟಗಳ್ಳಿ ಬಡಾವಣೆಯಲ್ಲಿ ಆಗಸ್ಟ್ 1ರಿಂದ ಎರಡು ದಿನಗಳ 17ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ ಉತ್ಸವ ಆಯೋಜಿಸಲಾಗಿದೆ ಎಂದು ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಎಸ್.ಸಿದ್ದರಾಜು ತಿಳಿಸಿದ್ದಾರೆ.



ಮೈಸೂರು ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಮೇಘಾಲಯದ ನೂತನ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್, ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಸಂಸದ ಯದುವೀರ್, ಬಿಜೆಪಿ ಮುಖಂಡ ಎಂ.ಶಿವಣ್ಣ, ಮಾಜಿ ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಆಗಸ್ಟ್ 1ರಂದು ಸಂಜೆ 6 ಗಂಟೆಗೆ ಕೆಹೆಚ್‌ಬಿ ಬಡಾವಣೆಯಲ್ಲಿ ಶ್ರೀ ಚಾಮುಂಡೇಶ್ವರಿ ಉತ್ಸವ ನಡೆಯಲಿದ್ದು, ಜಾನಪದ ಕಲಾತಂಡಗಳು ಭಾಗವಹಿಸಲಿವೆ ಎಂದು ಸಿದ್ದರಾಜು ತಿಳಿಸಿದರು.

ಸಹಕಾರಿಗೆ ಸನ್ಮಾನ...



ಮೈಸೂರಿನ ಬ್ರಾಹ್ಮಣ ಧರ್ಮ ಸಹಾಯ ಸಭಾದಲ್ಲಿ ನಡೆದ ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ 15ನೇ ವಾರ್ಷಿಕ ಸಭೆಯಲ್ಲಿ ಸಂಘದ ಅಧ್ಯಕ್ಷ ಬಿ.ಎಸ್.ಶ್ರೀನಾಥ್ ಅವರನ್ನು ಸನ್ಮಾನಿಸಲಾಯಿತು. ದಿ ಮೈಸೂರು ಸಿಟಿ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಬಿ.ನಾಗರಾಜು, ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ಡಿ.ಎಸ್.ವಿಶ್ವನಾಥ್, ನಿರ್ದೇಶಕರಾದ ನಾಗಭೂಷಣ್, ಸುರೇಶ್, ಸಂಜಯ್‌ಬಾಬು, ಗಣೇಶ್, ಮಹಾಲಕ್ಷ್ಮಿ, ಎಸ್.ಶ್ರೀಧರ್, ಕೆ.ಆರ್.ನರಸಿಂಹಮೂರ್ತಿ, ಸೊಸೈಟಿ ಕಾರ್ಯದರ್ಶಿ ಶಶಿಕಲಾ ಎಸ್.ಆರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.07.2024 ಬುಧವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬದುಕು ಬದಲಿಸಿದ ಶೋಧ'-ಬಾನುಲಿ ಸರಣಿ, ಪ್ರಸ್ತುತಿ: ಎನ್. ಎನ್. ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ. ಆರ್. ಸುಧಾ, ವ್ಯಾಖ್ಯಾನ : ಡಾ. ಲತಾ, ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ-'ಪ್ರಾಚ್ಯವಿದ್ಯಾ ಸಂಶೋಧನೆಯ ಮಹತ್ವ' ಕುರಿತು ಮೈಸೂರು ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಅಂದರೆ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಡಿ.ಪಿ. ಮಧುಸೂದನಾಚಾರ್ಯ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ರಾಜೀವ್ ತಾರಾನಾಥ್-ಸರೋದ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು : ಬಿ.ಸಿ. ರಶ್ಮಿ ಮತ್ತು ಬಿ.ಸಿ. ರಂಜನಿ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಹರಿಹರನ್. ಎಂ. ಬಿ ಮತ್ತು ಅಶೋಕ್. ಆರ್-ಯುಗಳ ಹಾಡುಗಾರಿಕೆ, 4.00 ಮಹಿಳಾರಂಗ : 'ಹೀಗಿದೆ ನೋಡಿ ನಮ್ ಜೋಡಿ', ಯಶಸ್ವಿ ವಕೀಲ ದಂಪತಿಗಳಾದ ಸುಮನ ಹಾಗೂ ರಾಮರವೀಂದ್ರ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಅಬ್ದುಲ್ ರಶೀದ್, 4.45 ಹಿಂದಿ ಪಾಠ-ಡಾ. ಮಾಧವಿ ಭಂಡಾರಿ, 6.50 ಕೃಷಿರಂಗ : 'ಕೃಷಿ ದೀವಿಗೆ'- ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ. ಮುಸುಕಿನ ಜೋಳದ ಬೇಸಾಯ. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಎನ್. ಮಲ್ಲಿಕಾರ್ಜುನ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಕ್ಷಿತಿಜ ಲಿಟರರಿ ಗುರು-ಸಾಹಿತ್ಯ ಸಾಧಕರೊಂದಿಗೆ ಸಂವಾದ. 8.15 ಸಂಸತ್ತಿನ ಉಭಯ ಕಲಾಪಗಳ ಸಮೀಕ್ಷೆ, 9.30 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಪಂಡಿತ್. ರಾಜೇಂದ್ರ ಪ್ರಸನ್ನ-ಕೊಳಲು ವಾದನ, 10.00 ಹಳ್ಳಿಹಾಡು, 10.30 ಸವಿನೆನಪು

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.
- **ಕಾವೇರಿ ಸಮೂಹ ವಿದ್ಯಾ ಸಂಸ್ಥೆ:** ಸೈನೋಸೈಟಿಸ್ ಮತ್ತು ತಲೆನೋವಿ (ನಾನಾ ವಿಧ)ಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಕೆಬಿಎಲ್ ಲೇಔಟ್, ದೇವೇಗೌಡ ಸರ್ಕಲ್ ಬಳಿ, ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ.
- **ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗ್ಯಾಸ್ಟ್ರೋ ಓಪಿಡಿ ಕೊಠಡಿ ಸಂಖ್ಯೆ 10, ಆಸ್ಪತ್ರೆ ಆವರಣ, ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆ, ಮಧ್ಯಾಹ್ನ 3ರಿಂದ 4 ಗಂಟೆವರೆಗೆ.
- **ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತ ಉದ್ಯೋಗಿಗಳ ಒಕ್ಕೂಟ :** ಸಂಘದ ನೂತನ ಕಟ್ಟಡ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ, ಅಧ್ಯಕ್ಷತೆ : ಮೈಸೂರು ವಿವಿ ನಿವೃತ್ತ ಉದ್ಯೋಗಿಗಳ ಒಕ್ಕೂಟದ ಅಧ್ಯಕ್ಷ ಡಾ.ಕೆ.ಮಹದೇವ್, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ವಿಶೇಷ ಆಹ್ವಾನಿತರು: ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್.ರೇಖಾ, ಸಿಂಡಿಕೇಟ್ ಸದಸ್ಯರಾದ ಡಾ.ಜೆ.ಶಿಲ್ಪಾ, ಮಹದೇಶು, ಸ್ಥಳ: ಕ್ರಾಫರ್ಡ್ ಭವನ, ಬೆಳಗ್ಗೆ 10.30ಕ್ಕೆ.
- **ಅವಧೂತ ದತ್ತಪೀಠ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಬೆಳಗ್ಗೆ 6ರಿಂದ ಸಂಜೆ 6 ರವರೆಗೆ ಶ್ರೀ ಸ್ವಾಮೀಜಿಯವರ ಏಕಾದಶೀ ಮೌನವ್ರತ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.
- **ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ :** 70ನೇ ವರ್ಷದ ಅಮೃತ ಮಹೋತ್ಸವದ ವರ್ಷಾಚರಣೆ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಸಚಿವರಾದ ಕೆ. ವೆಂಕಟೇಶ್, ಡಾ. ಎಂ.ಸಿ. ಸುಧಾಕರ್, ಶಾಸಕರಾದ ಸಿ. ಅನಿಲ್ ಕುಮಾರ್, ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸ್ಥಳ: ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಆವರಣ, ಬೆಳಗ್ಗೆ 10.30ಕ್ಕೆ.
- **ದಿನೇಶ್ ಗುಂಡೂರಾವ್ ಅಭಿಮಾನಿಗಳ ಬಳಗ:** ಕಾಂಗ್ರೆಸ್ ಯುವ ಮುಖಂಡ ದಿವಂಗತ ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಸಮಾಜ ಸೇವಕ ರಘುರಾಂ ವಾಜಪೇಯಿ, ಎನ್.ಎಂ. ನವೀನ್‌ಕುಮಾರ್, ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಸ್ಥಳ: ಅಕ್ಕನ ಬಳಗ ಶಾಲೆ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ, ಕರ್ನಾಟಕ ನಿರಾಶ್ರಿತರ ರಕ್ಷಣಾ ಪಡೆ ಟ್ರಸ್ಟ್:** ವಿಕಲಚೇತನರ ಕುಂದುಕೊರತೆ ಸಮಾಲೋಚನಾ ಸಭೆ, ಅಧ್ಯಕ್ಷತೆ: ಸಾಹಿತಿ ಬನ್ನೂರು ರಾಜು, ಪ್ರಾಸ್ತಾವಿಕ ನುಡಿ: ಹೆಚ್.ಎಲ್.ಯಮುನಾ, ಉಪಸ್ಥಿತರು: ಲಯನ್ ವಿಶ್ವನಾಥ್, ಆರ್.ಎಂ. ಸ್ವಾಮಿ, ರಾಚಪ್ಪ ಹುಣಸೀಮರದ, ಶ್ರೀನಿವಾಸ ಕುಮಾರ್, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ಕನ್ನಡಪರ ಹಿರಿಯ ಹೋರಾಟಗಾರ ತಾಯೂರು ವಿಠಲಮೂರ್ತಿ ಅವರಿಗೆ ನುಡಿನಮನ, ಪುಷ್ಪಾರ್ಚನೆ: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಪ್ರಧಾನ ನುಡಿ: ಸಾಹಿತಿ ಬನ್ನೂರು ಕೆ.ರಾಜು, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಶೇಷ ಆಹ್ವಾನಿತರು: ಹಿನಕಲ್ ಬಸವರಾಜು, ಮುಖ್ಯ ಅತಿಥಿಗಳು: ಮೂಗೂರು ನಂಜುಂಡಸ್ವಾಮಿ, ಜ್ಯೋತಿ ರೇಚಣ್ಣ, ಲಯನ್ ಟಿ.ಸುರೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.
- **ರೋಟರಿ ಮೈಸೂರು ಮಿಡ್‌ಟೌನ್ :** ಟ್ರಿನಿಟಿ ಅಕಾಡೆಮಿಕ್ ಎಕ್ಸಲೆನ್ಸ್ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಹರೀಶ್ ಮಾಚಿಯಾ ಕೋದಂಡೇರಾ, ಪ್ರಶಸ್ತಿ ಪುರಸ್ಕೃತರು : ಎಸ್. ಜಾನವಿ (ಎಸ್‌ಎಸ್‌ಎಲ್‌ಸಿ 623/625), ಪ್ರಥಮ್ ಆದಿತ್ಯ ಮೋಹನ್ (ಪಿಯುಸಿ-579/600), ಸ್ಥಳ: ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.
- **ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ, ಆದಿ ಕರ್ನಾಟಕ ಹಿತರಕ್ಷಣಾ ಸಮಿತಿ:** ದಿವಂಗತ ಆರ್. ಧ್ರುವನಾರಾಯಣ ಅವರ 63ನೇ ವರ್ಷದ ಜನ್ಮ ದಿನಾಚರಣೆ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಶಾಸಕರಾದ ದರ್ಶನ್ ಧ್ರುವನಾರಾಯಣ, ಕೆ. ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಡಿ.ತಿಮ್ಮಯ್ಯ, ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಎಂ. ಲಕ್ಷ್ಮಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಬಿ.ಬಸವಲಿಂಗಪ್ಪ ವೃತ್ತ, ಮಾನಂದವಾಡಿ ರಸ್ತೆ, ಅಶೋಕಪುರಂ, ಸಂಜೆ 7ಕ್ಕೆ.

ಮೈಸೂರು ಮಿತ್ರ ಬುಧವಾರ 31 ಜುಲೈ 2024

ದೇಶ - ವಿದೇಶ

ಹಳಿ ತಪ್ಪಿದ ಮುಂಬೈ–ಹೌರಾ ರೈಲು: ಇಬ್ಬರ ಸಾವು, 20 ಮಂದಿಗೆ ಗಾಯ

ರಾಂಚಿ: ಜಾರ್ಖಂಡ್‌ನ ಸೆರೈಕೆಲಾ ಖಾರ್ಸಾ ವಾನ್ ಜಿಲ್ಲೆಯಲ್ಲಿ ಮಂಗಳ



ವಾರ ಮುಂಜಾನೆ ಮುಂಬೈ–ಹೌರಾ ರೈಲಿನ 18 ಬೋಗಿಗಳು ಹಳಿತಪ್ಪಿದ ಪರಿಣಾಮ ಇಬ್ಬರು ಮೃತಪಟ್ಟಿದ್ದು, 20 ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಗ್ನೇಯ ರೈಲ್ವೆಯ ಚಕ್ರಧರಪುರ ವಿಭಾಗದ ಜಮ್‌ಶೆಡ್‌ಪುರದಿಂದ ಸುಮಾರು 80 ಕಿ.ಮೀ ದೂರದಲ್ಲಿರುವ ಬರಬಂಬೂ ಬಳಿ ಮುಂಜಾನೆ 3.45 ಗಂಟೆಗೆ ಈ ಅವಘಡ ಸಂಭವಿಸಿದೆ.

ರೈಲಿನ 18 ಬೋಗಿಗಳು ಹಳಿತಪ್ಪಿದ್ದು, ಇಬ್ಬರು ಮೃತಪಟ್ಟಿದ್ದು, ಅವಘಡದಲ್ಲಿ 20 ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ಬರಬಂಬೂನಲ್ಲಿಯೇ ಪ್ರಥಮ ವೈದ್ಯಕೀಯ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಚಕ್ರಧರಪುರಕ್ಕೆ ಕರೆದೊಯ್ಯಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಅವಘಡ ಸಂಭವಿಸಿರುವ ಸ್ಥಳದ ಹತ್ತಿರದಲ್ಲಿಯೇ ಮತ್ತೊಂದು ಗೂಡ್ಸ್ ರೈಲು ಹಳಿತಪ್ಪಿದೆ. ಆದರೆ, ಎರಡು ಅಪಘಾತಗಳು ಏಕಕಾಲದಲ್ಲಿ ಸಂಭವಿಸಿವೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ಆಗ್ನೇಯ ರೈಲ್ವೆ ವಕ್ತಾರ ಓಂ ಪ್ರಕಾಶ್ ಚರಣ್ ಹೇಳಿದ್ದಾರೆ.

ಇಮ್ರಾನ್ ಖಾನ್ ಪತ್ನಿ ವಿರುದ್ಧ 11 ಪ್ರಕರಣ

ಇಸ್ಲಾಮಾಬಾದ್: ಜೈಲಿನಲ್ಲಿ ಇರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪತ್ನಿ ಬುಶ್ರಾ ಬೀಬಿ ಅವರನ್ನು 11 ಪ್ರಕರಣಗಳಲ್ಲಿ ಶಂಕಿತೆ ಎಂದು ಹೆಸರಿಸಲಾಗಿದೆ. ಕಳೆದ ವರ್ಷದ ಮೇ 9ರಂದು ಸೇನಾ ಮುಖ್ಯ ಕಚೇರಿಯ ಮೇಲೆ ನಡೆದ ದಾಳಿ ಪ್ರಕರಣ ಕೂಡ ಈ 11



ಪ್ರಕರಣಗಳಲ್ಲಿ ಸೇರಿದೆ ಎಂದು ರಾವಲ್ಪಿಂಡಿ ಪೊಲೀಸರು ಇಸ್ಲಾಮಾಬಾದ್ ಹೈಕೋರ್ಟ್‌ಗೆ ಮಂಗಳವಾರ ತಿಳಿಸಿದ್ದಾರೆ. 49 ವರ್ಷ ವಯಸ್ಸಿನ ಬುಶ್ರಾ ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ವಿವರವನ್ನು ಪೊಲೀಸರು ಹೈಕೋರ್ಟ್‌ಗೆ ಸಲ್ಲಿಸಿದರು. ಬುಶ್ರಾ ಅವರು ಈಗ ಜೈಲಿನಲ್ಲಿದ್ದಾರೆ. ಬುಶ್ರಾ ವಿರುದ್ಧದ ಪ್ರಕರಣಗಳ ವಿವರ ನೀಡುವಂತೆ ನ್ಯಾಯಾಲಯವು ಪೊಲೀಸರಿಗೆ ಸೂಚಿಸಿತ್ತು. ಬುಶ್ರಾ ಅವರು ಇಮ್ರಾನ್ ಖಾನ್ ಅವರನ್ನು 2018ರಲ್ಲಿ ವರಿಸಿದ್ದರು. ಇಮ್ರಾನ್ ಅವರಿಗೆ ಬುಶ್ರಾ ಅವರು ಮೂರನೆಯ ಪತ್ನಿ. ಇಮ್ರಾನ್ ಖಾನ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಬುಶ್ರಾ ಅವರು ಬಹಳ ಪ್ರಭಾವಿ ಎಂದು ಪರಿಗಣಿಸಲಾಗಿತ್ತು. ಆದರೆ ಇಮ್ರಾನ್ ನೇತೃತ್ವದ ಸರ್ಕಾರ ಪತನಗೊಂಡ ನಂತರ ಪತಿ ಹಾಗೂ ಪತ್ನಿಯ ವಿರುದ್ಧ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ.

ವರುಣನ ಕೃಪೆಗಾಗಿ ಕತ್ತೆಗಳಿಗೆ ಜಾಮೂನು ತಿನ್ನಿಸಿದ ಗ್ರಾಮಸ್ಥರು

ಭೂಪಾಲ್: ಮಧ್ಯಪ್ರದೇಶದ ಮಂಡ್‌ಸೌರ್ ಜಿಲ್ಲೆಯ ಹಲವು ಭಾಗಗಳಲ್ಲಿ ಇನ್ನೂ ಸರಿಯಾಗಿ ಮಳೆ ಆರಂಭವಾಗದ ಕಾರಣ ಜನರು ಬರಗಾಲ ಬಾರದೇ ಇರಲು ಕತ್ತೆಗಳಿಗೆ ಮದುವೆ ಮಾಡಿಸಿದ್ದಾರೆ. ಇದಾದ ಕೆಲ ದಿನಗಳಿಗೆ ಪ್ರದೇಶದ



ಸುತ್ತಮುತ್ತ ಭಾರಿ ಮಳೆಯಾಗಿದ್ದು, ಕತ್ತೆಗಳಿಗೆ ಗುಲಾಬ್ ಜಾಮೂನು ತಿನ್ನಿಸುವ ಮೂಲಕ ಸಂಭ್ರಮಿಸಿದ್ದಾರೆ. ಇಲ್ಲಿನ ಬಹುತೇಕ ಭಾಗಗಳಲ್ಲಿ ಬರಗಾಲ ಬಾರದೇ ಇರಲು ಕತ್ತೆಗಳಿಗೆ ಗುಲಾಬ್ ಜಾಮೂನು ತಿನಿಸಲಾಗುತ್ತದೆ. ಈ ರೀತಿ ಮಾಡುವುದರಿಂದ ವರುಣ ದೇವನ ಕೃಪೆಗೆ ಪಾತ್ರವಾಗುತ್ತವೆ ಎಂಬುದು ಅಲ್ಲಿನ ಜನರ ನಂಬಿಕೆ. ಸದ್ಯ ಈ ಸಂಪ್ರದಾಯಕ್ಕೆ ಸಂಬಂಧಿಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿದೆ. ವಿಡಿಯೋದಲ್ಲಿ ಹಳ್ಳಿಗರು ಕತ್ತೆಗಳಿಗೆ ಗುಲಾಬ್ ಜಾಮೂನ್ ಅನ್ನು ತಿನ್ನಿಸುತ್ತಿರುವುದನ್ನು ಕಾಣಬಹುದು. ಕತ್ತೆಗಳಿಗೆ ಸ್ನಾನ ಮಾಡಿಸಿ, ಬಳಿಕ ಹೂವಿನ ಹಾರಗಳನ್ನು ತೊಡಿಸಿ ಪೂಜೆಗೈದು ಸಿಹಿ ತಿನಿಸು, ವಿಶೇಷವಾಗಿ ಗುಲಾಬ್ ಜಾಮೂನು ತಿನಿಸುವುದು ಇಲ್ಲಿನ ಸಂಪ್ರದಾಯ. ಇದೊಂದು ವಿಶಿಷ್ಟ ಸಂಪ್ರದಾಯ. ಈ ರೀತಿ ಮಾಡುವುದರಿಂದ ವರುಣ ದೇವನ ಕೃಪೆಗೆ ಪಾತ್ರವಾಗುತ್ತೇವೆ ಎಂಬ ನಂಬಿಕೆ ಅವರದು.

ನಾಯಿಗೆ ಹೆಚ್ಚು ಆಹಾರ ನೀಡಿ ಜೈಲು ಸೇರಿದ ಮಹಿಳೆ!

ನ್ಯೂಜಿಲ್ಯಾಂಡ್: ಸಾಕುನಾಯಿ ಇರಲಿ ಇಲ್ಲ ಬೀದಿನಾಯಿ ಇರಲಿ, ಅದಕ್ಕೆ ಆಹಾರ ನೀಡುವಾಗ ಎಚ್ಚರವಿರಲಿ. ನಾಯಿಗೆ ಹೊಟ್ಟೆ ತುಂಬಿದ್ಯಾ ಇಲ್ವಾ ಎಂಬು



ದನ್ನು ಪತ್ತೆ ಮಾಡದೆ, ನಿಮ್ಮಿಷ್ಟದಂತೆ ಅದಕ್ಕೆ ಆಹಾರ ಹಾಕಿದ್ರೆ ಜೈಲು ಸೇರಬೇಕಾಗುತ್ತೆ ಹುಷಾರ್. ಈ ಮಹಿಳೆ ಕೂಡ ಇಂಥದ್ದೇ ಕೆಲಸ ಮಾಡಿ ಈಗ ಜೈಲು ಸೇರಿದ್ದಾಳೆ. ತನ್ನ ಸಾಕುನಾಯಿಗೆ ಅತಿಯಾಗಿ ಆಹಾರ ನೀಡಿದ್ದೇ ಈಕೆಗೆ ಮುಳುವಾಗಿದೆ. ನಾಯಿಗೆ ಆಹಾರ ನೀಡಿ ನೀಡಿ ಅದರ ತೂಕ ಹೆಚ್ಚಾಗಿದ್ದಲ್ಲದೆ ಒಂದು ದಿನ ನಾಯಿ ಸಾವನ್ನಪ್ಪಿದೆ. ಈ ಪ್ರಕರಣದಲ್ಲಿ ಮಹಿಳೆಯನ್ನು ಬಂಧಿಸಲಾಗಿದೆ. ನ್ಯೂಜಿಲ್ಯಾಂಡ್‌ನಲ್ಲಿ ಈ ಘಟನೆ ನಡೆದಿದೆ. ಮಹಿಳೆಗೆ ಎರಡು ತಿಂಗಳ ಜೈಲು ಶಿಕ್ಷೆಯನ್ನು ವಿಧಿಸಲಾಗಿದೆ. ಮಹಿಳೆ ನಾಯಿಗೆ ಮಿತಿಗಿಂತ ಹೆಚ್ಚು ಆಹಾರವನ್ನು ನೀಡಿದ್ದರಿಂದ ನಾಯಿ ಸಾವನ್ನಪ್ಪಿದೆ. ರಾಯಲ್ ನ್ಯೂಜಿಲೆಂಡ್ ಸೊಸೈಟಿ ಫಾರ್ ದಿ ಪ್ರಿವೆನ್ಷನ್ ಆಫ್ ಕ್ರೌಲ್ಟಿ ಟು ಅನಿಮಲ್ಸ್ ಪ್ರಕಾರ, ಪ್ರಾಣಿ ನಿಯಂತ್ರಣ ಅಧಿಕಾರಿಗಳು ಮಹಿಳೆ ಮನೆಗೆ ಹೋದಾಗ ನುಗ್ಗಿ ಹೆಸರಿನ ನಾಯಿ ನೋಡಿದರು. ನಾಯಿ ಪ್ರತಿದಿನ ಮಿತಿಗಿಂತ ಹೆಚ್ಚು ಆಹಾರ ಸೇವನೆ ಮಾಡಿದ್ದರಿಂದ ಅದರ ತೂಕ 53.7 ಕೆ.ಜಿ. ಯಾಗಿತ್ತು. ಎಷ್ಟು ಕೊಬ್ಬಿತ್ತೆಂದ್ರೆ ಅದರ ಹೃದಯಬಡಿತ ಕೇಳಲು ಸಾಧ್ಯವಾಗ್ತಿರಲಿಲ್ಲ. ಅದರ ತೂಕ ಹೆಚ್ಚಾದ ಕಾರಣ ಅದು ನಡೆಯೋದು ಕಷ್ಟವಾಗಿತ್ತು. 10 ಮೀಟರ್ ನಡೆಯಬೇಕು ಅಂದ್ರೆ ಅದು ಮೂರು ಬಾರಿ ನಿಲ್ಲುತ್ತಿತ್ತು.

ವೃದ್ಧೆಯನ್ನು ಅಲ್ಯೂಮಿನಿಯಂ ಪಾತ್ರೆಯಲ್ಲಿ ಕೂರಿಸಿಕೊಂಡು ಹೊಳೆ ದಾಟಿಸಿದ ವ್ಯಕ್ತಿ

ವಿಶಾಖಪಟ್ಟಣಂ: ದೇಶದ ಹಲವೆಡೆ ಮಳೆ ಅವಾಂತರ ಸೃಷ್ಟಿಸಿದೆ. ಅತಿವೃಷ್ಟಿಯಿಂದಾಗಿ ದೇಶದ ಹಲವೆಡೆ ಪ್ರವಾಹ ಉಂಟಾಗಿದ್ದು, ಜನರು ಒಂದು ಕಡೆಯಿಂದ ಮತ್ತೊಂದು ಸ್ಥಳಕ್ಕೆ ತೆರಳಲು ಪರದಾಡುವಂತಾಗಿದೆ. ಇದೇ ರೀತಿಯ ಘಟನೆ ಆಂಧ್ರಪ್ರದೇಶದ ಹಳ್ಳಿ



ಯೊಂದರಲ್ಲಿ ನಡೆದಿದ್ದು, ಅನಾರೋಗ್ಯದಿಂದ ಬಳಲುತ್ತಿದ್ದ ವೃದ್ಧೆಯನ್ನು ದೊಡ್ಡ ಅಲ್ಯೂಮಿನಿಯಂ ಪಾತ್ರೆಯಲ್ಲಿ ಕುಳ್ಳಿರಿಸಿ ಪ್ರವಾಹದ ಹೊಳೆಯನ್ನು ದಾಟಿಸಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿದಾಡುತ್ತಿದೆ. ಆಂಧ್ರಪ್ರದೇಶದ ವಿಶಾಖಪಟ್ಟಣಂ ಜಿಲ್ಲೆಯ ಪೇಡದ ಜಾಮಿಗುಡಾ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಗ್ರಾಮದ ಹಿರಿಯ ಮಹಿಳೆಯೊಬ್ಬರು ಅಸ್ವಸ್ಥಗೊಂಡು ಆಸ್ಪತ್ರೆಗೆ ತುರ್ತಾಗಿ ಭೇಟಿ ನೀಡಬೇಕಾಗಿತ್ತು. ಆದರೆ, ನಿರಂತರ ಮಳೆಯಿಂದಾಗಿ ಗ್ರಾಮವು ಜಿಲ್ಲೆಯಿಂದ ಸಂಪರ್ಕ ಕಡಿತಗೊಂಡಿದ್ದರಿಂದ ಆಕೆಗೆ ಪ್ರಯಾಣಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಗ್ರಾಮಸ್ಥರು ಮಹಿಳೆಯನ್ನು ಅಲ್ಯೂಮಿನಿಯಂ ಪಾತ್ರೆಯಲ್ಲಿ ಕುಳ್ಳಿರಿಸಿ ಪ್ರವಾಹದ ಹೊಳೆಯನ್ನು ದಾಟಿಸಿದ್ದಾರೆ.

ವಿಡಿಯೋ ಎಲ್ಲೆಡೆ ವೈರಲ್ ಆಗುತ್ತಿದ್ದಂತೆ ನೆಟ್ಟಿಗರಿಂದ ಭಾರಿ ಆಕ್ರೋಶಕ್ಕೆ ಕಾರಣವಾಗಿದೆ. ಆಂಧ್ರಪ್ರದೇಶದಲ್ಲಿ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದ ನೂತನ ಸರ್ಕಾರವು ಆದಿವಾಸಿಗಳು ನಿತ್ಯವೂ ತೊಂದರೆ ಎದುರಿಸುತ್ತಿರುವ ಈ ಗ್ರಾಮಗಳ ಮೂಲಸೌಕರ್ಯಗಳ ಸುಧಾರಣೆಗೆ ಮೊದಲು ಶ್ರಮಿಸಬೇಕು ಎಂದು ನೆಟ್ಟಿಗರು ಕಾಮೆಂಟ್‌ನಲ್ಲಿ ಬರೆದುಕೊಂಡಿದ್ದಾರೆ.

ಎರಡೆರಡು ಬಾರಿ ಸ್ನಾನ ಮಾಡಿಸಿ ಪಾದಪೂಜೆ ಮಾಡಿದರೆ ಪೌರಕಾರ್ಮಿಕರ ಸಮಸ್ಯೆ ಬಗೆಹರಿಯದು

● ಪ್ರಧಾನಿಯಿಂದ ಪೌರಕಾರ್ಮಿಕರ ಪಾದಪೂಜೆ ಬಗ್ಗೆ ಮಾಜಿ ಮೇಯರ್ ನಾರಾಯಣ್ ವಾಗ್ದಾಳಿ ● ಪಾದಪೂಜೆಯಿಂದ ಹೊಟ್ಟೆ ತುಂಬದು, ಶಿಕ್ಷಣ ದೊರೆಯದು

ಮೈಸೂರು,ಜು.30(ಜಿಎ)–ಪಾದಪೂಜೆ ಮಾಡಿಸಿಕೊಳ್ಳಲು ಪೌರಕಾರ್ಮಿಕರು ಸ್ವಾಮೀಜಿಗಳಲ್ಲ. ಎರಡೆರಡು ಬಾರಿ ಸ್ನಾನ ಮಾಡಿಸಿ ಪಾದಪೂಜೆ ಮಾಡಿದರೆ ಪೌರಕಾರ್ಮಿಕರ ಹೊಟ್ಟೆ ತುಂಬುವುದಿಲ್ಲ. ಮಕ್ಕಳಿಗೆ ಶಿಕ್ಷಣ ದೊರೆಯುವುದಿಲ್ಲ ಎಂದು ಮಾಜಿ ಮೇಯರ್ ನಾರಾಯಣ್ ಪ್ರಧಾನಿ ಪಾದಪೂಜೆ ಬಗ್ಗೆ ವಾಗ್ದಾಳಿ ನಡೆಸಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಮಂಗಳವಾರ ಆಯೋಜಿಸಿದ್ದ ಸಫಾಯಿ ಕರ್ಮಚಾರಿ ಘಟಕದ ನೂತನ ಜಿಲ್ಲಾಧ್ಯಕ್ಷ ಎಸ್.ನಾಗರಾಜು ಅಧಿಕಾರ ಸ್ವೀಕಾರ ಮತ್ತು ಪೌರಕಾರ್ಮಿಕರ ಜಿಲ್ಲಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಐವರು ಪೌರಕಾರ್ಮಿಕರಿಗೆ ಎರಡೆರಡು ಬಾರಿ ಸ್ನಾನ ಮಾಡಿಸಿ ಪಾದಪೂಜೆ ಮಾಡುವುದರಿಂದ ದೇಶದ ಪೌರಕಾರ್ಮಿಕರೆಲ್ಲರ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅವರ ಪಾದಪೂಜೆ ಬೂಟಾಟಿಕೆಯಾಗಿದ್ದು, ಇವತ್ತಿಗೂ ಮಲ ಹೊರುವ ಪದ್ಧತಿ ನಿಂತಿಲ್ಲ. ಮಲಗುಂಡಿಯಲ್ಲಿ ಬಿದ್ದು ಸಾಯುತ್ತಿದ್ದಾರೆ. ಕನಿಷ್ಠ ವೇತನಕ್ಕೆ ದುಡಿಯುತ್ತಿದ್ದಾರೆ. ಗುತ್ತಿಗೆದಾರರಡಿ ಆಧುನಿಕ ಜೀತ ಪದ್ಧತಿಯಲ್ಲಿ ನರಳುತ್ತಿದ್ದಾರೆ. ಈ ಕಷ್ಟಗಳನ್ನು ಬಗೆಹರಿಸಬೇಕಾದ ಪ್ರಧಾನಿಗಳು ಪಾದಪೂಜೆ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜಲಗಾರ, ತೋಟಿ, ಚಾಡಮಾಲಿ ನಾನಾ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಪೌರಕಾರ್ಮಿಕರ ಜಿಲ್ಲಾ ಸಮಾವೇಶದಲ್ಲಿ ಸಫಾಯಿ ಕರ್ಮಚಾರಿ ಘಟಕದ ನೂತನ ಜಿಲ್ಲಾಧ್ಯಕ್ಷರಾಗಿ ಎಸ್.ನಾಗರಾಜು ಅಧಿಕಾರ ಸ್ವೀಕರಿಸಿದರು.

ಹೆಸರಿನಿಂದ ಕರೆಯುತ್ತಿದ್ದ ಜನಾಂಗಕ್ಕೆ ಪೌರಕಾರ್ಮಿಕನೆಂದು ನಾಮಕರಣ ಮಾಡಿದ ಡಿ.ದೇವರಾಜ ಅರಸು ಘನತೆ ತಂದುಕೊಟ್ಟರು. ಬಸವಲಿಂಗಪ್ಪ ಮಲ ಹೊರುವ ಪದ್ಧತಿ ರದ್ದು ಮಾಡಿದರು. ಸಿದ್ದರಾಮಯ್ಯ ಅವರು ಉದ್ಯೋಗ ಖಾಯಂ, ನೇರ ಪಾವತಿ ಮೂಲಕ ಸಂಬಳ, ವಿದೇಶ ಪ್ರವಾಸದಂತಹ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅಭಿವೃದ್ಧಿಗೆ ಕಾರಣರಾಗಿದ್ದಾರೆ ಎಂದು ಸ್ಮರಿಸಿದರು.

ಪೌರಕಾರ್ಮಿಕರ ಸಂಘಟನೆಗಾಗಿ ಸಮಿತಿ ರಚನೆ ಮಾಡಿದ್ದಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಅಭಿನಂದನೆ ಸಲ್ಲಿಸಿದ ನಾರಾಯಣ ಅವರು, ಸಮಿತಿಗೆ ನೂತನ ಜಿಲ್ಲಾಧ್ಯಕ್ಷ ಎಸ್.ನಾಗರಾಜ್ ನೇಮಕಕ್ಕೆ ವಿರೋಧ ಇತ್ತು. ಬಿಜೆಪಿ, ಜೆಡಿಎಸ್‌ನಲ್ಲಿದ್ದರೆಂದು ಆರೋಪಿಸಿದರು. ಆದರೆ, ನಾಗರಾಜ್ ಕ್ರಿಯಾಶೀಲ ಮನುಷ್ಯ ಎಂದು ನೇಮಕವನ್ನು ಸಮರ್ಥಿಸಿಕೊಂಡರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಎಸ್.ನಾಗರಾಜ್ ಅವರು ಜನಾಂಗದ ಸೇವೆ ಮಾಡಲು ಮುಂದೆ ಬಂದಿದ್ದಕ್ಕೆ ಅವಕಾಶ ದೊರೆತಿದೆ. ಯಾವುದೂ ಶಾಶ್ವತ ಅಲ್ಲ. ಪರ ವಿರೋಧ ಗುಂಪುಗಾರಿಕೆಗೆ ಅವಕಾಶ ಇಲ್ಲ. ಅವಕಾಶ ಸಿಕ್ಕವರು ಗೌರವ ತರುವಂತೆ ಕೆಲಸ ಮಾಡಬೇಕು ಎಂದರು.

ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್.ಮಂಜುನಾಥ್ ಮಾತನಾಡಿ, ಪೌರಕಾರ್ಮಿಕರು ತಮ್ಮ ವೃತ್ತಿಯನ್ನು ಮಾಡುವುದಿಲ್ಲ ಎಂಬ ದೃಢ ನಿರ್ಧಾರ ಮಾಡಬೇಕು. ಇತರೆ ಸಮುದಾಯವರು ಯಾಕೇ ಪೌರಕಾರ್ಮಿಕ ವೃತ್ತಿ ಮಾಡುವುದಿಲ್ಲ? ಇನ್ನೆಷ್ಟು ವರ್ಷಗಳು ಪೌರಕಾರ್ಮಿಕರು ಕಸ ಗುಡಿಸಬೇಕು? ಪೌರಕಾರ್ಮಿಕರು ನಿವೃತ್ತರಾಗುತ್ತಿರುವವರು ಶೇ.3ರಷ್ಟು ಉಳಿದವರು ಕರ್ತವ್ಯದಲ್ಲಿದ್ದಾಗಲೇ ನಾನಾ ಕಾಯಿಲೆಗಳಿಗೆ ತುತ್ತಾಗಿ ಮೃತಪಡುತ್ತಿದ್ದಾರೆ. ಸಂಬಳ ನೀಡುವಂತೆ ಸರ್ಕಾರವನ್ನು ಒತ್ತಾಯಿಸುವುದು ಬೇಡ. ಪೌರಕಾರ್ಮಿಕ ವೃತ್ತಿಯನ್ನೂ ಮಾಡುವುದು ಬೇಡ ಎಂದರು.

ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಭಾರತೀ ಶಂಕರ್, ಎಪಿಎಂಸಿ ಮಾಜಿ ಅಧ್ಯಕ್ಷ ಅಹಿಂದ ಜವರಪ್ಪ, ಜಿಪಂ ಮಾಜಿ ಅಧ್ಯಕ್ಷ ಹೂಟಗಳ್ಳಿ ಮಹದೇವ್, ಮಾಜಿ ಸದಸ್ಯ ಅರುಣ್‌ಕುಮಾರ್, ಮಾಜಿ ಮೇಯರ್ ಅನಂತು, ಕೆಪಿಸಿಸಿ ಸಂಯೋಜಕ ಮಂಜುನಾಥ್, ಕೆ.ರಮೇಶ್, ಸುನಿಲ್ ನಾರಾಯಣ, ಫ್ರಾನ್ಸಿಸ್, ಮಂಜುನಾಥ್, ಉಮಾಶಂಕರ್, ನಾಗರಾಜು, ಲಕ್ಷ್ಮಣ್, ಸತ್ಯ, ವಿನಯ್, ಕೃಷ್ಣ, ನಾಗರತ್ನಮ್ಮ ಮಂಜುನಾಥ್, ಕುಮಾರಿ, ಶಿವಪ್ರಸಾದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೊಡ್ಡ ಬೆಕ್ಕುಗಳ ಸಂಖ್ಯೆ ಹೆಚ್ಚಾದಂತೆ ಅರಣ್ಯ ಸಂರಕ್ಷಣೆಯೂ ಸಾಧ್ಯವಾಗುತ್ತದೆ

● ಐಬಿಸಿಎ ಯೋಜನಾ ನಿರ್ದೇಶಕ ಸೌಮಿತ್ರ ದಾಸ್‌ಗುಪ್ತ ಅಭಿಮತ

● 'ವಿಶ್ವ ಹುಲಿ ದಿನ' ಸಂಬಂಧಿತ ವಿಚಾರ ಸಂಕಿರಣ ಸಮಾರೋಪ



ಮೈಸೂರಿನ ಮೃಗಾಲಯದಲ್ಲಿ 'ವಿಶ್ವ ಹುಲಿ ದಿನ'ದ ಅಂಗವಾಗಿ 'ದೊಡ್ಡ ಬೆಕ್ಕುಗಳ ಸಂರಕ್ಷಣೆಗೆ ಪರಿಣಾಮಕಾರಿ ಕ್ರಮಗಳು' ಕುರಿತು ನಡೆದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅಂತರರಾಷ್ಟ್ರೀಯ ದೊಡ್ಡ ಬೆಕ್ಕುಗಳ ಒಕ್ಕೂಟದ (ಐಬಿಸಿಎ) ಯೋಜನಾ ನಿರ್ದೇಶಕ ಸೌಮಿತ್ರ ದಾಸ್‌ಗುಪ್ತ ಹೊತ್ತಿಗೆ ಬಿಡುಗಡೆ ಮಾಡಿದರು.

ಮೈಸೂರು,ಜು.30(ಎಂಟಿವೈ)– ದೇಶದಲ್ಲಿ ಕೆಲ ವರ್ಷಗಳಿಂದ ಹುಲಿ, ಚಿರತೆ ಸೇರಿದಂತೆ ದೊಡ್ಡ ಬೆಕ್ಕುಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದಲೇ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ನೆರವಾಗಿದೆ ಎಂದು ಅಂತರರಾಷ್ಟ್ರೀಯ ದೊಡ್ಡ ಬೆಕ್ಕುಗಳ ಒಕ್ಕೂಟದ (ಐಬಿಸಿಎ) ಯೋಜನಾ ನಿರ್ದೇಶಕ ಸೌಮಿತ್ರ ದಾಸ್‌ಗುಪ್ತ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ 'ವಿಶ್ವ ಹುಲಿ ದಿನ'ದ ಪ್ರಯುಕ್ತ ಮಂಗಳವಾರ 'ದೊಡ್ಡ ಬೆಕ್ಕುಗಳ ಸಂರಕ್ಷಣೆಗೆ ಪರಿಣಾಮಕಾರಿ ಕ್ರಮಗಳು' ಕುರಿತು ನಡೆದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಭಾರತದಲ್ಲಿ ಅಳಿವಿನಂಚಿಗೆ ದೂಡಲ್ಪಟ್ಟಿದ್ದ ಹುಲಿ, ಆನೆ, ಚಿರತೆ, ಘೇಂಡಾಮೃಗ ಸೇರಿದಂತೆ ಇನ್ನಿತರ ಪ್ರಾಣಿಗಳ ಸಂಖ್ಯೆಯಲ್ಲಿ ಆದ ಹೆಚ್ಚಳವೂ ಅರಣ್ಯ ಸಂರಕ್ಷಣೆ ಮಾಡಿದೆ! ಇದಕ್ಕೆ ಅರಣ್ಯ ಇಲಾಖೆ ಮಾತ್ರವಲ್ಲದೆ, ಸಮುದಾಯದ ಸಹಕಾರವೂ ಕಾರಣವಾಗಿದೆ. ಹಾಗಾಗಿ ಭೂಮಿ ಮೇಲಿನ ಜೀವವೈವಿಧ್ಯತೆಯು ಉಳಿದಿದೆ ಎಂದು ತಿಳಿಸಿದರು.

ದೊಡ್ಡಬೆಕ್ಕುಗಳಿರುವ ಅರಣ್ಯವು ಸಸ್ಯ ಹಾಗೂ ಪ್ರಾಣಿ ಸಂಪತ್ತಿನಿಂದ ಸಮೃದ್ಧವಾಗಿರುತ್ತದೆ. ಈ ಸರಣಿಯ ಪ್ರಾಣಿಗಳ ಸಂರಕ್ಷಣೆಗಾಗಿ ಹಲವು ಕಾರ್ಯಕ್ರಮ ನಡೆಸಲಾಗುತ್ತಿದ್ದು, ಹುಲಿ, ಸಿಂಹ, ಚಿರತೆ, ಹಿಮ ಚಿರತೆ, ಚೀತಾ, ದಕ್ಷಿಣ ಅಮೆರಿಕದ ಜಾಗ್ವಾರ್, ಉತ್ತರ ಅಮೇರಿಕದ ಪುಮಾ ಸಂರಕ್ಷಣೆ ಮಾಡಲು 'ಅಂತರರಾಷ್ಟ್ರೀಯ ದೊಡ್ಡ ಬೆಕ್ಕುಗಳ ಒಕ್ಕೂಟ' ರಚನೆಯಾಗಿದೆ. ಇದರಲ್ಲಿ ಈಗಾಗಲೇ 21 ದೇಶಗಳು ಸಹಿ ಹಾಕಿ, ದೊಡ್ಡ ಬೆಕ್ಕುಗಳ ಸಂರಕ್ಷಣೆಗಾಗಿ ರೂಪಿಸಿರುವ ನೀತಿಗಳ ಅನುಷ್ಠಾನಕ್ಕೆ ಸಮ್ಮತಿಸಿವೆ ಎಂದು ವಿವರಿಸಿದರು.

ದೇಶದ ಅರಣ್ಯದಲ್ಲಿ ವನ್ಯಜೀವಿಗಳ ಸಾಂದ್ರತೆ ಹೆಚ್ಚಳ ಪರಿಣಾಮ ಮಾನವ–ವನ್ಯಜೀವಿ ಸಂಘರ್ಷ ತೀವ್ರವಾಗಿದೆ. ಅದನ್ನು ಪರಿಹರಿಸಲು ಸಾಂಘಿಕ ಸಹಭಾಗಿತ್ವ ಮುಖ್ಯವಾಗಿದೆ. ಹುಲಿ ಸೇರಿದಂತೆ ಯಾವುದೇ ವನ್ಯಜೀವಿಗಳ ಸಂರಕ್ಷಣೆ ವಿಚಾರದಲ್ಲಿ ಸರ್ಕಾರಗಳು ಕೈಗೊಳ್ಳುವ ಕ್ರಮ ಹಾಗೂ ಜಾರಿಗೊಳಿಸುವ ನೀತಿ ಪ್ರಮುಖ ಪಾತ್ರ ವಹಿಸಿವೆ. ದೇಶದ ಶೇ.70ರಷ್ಟು ಅರಣ್ಯ ಪ್ರದೇಶವು ಇದೀಗ ದೊಡ್ಡಬೆಕ್ಕುಗಳ ಆವಾಸ ಸ್ಥಾನವಾಗಿ ಮಾರ್ಪಟ್ಟಿವೆ. ವನ್ಯ ಸಂಪತ್ತನ್ನು ರಕ್ಷಿಸಿದರೆ, ಮುಂದಿನ ಪೀಳಿಗೆಗೆ ಉತ್ತಮ ಅರಣ್ಯ ಪ್ರದೇಶ ಕೊಡುಗೆ ನೀಡಿದಂತಾಗುತ್ತದೆ. ಆ ಮೂಲಕ ದೊಡ್ಡ ಬೆಕ್ಕುಗಳೊಂದಿಗೆ ಇತರೆ ಪ್ರಾಣಿಗಳನ್ನು ಸಂರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ನಾವು ಜಾಗತಿಕ ತಾಪಮಾನ ಏರಿಕೆಯನ್ನು ಅಂದಾಜಿಸಲು ಮೊದಲು ವಿಫಲರಾದೆವು. ಈಗ ಎಲ್ಲೆಡೆ ಅದರ ಬಗ್ಗೆ ಮಾತನಾಡುವಂತಾಗಿದೆ. ತಾಪಮಾನ ತಗ್ಗಿಸುವ ಪ್ರಯತ್ನಗಳನ್ನು ತೀವ್ರಗೊಳಿಸದಿದ್ದರೆ 100 ವರ್ಷಗಳಲ್ಲಿ ವನ್ಯಸಂಪತ್ತು ಇಲ್ಲವಾಗಲಿದೆ. ಅದರ ಜೊತೆಗೆ ನಮ್ಮ ಜೀವನವೂ ಸವಾಲಾಗಲಿದೆ. ಈ ಹಿನ್ನೆಲೆಯಲ್ಲಿ ವನ್ಯ ಸಂಪತ್ತಿನ ಸಂರಕ್ಷಣೆ ಮುಖ್ಯ ಗುರಿಯೊಂದಿಗೆ ದೊಡ್ಡಬೆಕ್ಕುಗಳ ರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ಇದೇ ವೇಳೆ 'ವೈಲ್ಡ್ ಕ್ಯಾಟ್ಸ್ ಆಫ್ ಇಂಡಿಯಾ' ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಮನೋ ವಿಜ್ಞಾನಿ ಡಾ.ಮೇವಾ ಸಿಂಗ್, ಭಾರತೀಯ ವನ್ಯಜೀವಿ ಸಂಸ್ಥೆಯ (ಡಬ್ಲ್ಯುಐಐ) ವಿಜ್ಞಾನಿ ಡಾ.ಖಮರ್ ಖುರೇಷಿ, ಮೃಗಾಲಯದ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ.ಸುನಿಲ್ ಪನ್ವಾರ್, ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಉಪಸ್ಥಿತರಿದ್ದರು.

ಅಂತರ ಶಾಲಾ ರಸಪ್ರಶ್ನೆ ಸ್ಪರ್ಧೆ ವಿಜೇತರು



ಅಂತರ–ಶಾಲಾ ರಸಪ್ರಶ್ನೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಜು. 30– ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಹಿರಿಯ ವಿದ್ಯಾರ್ಥಿನಿಯರ ಸಂಘದ ವತಿಯಿಂದ ಅಂತರ– ಶಾಲಾ ರಸಪ್ರಶ್ನೆ ಸ್ಪರ್ಧೆಯನ್ನು 9 ಮತ್ತು 10ನೇ ತರಗತಿಯ ವಿದ್ಯಾರ್ಥಿನಿಯರಿಗೆ ಏರ್ಪಡಿಸಲಾಗಿತ್ತು.

ಮೈಸೂರು ನಗರದ ವಿವಿಧ ಶಾಲೆಯ ವಿದ್ಯಾರ್ಥಿನಿಯರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಆರ್ಕಿಟೆಕ್ಚರ್ ವಿಭಾಗದ ಮುಖ್ಯಸ್ಥೆ ದೇವಿಕಾ, ಸಂಸ್ಥೆಯಲ್ಲಿನ ವಿವಿಧ ಕೋರ್ಸ್ ಕುರಿತು ಸಂಕ್ಷಿಪ್ತವಾಗಿ ಹೇಳಿದರು.

ಪ್ರಾಂಶುಪಾಲ ವಿ.ಬಿ.ಲೋಕೇಶ್ ಮಾತನಾಡಿ, ಇಂತಹ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಸ್ಪರ್ಧಾತ್ಮಕ ಮನೋಭಾವ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಇದೇ ವೇಳೆ ರಸಪ್ರಶ್ನೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಹಿರಿಯ ವಿದ್ಯಾರ್ಥಿನಿಯರ ಸಂಘದ ಸದಸ್ಯರಾದ ಕುಮಾರಿ, ಮಂಜುಳಾ, ಜಯಮಾಲ, ದೇವಿಕಾ, ವಿಜಯಲಕ್ಷ್ಮಿ, ಅನುಷಾ, ರೂಪಶ್ರೀ, ರಶ್ಮಿ, ಕಾವ್ಯ ಹಾಗೂ ಮಾಲ ಮತ್ತಿತರರು ಉಪಸ್ಥಿತರಿದ್ದರು.

ಬಹುಮಾನ ವಿಜೇತರು: ಪ್ರಥಮ ಬಹುಮಾನ: ದಿಶಾ ಆರ್ ಮತ್ತು ನೇಹ ಉಮೇಶ್, ಸೆ. ಜೋಸೆಫ್ ಸೆಂಟ್ರಲ್ ಸ್ಕೂಲ್, ಮೈಸೂರು; ದ್ವಿತೀಯ ಬಹುಮಾನ: ಪುನರ್ವಿ ನವೀನ್ ಮತ್ತು ಹಾಸಿನಿ ಜಿ ಸಂದೀಪ್, ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, ಸಿದ್ದಾರ್ಥನಗರ, ಮೈಸೂರು; ತೃತೀಯ ಬಹುಮಾನ: ದೀಕ್ಷಿತಾ ಮತ್ತು ತಾನ್ಯ ಆರ್ ಎನ್, ಭಾರತೀಯ ವಿದ್ಯಾ ಭವನ, ಮೈಸೂರು.

ಬಿಜೆಪಿ ವಿವಿಧ ಸ್ಥಾನಗಳಿಗೆ ನೇಮಕ



ಮೈಸೂರಿನ ನೇರಂಬಳ್ಳಿ ಸಾವಿತ್ರಮ್ಮ ಛತ್ರದಲ್ಲಿ ಹಮ್ಮಿಕೊಂಡಿದ್ದ ಮೈಸೂರು ಮಹಾನಗರದ ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷದ ವಿವಿಧ ಹುದ್ದೆಗಳಿಗೆ ನೇಮಕಗೊಂಡ ಕಾರ್ಯಕರ್ತರಿಗೆ ಆದೇಶ ಪತ್ರ ನೀಡಲಾಯಿತು. ಅಧ್ಯಕ್ಷರಾಗಿ ರಾಕೇಶ್‌ಭಟ್ ಅವರನ್ನು ನೇಮಕ ಮಾಡಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಆದೇಶ ಪತ್ರ ನೀಡಿದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಚಾಮುಂಡೇಶ್ವರಿ ಕ್ಷೇತ್ರದ ಮುಖಂಡ ಕವೀಶ್‌ಗೌಡ, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಹೆಚ್.ಜಿ.ಗಿರಿಧರ್, ಕೇಬಲ್ ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

'ನಾವು ಭಾರತೀಯರು' ದೇಶಭಕ್ತಿಗೀತೆಗಳ ಸ್ಪರ್ಧೆ

ಮೈಸೂರು, ಜು.30–ಮೈಸೂರಿನ ಒಲವು ಫೌಂಡೇಷನ್ ವತಿಯಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆ.11ರಂದು ಬೆಳಗ್ಗೆ 10 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ 'ನಾವು ಭಾರತೀಯರು' ದೇಶಭಕ್ತಿಗೀತೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಆ.8ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ಮೊ. 9448942998, 8884045858 ಸಂಪರ್ಕಿಸಬಹುದು.

ಉಚಿತ ತಪಾಸಣಾ ಶಿಬಿರ

ಮೈಸೂರು, ಜು. 30–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಆ.1ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೈಸೂರಲ್ಲಿ ಸಂಗೀತ ಚಟುವಟಿಕೆಗಳು ಹೆಚ್ಚಳ

ಸ್ವರಾಲಯ ಸಾಂಸ್ಕೃತಿಕ ಹಬ್ಬದಲ್ಲಿ ವಿದ್ವಾನ್ ಸಿ.ವಿಶ್ವನಾಥ್ ಸಂತಸ

ಮೈಸೂರು, ಜು.30–ಮೈಸೂರಿನಲ್ಲಿ ಸಂಗೀತ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಭಾರತೀಯ ಸಂಗೀತ ಪರಂಪರೆಯಲ್ಲಿ ಸ್ವರಾಲಯ ಸಂಗೀತ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ಡಾ. ಸುಮ ಹರಿನಾಥ್ ಅವರ ಪಾಲಿದೆ ಎಂದು ದೂರದರ್ಶನ ಹಾಗೂ ಆಕಾಶವಾಣಿ ಹಿರಿಯ ಶ್ರೇಣಿ ಕಲಾವಿದರಾದ ವಿದ್ವಾನ್ ವಿಶ್ವನಾಥ್ ಸಿ. ಅಭಿಪ್ರಾಯಪಟ್ಟರು.

ಗಾನಭಾರತಿ ಸಭಾಂಗಣದಲ್ಲಿ ಸ್ವರಾಲಯ ಸಂಗೀತ ಸಂಸ್ಥೆ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಕಾರದೊಂದಿಗೆ ಆಯೋಜಿಸಿದ್ದ ಸ್ವರಾಲಯ ಸಾಂಸ್ಕೃತಿಕ ಹಬ್ಬ–2024 (ಭಾಗ–3) ಅನ್ನು ಉದ್ಘಾಟಿಸಿ ಮಾತನಾಡಿದರು. ವಿದುಷಿ ಡಾ.ಸುಮ ಹರಿನಾಥ್ ಅವರು ಸಮಾಜದಲ್ಲಿ ನಿತ್ಯ ಹೊಸತನದ ಹುಡುಕಾಟದಲ್ಲಿ ತೊಡಗಿರುತ್ತಾರೆ. ಇಂತಹ ವ್ಯಕ್ತಿತ್ವ ಎಲ್ಲರಲ್ಲೂ ನೋಡಲು ಸಾಧ್ಯವಿಲ್ಲ. ಇವರು ಕೆಲವು ನಾಟಕಗಳನ್ನೂ ರಚನೆ ಮಾಡಿ ಗಮನ ಸೆಳೆದಿದ್ದಾರೆ. ಅವರು ಕಲಿತ ಸಂಗೀತ ವಿದ್ಯೆಯನ್ನು ಬೇರೆಯವರಿಗೆ ಧಾರೆಯೆರೆಯುತ್ತಿರುವುದು ಸ್ವಾಗತಾರ್ಹ ಸಂಗತಿ ಎಂದು ತಿಳಿಸಿದರು.



ಗಾನಭಾರತಿ ಸಭಾಂಗಣದಲ್ಲಿ ಸ್ವರಾಲಯ ಸಂಗೀತ ಸಂಸ್ಥೆ ಆಯೋಜಿಸಿದ್ದ ಸ್ವರಾಲಯ ಸಾಂಸ್ಕೃತಿಕ ಹಬ್ಬ–2024 (ಭಾಗ–3)ರ ಉದ್ಘಾಟನಾ ಸಂದರ್ಭ.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಂಗೀತ ಶಿಕ್ಷಕಿ ಕ್ಷಮ ಕಟ್ವಾರ್ ಮಾತನಾಡಿ, ಸ್ವರಾಲಯ ಸಂಗೀತ ಸಂಸ್ಥೆ ಸಂಗೀತ ಪ್ರಾರಂಭವಾದಾಗಿನಿಂದ ಇದುವರೆಗೆ ಸಂಗೀತ ತರಗತಿಗಳನ್ನು ನಡೆಸುವುದರ ಜೊತೆಗೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬರುತ್ತಿದೆ. ಸಂಗೀತ 'ಸಂ' ಎಂದರೆ ಸಂವೇದನೆಯೊಂದಿಗಿನ ಅದ್ಭುತ ಕಲೆಗಳು, 'ಗೀ' ಎಂದರೆ ಗೀರ್ವಾಣಿಯ ಕೃಪಾಕಟಾಕ್ಷದೊಂದಿಗೆ ನುಡಿಸುತ, 'ತ' ಎಂದರೆ ತನ್ಮಯತೆಯ ಅನಾವರಣಗೊಳಿಸುವ ಕಲೆ. ಸಂಗೀತ ಜಾತಿ, ಮತ ಭೇದ–ಭಾವವಿಲ್ಲದಿರುವ ಕಲೆ. ಸಂಗೀತ ಎಲ್ಲರನ್ನೂ ತನ್ನತ್ತ ಸೆಳೆಯುತ್ತೆ. ಸಂಗೀತದ ಅರಿವಿನ ಬೆಳವಣಿಗೆಯ ಮೇಲೆಯೂ ಆಳವಾದ ಪ್ರಭಾವ ಬೀರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿಯೂ ವಿದ್ಯಾರ್ಥಿಗಳಿಗೆ ಹಲವಾರು ಪ್ರಯೋಜನಗಳನ್ನು ನೀಡುತ್ತದೆ ಎಂದರು. ಸಂಗೀತ ಕೇಳುವುದರಿಂದ ಮಾನಸಿಕ ಒತ್ತಡ, ಆತಂಕ ಮತ್ತು ಖಿನ್ನತೆ ದೂರವಾಗುತ್ತದೆ. ಸಂಗೀತಕ್ಕೆ ಮಾನಸಿಕ ಆರೋಗ್ಯ ವೃದ್ಧಿಪಡಿಸುವ ಗುಣ ಇದೆ. ಬಹುಶಃ ಸಂಗೀತದಷ್ಟು ಮನಸ್ಸಿಗೆ ಖುಷಿ ಕೊಡುವುದು ಬೇರೊಂದಿಲ್ಲ. ಸ್ವರಾಲಯ ಸಂಗೀತ ಸಂಸ್ಥೆಯು ಸಂಗೀತದಂತಹ ದೈವಿಕ ಕಲೆಯನ್ನು 1990ರಿಂದ 34 ವರ್ಷಗಳ ಕಾಲ ಬೆಳೆಸಿ ಪ್ರೋತ್ಸಾಹಿಸುತ್ತಿದೆ. ಸಾಧಕರು, ಕಲಾವಿದರನ್ನು ಗುರುತಿಸಿ, ವೇದಿಕೆಯನ್ನು ಕಲ್ಪಿಸಿ, ಗೌರವಿಸಿ ಬಿರುದುಗಳನ್ನು ನೀಡಿ ಸನ್ಮಾನಿಸಿದೆ ಎಂದು ಅಭಿಪ್ರಾಯಿಸಿದರು.

ಅಧ್ಯಕ್ಷತೆ ವಹಿಸಿದ್ದ ಸ್ವರಾಲಯ ಅಧ್ಯಕ್ಷೆ ವಿದುಷಿ ಡಾ.ಸುಮ ಹರಿನಾಥ್ ಮಾತನಾಡಿ, ಇಂದಿಗೆ ನಮ್ಮ ಸ್ವರಾಲಯ ಸಂಗೀತ ಸಂಸ್ಥೆಗೆ 34 ವರ್ಷ ಸಂದಿದೆ. ಸಾಮಾನ್ಯ ಮನುಷ್ಯರಿಗೆ 34 ವರ್ಷವಾದರೆ ಅಂಥ್ಯೋ 34 ವರ್ಷ ಆಗೋಯ್ತಾ ಅಂತೀವೆ. ಆದರೆ ನಮ್ಮ ಸಂಸ್ಥೆ ಇನ್ನೂ ಪುಟ್ಟ ಮಗು ತರ ಬೆಳೀತಾ ಇದೆ. ಹೀಗೆ ಇನ್ನೂ ಎತ್ತರಕ್ಕೆ ಬೆಳೀಬೇಕು ಅಂತ ಪದಾಧಿಕಾರಿಗಳ ಆಶಯ. ನಾವೆಲ್ಲ ಒಂದು ಮನೆ, ಕುಟುಂಬದ ತರ ಇದೀವಿ. ಪ್ರತಿ ವರ್ಷ ಕಾರ್ಯಕ್ರಮ ಮಾಡುವಾಗಲೂ ಮೂರು ತಿಂಗಳಿಂದ ಪೂರ್ವ ತಯಾರಿ ಮಾಡಿಕೊಳ್ಳುತ್ತೇವೆ. ಹಾಗೆ ಪದಾಧಿಕಾರಿಗಳೆಲ್ಲ ಸಹಕಾರ ಕೊಡುತ್ತಾ ಬಂದಿದ್ದಾರೆ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಗೀತ ಶಿಕ್ಷಕಿ ಶ್ರೀಮತಿ ಭಾನುನಿಶ್ವಲ್ ದಾಸರ ಪದಗಳ ಗಾಯನವನ್ನು ಪ್ರಸ್ತುತಪಡಿಸಿದರೆ, ಸಂಪ್ರದಾಯದ ಹಾಡುಗಳನ್ನು ಶ್ರೀಮತಿ ವಿದುಷಿ ಕಲ್ಪನಾ ಆನಂದ್ ಮತ್ತು ವೃಂದದವರು ನಡೆಸಿಕೊಟ್ಟರು. ಇವರಿಗೆ ವಯೋಲಿನ್‌ನಲ್ಲಿ ವಿದ್ವಾನ್ ಎಂ.ಆರ್.ಶ್ರೀಕಾಂತ್, ಮೃದಂಗದಲ್ಲಿ ಎಂ.ಆರ್.ಉದಯ ಕುಮಾರ್ ವಾದ್ಯ ಸಹಕಾರ ನೀಡಿದರು.

ಬಡಾವಣೆಗಳಿಗೆ ನುಗ್ಗಿದ ನದಿ ನೀರು

ಕುಶಾಲನಗರ, ಜು.30– ಪಟ್ಟಣದ ಕೆಲ ಬಡಾವಣೆಗಳಿಗೆ ಕಾವೇರಿ ನದಿ ನೀರು ನುಗ್ಗಿದ್ದು, ಪ್ರವಾಹ ಭೀತಿ ಸೃಷ್ಟಿಯಾಗಿದೆ.

ಈಗಾಗಲೇ ಸಾಯಿ ಬಡಾವಣೆ ಜಲಾವೃತಗೊಂಡಿದ್ದು, ಮಳೆ ಮುಂದುವರೆದರೆ ಸಂಪೂರ್ಣವಾಗಿ ಮುಳುಗಡೆಯಾಗಲಿದೆ. ಇದೇ ಸ್ಥಿತಿ ಸಮೀಪದ ಬಡಾವಣೆಗಳಿಗೂ ವ್ಯಾಪಿಸುವ ಸಾಧ್ಯತೆಗಳಿದ್ದು, ಈ ಹಿನ್ನೆಲೆಯಲ್ಲಿ ಇಲ್ಲಿನ ಕೆಲ ನಿವಾಸಿಗಳು ಮನೆ ಖಾಲಿ ಮಾಡುತ್ತಿದ್ದಾರೆ. ಪುರಸಭೆ ವ್ಯಾಪ್ತಿಯ ಗೊಂದಿಬಸವನಹಳ್ಳಿ ಗ್ರಾಮದ ರೊಂಡ ಕೆರೆಯ ಏರಿ 2ನೇ ಬಾರಿ ಒಡೆದ ಪರಿಣಾಮ ಅಪಾರ ಪ್ರಮಾಣದ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿ ಮನೆಗಳು ಜಲಾವೃತಗೊಂಡಿವೆ. ಕಳೆದ 10 ದಿನಗಳ ಹಿಂದೆ 15 ಎಕರೆ ವಿಸ್ತೀರ್ಣದ ಕೆರೆ ದಂಡೆ ಒಡೆದು ನೀರು ಹರಿದ ಪರಿಣಾಮ ತಾವರೆಕೆರೆ ಮಾರ್ಗಮಧ್ಯದ ಗದ್ದೆಗಳು ಹಾಗೂ ಕಾರು ಚಾಲಕರು ಮತ್ತು ಮಾಲೀಕರ ಬಡಾವಣೆ ಸಂಪೂರ್ಣವಾಗಿ ಜಲಾವೃತಗೊಂಡಿದೆ.

ಸಿದ್ದಾಪುರ ವರದಿ: ನಿರಂತರ ಮಳೆಯಿಂದಾಗಿ ಸಿದ್ದಾಪುರ, ನೆಲ್ಯಹುದಿಕೇರಿ ಸುತ್ತಮುತ್ತ ಗ್ರಾಮಗಳಲ್ಲಿ ಕಾವೇರಿ ನದಿ ಪ್ರವಾಹ ಮಟ್ಟ ಮೀರಿ ಹರಿಯುತ್ತಿದ್ದು, ನದಿಯಂಚಿನ ಪ್ರದೇಶಗಳಲ್ಲಿ ಪ್ರವಾಹ ಭೀತಿ ಸೃಷ್ಟಿಸಿದೆ.

ಮುನ್ನೆಚ್ಚರಿಕಾ ಕ್ರಮವಾಗಿ ಕರಡಿಗೋಡು ಗ್ರಾಮದ 16 ಕುಟುಂಬಗಳನ್ನು ಸಿದ್ದಾಪುರದ ಸ್ವರ್ಣಮಾಲ ಮಂಟಪದ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಸ್ಥಳದಲ್ಲಿ ತಹಸೀಲ್ದಾರ್ ಕಿರಣ್ ಗೌರಯ್ಯ ಮತ್ತು ಕಂದಾಯ ಅಧಿಕಾರಿಗಳು ಮೊಕ್ಕಾಂ ಹೂಡಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದಾರೆ.

ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಗ್ರಾಪಂ ವ್ಯಾಪ್ತಿಯ ಕುಂಬಾರಗುಂಡಿ ಹಾಗೂ ಬೆಟ್ಟದಕಾಡು ಭಾಗದಲ್ಲಿ ಪ್ರವಾಹದ ಭೀತಿ ಎದುರಾಗಿದೆ.



ಕುಶಾಲನಗರ ಸಾಯಿ ಬಡಾವಣೆ ಜಲಾವೃತ ಗೊಂಡಿರುವುದು.

ಅಪ್ಪನೆರವಂಡ ಜೋಯಪ್ಪ ನಿಧನ



ವಿರಾಜಪೇಟೆ, ಜು.30–ಡಿಸಿಸಿ ಬ್ಯಾಂಕ್ ಮಾಜಿ ವ್ಯವಸ್ಥಾಪಕ ಹಾಗೂ ವಿರಾಜಪೇಟೆ ಕರ್ನಾಟಕ ಸಂಘದ ಸದಸ್ಯ ಅಪ್ಪನೆರವಂಡ ಜೋಯಪ್ಪ (81) ಅವರು ಮಂಗಳವಾರ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ಕೊಡವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ವಿರಾಜಪೇಟೆ ಕರ್ನಾಟಕ ಸಂಘದ ಅಧ್ಯಕ್ಷ ಬೆಲ್ಲು ಬೋಪಯ್ಯ ಹಾಗೂ ಸದಸ್ಯರು ಸಂತಾಪ ಸೂಚಿಸಿದ್ದಾರೆ.

ಕೊಡಗಿನಲ್ಲಿ ಮತ್ತೆ ಮಳೆ ಆರ್ಭಟ



ಭಗಂಡೇಶ್ವರ ದೇವಾಲಯ ಆವರಣ ಜಲಾವೃತವಾಗಿರುವುದು.

- ಜಿಲ್ಲೆಯಲ್ಲಿ ವಿವಿಧೆಡೆ ರಸ್ತೆಗಳ ಸಂಚಾರ ಬಂದ್
- 2 ದಿನ ರೆಡ್ ಅಲರ್ಟ್ ಘೋಷಣೆ

ಮಡಿಕೇರಿ, ಜು.30– ಕೊಡಗು ಜಿಲ್ಲಾದ್ಯಂತ ಪುಷ್ಯ ಮಳೆ ಮತ್ತೆ ಆರ್ಭಟಿಸುತ್ತಿದ್ದು, ಕಾವೇರಿ ತವರುನಾಡು ಕಂಗಾಲಾಗಿದೆ. ಈ ನಡುವೇ ಮತ್ತಷ್ಟು ಮಳೆ ಮುಂದುವರೆಯುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಮುಂದಿನ ಎರಡು ದಿನ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ಜಿಲ್ಲೆಯ ವಿವಿಧೆಡೆ ಪ್ರವಾಹ ತಲೆದೋರಿದ್ದು, ಇದರಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಕಾವೇರಿ, ಲಕ್ಷ್ಮಣತೀರ್ಥ ಮತ್ತು ಉಪ ನದಿಗಳು ಸೇರಿದಂತೆ ತೊರೆಗಳು ಕೂಡ ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ನದಿ ತಟದ ನಿವಾಸಿಗಳು ಮತ್ತೊಮ್ಮೆ ಪ್ರವಾಹ ಭೀತಿ ಎದುರಿಸುವಂತಾಗಿದೆ. ಗದ್ದೆಗಳು, ನದಿ ದಡದ ಕಾಫಿ ತೋಟಗಳು ಜಲಾವೃತವಾಗಿವೆ.

ತಲಕಾವೇರಿ ಭಾಗಮಂಡಲ, ಕೋರಂಗಾಲ, ತಣ್ಣಿಮಾನಿ ವ್ಯಾಪ್ತಿಯಲ್ಲಿ ದಾಖಲೆ ಮಳೆ ಸುರಿದ ಪರಿಣಾಮ ಕಾವೇರಿ ನದಿ ನೀರು ಶ್ರೀ ಭಗಂಡೇಶ್ವರ ದೇವಾಲಯ ಆವರಣ ಪ್ರವೇಶಿಸಿದೆ. ದೇವಾಲಯದ 3ನೇ ಮೆಟ್ಟಿಲುಗಳವರೆಗೆ ನೀರು ಆವರಿಸಿದ್ದು, ತ್ರಿವೇಣಿ ಸಂಗಮ ಸಂಪೂರ್ಣ ಮುಳುಗಡೆಯಾಗಿದೆ. ಮಡಿಕೇರಿ–ಭಾಗಮಂಡಲ, ಭಾಗಮಂಡಲ–ನಾಪೋಕ್ಲು ರಸ್ತೆಗಳ ಮೇಲೆ ನೀರು ಹರಿಯುತ್ತಿದ್ದು, ತೂಲ್ಸೇತುವೆ ಮೂಲಕ ವಾಹನ ಮತ್ತು ಜನ ಸಂಚಾರ ಸಾಗಿದ್ದು ಯಾವುದೇ ತೊಡಕುಂಟಾಗಿಲ್ಲ.

ರಸ್ತೆಗಳು ಬಂದ್: ಕಾವೇರಿ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿರುವ ಪರಿಣಾಮ ಹಲವು ಕಡೆಗಳಲ್ಲಿ ಪ್ರವಾಹ ತಲೆದೋರಿ ರಸ್ತೆ ಸಂಪರ್ಕ, ಸೇತುವೆಗಳು ಮುಳುಗಡೆಯಾದ ಸ್ಥಿತಿಯಲ್ಲಿವೆ. ನಾಪೋಕ್ಲು ಪಟ್ಟಣ ದ್ವೀಪವಾಗುತ್ತಿದ್ದು, ಸಂಪರ್ಕ ರಸ್ತೆಗಳೆಲ್ಲ ಬಂದ್ ಆಗಿವೆ. ಮಡಿಕೇರಿ–ನಾಪೋಕ್ಲು ಮುಖ್ಯ ರಸ್ತೆಯ ಕೊಟ್ಟಮುಡಿ ಬಳಿ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತವಾಗಲಿದೆ.

ವಿರಾಜಪೇಟೆ–ಪಾರಾಣೆ–ನಾಪೋಕ್ಲು ಸಂಪರ್ಕ ರಸ್ತೆ ಬೊಳ್ಳುಮಾಡು ಬಳಿ ಪ್ರವಾಹದಿಂದ ಬಂದ್ ಆಗಿದೆ. ನಾಪೋಕ್ಲು–ಚೆರಿಯಪರಂಬು ರಸ್ತೆ ಮೇಲೆ 4 ಅಡಿ ನೀರು ಹರಿಯುತ್ತಿದ್ದು, ರಸ್ತೆ ಬಂದ್ ಆಗಿದೆ. ಕಲ್ಲುವೊಟ್ಟೆ ಮಾರ್ಗವಾಗಿ ವಾಹನ ಸಂಚರಿಸುತ್ತಿವೆ. ಚೇರಂಬಾಣೆ ಬೇಂಗೂರು–ದೋಣಿ ಕಡುವು ಸಂಪರ್ಕ ಬಂದ್ ಆಗಿದ್ದು, ಕಡಂಗ–ಎಡಪಾಲ ಸೇತುವೆ ನೀರಿನಲ್ಲಿ ಮುಳುಗಿದ್ದು, ಕೊಚ್ಚಿ ಬಂದ ಮರಗಳು ಸೇತುವೆಯ ರೇಲಿಂಗ್ಸ್ ಅನ್ನು ಆವರಿಸಿವೆ. ಸ್ಥಳೀಯ ಯುವಕರು ಮರದ ದಿಮ್ಮಿಗಳನ್ನು ತೆರವುಗೊಳಿಸಿದರು.

ಮೂರ್ನಾಡು ಸಮೀಪದ ಬೇತ್ರಿ ಸೇತುವೆಯಲ್ಲಿ ಕಾವೇರಿ ಮುಳುಗಡೆಯಾಗಲಿದೆ. ಈ ಸೇತುವೆ ಮುಳುಗಡೆಯಾದಲ್ಲಿ ಮಡಿಕೇರಿ–ವಿರಾಜಪೇಟೆ ಮುಖ್ಯ ರಸ್ತೆ ಸಂಪರ್ಕ ಬಂದ್ ಆಗುವ ಆತಂಕ ಜನರನ್ನು ಕಾಡುತ್ತಿದೆ. ಹಾರಂಗಿ ಜಲಾಶಯದಿಂದ 28 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಿದ ಪರಿಣಾಮ ಜಲಾಶಯ ಮುಂಭಾಗದ ಹಾರಂಗಿ–ಹುದುಗೂರು ಸಂಪರ್ಕ ಸೇತುವೆ ಮುಳುಗಿದೆ. ಎರಡೂ ಬದಿಗಳಲ್ಲಿ ಬ್ಯಾರಿಕೇಡ್ ಅಳವಡಿಸಿ, ಎಲ್ಲಾ ವಾಹನ ಮತ್ತು ಜನ ಸಂಚಾರ ನಿಷೇಧಿಸಲಾಗಿದೆ. ಹಾಸನ–ಕೊಡಗು ಸಂಪರ್ಕ ರಸ್ತೆಗೆ ಸಮನಾಗಿ ಕಾವೇರಿ ನದಿ ನೀರು ಹರಿಯುತ್ತಿದ್ದು, ಕಣಿವೆ ಬಳಿ ರಸ್ತೆ ಸಂಪರ್ಕ ಕಡಿತವಾಗಲಿದೆ.

ಕುಸಿದ ಮನೆಗಳು: ಜಿಲ್ಲೆಯ ವಿವಿಧೆಡೆ ಮನೆಗಳ ಹಾನಿಯಾಗಿದೆ. ಪೊನ್ನಂಪೇಟೆ ವ್ಯಾಪ್ತಿ ಕಳೆದ 24 ಗಂಟೆ ಅವಧಿಯಲ್ಲಿ 149 ಮಿ.ಮೀ. ಮಳೆಯಾಗಿದ್ದು, ಕುಟ್ಟ ಗ್ರಾಮದ ಎ.ಎಸ್.ಮಾಚಯ್ಯ ಅವರ ಮನೆಯ ಗೋಡೆಗಳು ಕುಸಿದು ಮನೆ ಬೀಳುವ ಹಂತದಲ್ಲಿದೆ. ಕಂದಾಯ ಅಧಿಕಾರಿಗಳು ಭೇಟಿ ನೀಡಿ, ಕುಟುಂಬವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಿದ್ದಾರೆ. ಭಾಗಮಂಡಲ ವ್ಯಾಪ್ತಿಯಲ್ಲಿ 245 ಮಿ.ಮೀ. ಮಳೆಯಾಗಿದ್ದು, ತಣ್ಣಿಮಾನಿ ಗ್ರಾಮದ ಕೆ.ಪಿ.ತಮ್ಮಯ್ಯ ಅವರ ಮನೆಯ ಚಾವಣಿ ಕುಸಿದಿದೆ. ನಾಪೋಕ್ಲು ವ್ಯಾಪ್ತಿ 177.8 ಮಿ.ಮೀ. ಮಳೆಯಾದ ಪರಿಣಾಮ ಎಮ್ಮೆಮಾಡು ಗ್ರಾಮದ ಅಭಿದ್ ತಂಗಳ್ ಅವರ ಮನೆ ಗೋಡೆಗಳು ಕುಸಿದು ಬಿದ್ದಿವೆ. ವಿರಾಜಪೇಟೆ ತಾಲೂಕಿನ ಕೊಳತ್ತೋಡು–ಬೈಗೋಡು ಗ್ರಾಮ ನಿವಾಸಿ ಎರವರ ಚಾಮು ಅವರ ಮನೆ ಸಂಪೂರ್ಣವಾಗಿ ಕುಸಿದಿದೆ.



ಇಂದು ಶಾಲಾ–ಕಾಲೇಜಿಗೆ ರಜೆ

ಕೊಡಗು ಜಿಲ್ಲಾದ್ಯಂತ ಧಾರಾಕಾರ ಮಳೆ ಮತ್ತು ರೆಡ್ ಅಲರ್ಟ್ ಘೋಷಣೆ ಸುರಿಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜಿಗೆ ಜು.31ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಭೂ ಕುಸಿತ: ಗಡಿ ಗ್ರಾಮ ಮಡಿಕೇರಿ ತಾಲೂಕಿನ ಪೆರಾಜೆಯ ಮಾಜಿಕೋಡಿ ಹೊಸಗದ್ದೆಯಲ್ಲಿ ಭಾರೀ ಭೂ ಕುಸಿತವಾಗಿದೆ. ಪರಿಣಾಮ ಅಡಕೆ ತೋಟಕ್ಕೆ ತೀವ್ರ ಹಾನಿಯಾಗಿದ್ದು, ಹಲವಾರು ಅಡಕೆ ಮರಗಳು ಛಿದ್ರವಾಗಿದ್ದರೆ, ಪಂಪ್‌ಹೌಸ್ ಮಣ್ಣಿನ ಅಡಿಯಲ್ಲಿ ಸಿಲುಕಿದೆ. ಭೂ ಕುಸಿತದಿಂದ ಚಾಮಕಜೆ–ನಿಡ್ಯಮಲೆ ರಸ್ತೆ ಸಂಪರ್ಕ ಬಂದ್ ಆಗಿದ್ದು, ಕೂರ್ನಡ್ಕ–ಪೆರಾಜೆ ಸಂಪರ್ಕಿಸುವ ಕಾಲುಸಂಕ ಕೊಚ್ಚಿ ಹೋಗಿದೆ.

ಪೆರಾಜೆ–ಅಲ್ಲೆಟ್ಟಿ ಕಾಂಕ್ರಿಟ್ ರಸ್ತೆ ಒಂದು ಬದಿಯಲ್ಲಿ ಭೂ ಕುಸಿತವಾಗಿದ್ದು, ಕಂದಾಯ ಅಧಿಕಾರಿಗಳು ಪರಿಶೀಲಿಸಿದರು. ಭಾಗಮಂಡಲ ವ್ಯಾಪ್ತಿಯ ಅಯ್ಯಂಗೇರಿ ನಿವಾಸಿ ಬಿದ್ದಿಯಂಡ ರವಿ ಅವರ ಕಾಫಿ ತೋಟದಲ್ಲೂ ಭಾರೀ ಭೂ ಕುಸಿತವಾಗಿದ್ದು, ತೋಟಕ್ಕೆ ಹಾನಿಯಾಗಿದೆ. ಮದೆನಾಡು–ಚೇರಂಬಾಣೆ ಸಂಪರ್ಕ ರಸ್ತೆಗೆ ಮಣ್ಣು ಕುಸಿದು ಬಿದ್ದಿದ್ದು, ಜೆಸಿಬಿ ಮೂಲಕ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಬೆಟ್ಟಗೇರಿ ಗ್ರಾಪಂನ ಕುಂಬಾರಕೊಪ್ಪ ಗ್ರಾಮದ ರಸ್ತೆಬದಿಯಲ್ಲೂ ಭೂ ಕುಸಿತವಾಗಿದ್ದು, ತಾತ್ಕಾಲಿಕ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ.

6 ಸಂತ್ರಸ್ತರ ರಕ್ಷಣೆ: ವಿರಾಜಪೇಟೆ ವ್ಯಾಪ್ತಿಯ ಕಾವೇರಿ ನದಿಯ ಹಿನ್ನೀರು ಕದನೂರು, ಬೇತ್ರಿ ತಗ್ಗು ಪ್ರದೇಶ ಆವರಿಸುತ್ತಿದೆ. ಹಿನ್ನೀರಿನ ಪ್ರವಾಹದಲ್ಲಿ ಸಿಲುಕಿದ್ದ 6 ಮಂದಿ ಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದ್ದಾರೆ.

ಮೈಶುಗರ್ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆಗೆ ಚಾಲನೆ

ಈ ಸಾಲಿನಲ್ಲಿ 3 ಲಕ್ಷ ಟನ್ ಕಬ್ಬು ಅರೆಯುವ ಗುರಿ: ಸಕ್ಕರೆ ಸಚಿವ ಶಿವಾನಂದ ಪಾಟೀಲ್

ಮಂಡ್ಯ, ಜು.30– ಜಿಲ್ಲೆಯ ಮೈಶುಗರ್ ಕಾರ್ಖಾನೆಯು ನಷ್ಟದ ಕೂಪದಿಂದ ಲಾಭದ ತೆಕ್ಕೆಗೆ ಬಂದಿದ್ದು, 2.40 ಲಕ್ಷ ಟನ್ ಕಬ್ಬು ಅರೆದಿರುವ ದಾಖಲೆ ಹೊಂದಿದ್ದು, ಈ ಬಾರಿ ಉತ್ತಮ ರೀತಿಯಲ್ಲಿ ಮಳೆಯಾಗಿ ಉತ್ತಮ ಬೆಳೆ ಬೆಳೆಯುವ ವಾತಾವರಣ ಇರುವುದರಿಂದ ಕನಿಷ್ಠ 3 ಲಕ್ಷ ಟನ್ ಕಬ್ಬು ಅರೆಯುವ ಗುರಿ ಹೊಂದಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಹೇಳಿದರು.

ನಗರದ ಮೈಶುಗರ್ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಪ್ರಸಕ್ತ ಸಾಲಿನ ಕಬ್ಬು ಅರೆಯುವಿಕೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ರೈತರ ಬಾಕಿ ಹಣವನ್ನು ಪಾವತಿ ಮಾಡಲಾಗಿದೆ. ಪ್ರಸ್ತುತ ನುರಿಸುವ ಸಲುವಾಗಿ ಕಾರ್ಖಾನೆಗೆ ಅಗತ್ಯ ಕಬ್ಬು ಸರಬರಾಜು ಆಗುತ್ತಿದೆ. ಕೋಜನ್, ಎಥನಾಲ್ ತಯಾರಿಸುವುದನ್ನು ಸಹ ಗಮನದಲ್ಲಿಟ್ಟುಕೊಂಡಿದ್ದು, ಜೊತೆಗೆ ರೈತರ ಹಿತದೃಷ್ಟಿಯಿಂದ ಅನುಸರಿಸಬೇಕಾದ ಕ್ರಮಗಳನ್ನು ಸಹ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.


ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಶುಗರ್ ಪುನರಾರಂಭ ಮತ್ತು ಸಣ್ಣಪುಟ್ಟ ದುರಸ್ತಿಗೆ 50 ಕೋಟಿ ಅನುದಾನ ನೀಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರ ಮುತುವರ್ಜಿಯಿಂದ ಅನುದಾನ ತರುವಲ್ಲಿ ಯಶಸ್ವಿ ಸಹ ಆಗಿದ್ದರು. ಅದೇ ರೀತಿ ಹೊಸ ಕಾರ್ಖಾನೆ ಆರಂಭಿಸಲು ಎಲ್ಲರೂ ಶ್ರಮಿಸಲಿದ್ದೇವೆ ಎಂದರು.

ಬರಗಾಲ ಎಲ್ಲಾ ಕಡೆಯೂ ಇಲ್ಲ. ಹಾಗಾಗಿ ಇದು ಕಬ್ಬು ಬೆಳೆಗೆ ಯಾವುದೇ ಪರಿಣಾಮ ಬೀರಲ್ಲ. ಮೈಶುಗರ್ ವ್ಯಾಪ್ತಿಯಲ್ಲಿ 3 ಲಕ್ಷ ಟನ್ ಕಬ್ಬು ಅರೆಯಲು ಟಾರ್ಗೆಟ್ ಹೊಂದಲಾಗಿದೆ. 2007ರ ತನಕ ಕಾರ್ಖಾನೆ ಚೆನ್ನಾಗಿ ನಡೆಯುತ್ತಿತ್ತು. ಕಾಟಾಚಾರಕ್ಕೆ ಕಬ್ಬು ಅರೆಯಲು ಇದೀಗ ಚಾಲನೆ ಕೊಟ್ಟಿಲ್ಲ. ಗತವೈಭವದ ರೀತಿಯಲ್ಲೇ ಕಾರ್ಖಾನೆಯನ್ನು ಕೊಂಡೊಯ್ಯಬೇಕೆಂಬ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಜಿಲ್ಲೆಗೆ ಅಭಿವೃದ್ಧಿ ಕಾರ್ಯಗಳನ್ನು ನನ್ನ ಅವಧಿಯಲ್ಲಿ ನೀಡಲಾಗಿದೆ. ಅದರಂತೆ ಮೈಶುಗರ್ ಕಾರ್ಖಾನೆಯನ್ನು ಹೊಸ ಆಯಾಮದಲ್ಲಿ ಸ್ಥಾಪಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಈ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಕಾಂಗ್ರೆಸ್ ಅವಧಿಯಲ್ಲಿ ಬರ ಬರುತ್ತೆ ಎಂದಿದ್ದರು. ಆದರೆ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಬಾಗಿನ ಅರ್ಪಿಸುತ್ತಿದ್ದೆವು. ಈ ಬಾರಿ ಜುಲೈನಲ್ಲೇ ಅರ್ಪಿಸಿದ್ದೇವೆ ಎಂದರು.

ಯಾವುದೇ ಅಭಿವೃದ್ಧಿ ಕೆಲಸ ಮಾಡಿದರೂ ಮೊಸರಲ್ಲಿ ಕಲ್ಲು ಹುಡುಕಿ ಸುಳ್ಳುಗಳನ್ನೇ ಹೇಳಿಕೊಂಡು ನಮ್ಮನ್ನು ವಿರೋಧಿಸುವವರು ಬರುತ್ತಿದ್ದಾರೆ. ಎರಡನೇ ಬಾರಿ ಕಬ್ಬು ಬಾಕಿ ಹಣ ನೀಡಿ ಮೈಶುಗರ್ ಕಾರ್ಖಾನೆಯನ್ನು ಯಾವುದೇ ತೊಂದರೆ ಇಲ್ಲದೇ ಆರಂಭಿಸಿದ್ದೇವೆ. ದರ ನಿಗದಿ ಮಾಡುವುದು ಕೇಂದ್ರ ಸರ್ಕಾರದ ಹೊಣೆಯಾಗಿದೆ. ನಾವು ಕೂಡ ಒತ್ತಡ ಹೇರುತ್ತೇವೆ. ಈ ವರ್ಷ ಸ್ವಲ್ಪ ಕಬ್ಬಿನ ಅಭಾವ ಬರಬಹುದು. 2ರಿಂದ 3 ಲಕ್ಷ ಕಬ್ಬು ಅರೆಯುವ ಗುರಿ ಹೊಂದಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರಾದ ಪಿ.ರವಿಕುಮಾರ್ ಗಣಿಗ, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಮುಡಾ ಅಧ್ಯಕ್ಷ ನಹೀಂ ಸೇರಿದಂತೆ ಇತರರು ಭಾಗವಹಿಸಿದ್ದರು.



ಮೈಶುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಚಾಲನೆ ನೀಡಿದರು.

ಭಾರಿ ಪ್ರಮಾಣದಲ್ಲಿ ನೀರು ಬಿಡುಗಡೆ: ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚನೆ

ಮಂಡ್ಯ, ಜು.30– ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್ ಜಲಾಶಯದಿಂದ ಸುಮಾರು 1,10,000 ಕ್ಯೂಸೆಕ್ಸ್ ನೀರನ್ನು ಕಾವೇರಿ ನದಿಗೆ ಬಿಡಲಾಗುತ್ತಿದ್ದು, ಜನರು ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚಿಸಲಾಗಿದೆ. ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿನ ಕಾವೇರಿ ನದಿ ಪಾತ್ರದ ತಗ್ಗು ಪ್ರದೇಶದಲ್ಲಿರುವ ಹಾಗೂ ನದಿಯ ಎರಡೂ ದಂಡೆಗಳಲ್ಲಿರುವ ಸಾರ್ವಜನಿಕರು ಹಾಗೂ ರೈತರು ತಮ್ಮ ಆಸ್ತಿ ಪಾಸ್ತಿ ಜಾನುವಾರುಗಳ ರಕ್ಷಣೆಗೆ ಎಚ್ಚರಿಕೆ ವಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಂಡು ಸುರಕ್ಷಿತ ಸ್ಥಳಗಳಿಗೆ ತೆರಳಲು ಜಿಲ್ಲಾಧಿಕಾರಿ ಡಾ. ಕುಮಾರ ಮನವಿ ಮಾಡಿದ್ದಾರೆ.

ಬಾಗಿನ ಅರ್ಪಿಸುವ ಕಾರ್ಯಕ್ರಮಕ್ಕೂ ಗೈರಾದ ಶಾಸಕ ದರ್ಶನ್ ಪುಟ್ಟಣ್ಣಯ್ಯ

- ಶಾಸಕರಾದ ಬಳಿಕ ಏಳನೇ ಬಾರಿಗೆ ವಿದೇಶಕ್ಕೆ
- ಸರ್ಕಾರಿ ಕಾರ್ಯಕ್ರಮಗಳಿಗೂ ನಿರಂತರ ಗೈರು
- ಮೇಲುಕೋಟೆ ಶಾಸಕರ ಇಬ್ಬಗೆ ನೀತಿಗೆ ಜನಾಕ್ರೋಶ

■ ಲೋಕೇಶ್ ಚಿನಕುರಳಿ

ಪಾಂಡವಪುರ, ಜು.30– ರೈತರ ಹೆಸರೇಳಿಕೊಂಡು ರೈತ ಸಂಘದಿಂದ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ದರ್ಶನ್ ಪುಟ್ಟಣ್ಣಯ್ಯ, ಮಂಡ್ಯ ಜಿಲ್ಲೆಯ ರೈತರ ಜೀವನಾಡಿ ಕನ್ನಂಬಾಡಿ ಅಣೆಕಟ್ಟೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮಕ್ಕೂ ಗೈರಾಗಿದ್ದು, ಕ್ಷೇತ್ರದ ಜನರ ಆಕ್ರೋಶಕ್ಕೆ ಗುರಿಯಾಗಿದ್ದಾರೆ.

ರೈತ ನಾಯಕ, ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯನವರ ಪುತ್ರರಾದ ದರ್ಶನ್, ಕಳೆದ ವರ್ಷ ನಡೆದ ಚುನಾವಣೆಯಲ್ಲಿ ತಂದೆ ಹಾಗೂ ರೈತರ ಹೆಸರೇಳಿಕೊಂಡು ಶಾಸಕರಾಗಿ ಆಯ್ಕೆಯಾದರು. ಚುನಾವಣೆಯಲ್ಲಿ ಗೆದ್ದ ಸಂದರ್ಭದಲ್ಲಿ ರೈತರ ಧ್ವನಿಯಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿ ಇದೀಗ ಕ್ಷೇತ್ರದಲ್ಲಿ ಇದ್ದು ರೈತರ ಪರವಾಗಿ ಕೆಲಸ ಮಾಡುವುದ ಕ್ಕಿಂತ ವಿದೇಶಕ್ಕೆ ತೆರಳುವುದೇ ಹೆಚ್ಚಾಗಿದೆ. ಇದೀಗ ರೈತರ ಜೀವನಾಡಿ ಕೆಆರ್‌ಎಸ್ ಅಣೆಕಟ್ಟೆ ವರುಣನ ಕೃಪೆಯಿಂದ ಭರ್ತಿಯಾಗಿದ್ದು ಅದಕ್ಕೆ ಬಾಗಿನ ಅರ್ಪಿಸಲು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಜಿಲ್ಲೆಯ ಶಾಸಕರು ಭಾಗಿಯಾಗಿದ್ದ ಕಾರ್ಯಕ್ರಮದಲ್ಲಿ ದರ್ಶನ್ ಪುಟ್ಟಣ್ಣಯ್ಯ ಗೈರು ಹಾಜರಿ ಎದ್ದು ಕಾಣುತ್ತಿತ್ತು.



ಕೇವಲ ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ಮಾತ್ರವಲ್ಲದೇ ಪಕ್ಕದ ಮೈಸೂರು, ಚಾಮರಾಜನಗರ, ಮಡಿಕೇರಿ ಜಿಲ್ಲೆಯ ಜನಪ್ರತಿನಿಧಿಗಳು ಪಾಲ್ಗೊಂಡಿದ್ದರು. ಆದರೆ ಸದಾ ಹೆಗಲ ಮೇಲೆ ಹಸಿರು ಟವಲ್ ಹಾಕಿಕೊಂಡು ರೈತಪರ ಶಾಸಕ ಎನ್ನುವ ದರ್ಶನ್ ಪುಟ್ಟಣ್ಣಯ್ಯ ಮಾತ್ರ, ರೈತರೇ ನಂಬಿಕೊಂಡಿರುವ ಕೆಆರ್‌ಎಸ್ ಅಣೆ ಕಟ್ಟೆಯ ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಗೈರಾಗಿದ್ದು ಮಾತ್ರ ವಿಪರ್ಯಾಸದ ಸಂಗತಿ.

ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ ಬಹುತೇಕ ಶಾಸಕರು ಸಿಎಂ ಸಿದ್ದರಾಮಯ್ಯ ಅವರ ಬಳಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದ್ದಾರೆ. ಜೊತೆಗೆ ಕಳೆದ ಶುಕ್ರವಾರ ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾವೇರಿಕೊಳ್ಳದ ವ್ಯಾಪ್ತಿಯ ನಾಲೆಗಳ ಆಧುನೀಕರಣಕ್ಕೆ ಸಂಬಂಧಿಸಿದಂತೆ ಕಾವೇರಿ ಕೊಳ್ಳದ ಶಾಸಕರ ಸಭೆಗೂ ಸಹ ಶಾಸಕ ದರ್ಶನ್ ಪುಟ್ಟಣ್ಣಯ್ಯ ಗೈರಾಗಿದ್ದಾರೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಶಾಸಕರಾದ ಬಳಿಕ ಮೊದಲ ಬಾರಿಗೆ ರೈತರ ಜೀವನಾಡಿ ಕಾವೇರಿಗೆ ಬಾಗಿನ ಅರ್ಪಿಸುವ ಕಾರ್ಯಕ್ರಮಕ್ಕೆ ಅವಕಾಶ ಸಿಕ್ಕಿದ್ದರೂ ಸಹ ವಿದೇಶಕ್ಕೆ ತೆರಳಿ ಗೈರು ಹಾಜರಾಗುವ ಮೂಲಕ ಜನರ, ರೈತರ ಆಕ್ರೋಶಕ್ಕೆ ಕಾರಣರಾಗಿದ್ದಾರೆ.

7ನೇ ಬಾರಿಗೆ ವಿದೇಶಕ್ಕೆ: ಶಾಸಕ ದರ್ಶನ್ ಪುಟ್ಟಣ್ಣಯ್ಯ ಗೆದ್ದ ಬಳಿಕ 7ನೇ ಬಾರಿಗೆ ವಿದೇಶಕ್ಕೆ ತೆರಳಿದ್ದಾರೆ. ವಿದೇಶದಿಂದ ಜುಲೈ ಮೊದಲ ವಾರದಲ್ಲಿ ಕ್ಷೇತ್ರಕ್ಕೆ ಆಗಮಿಸಿದ್ದ ದರ್ಶನ್ ಪುಟ್ಟಣ್ಣಯ್ಯ ಕೆಲ ದಿನ ವಿಧಾನಸಭೆಯ ಕಲಾಪದಲ್ಲಿ ಭಾಗ ವಹಿಸಿ, ಜುಲೈ ಕೊನೆಯ ವಾರದಲ್ಲಿ ಮತ್ತೆ ವಿದೇಶಕ್ಕೆ ತೆರಳಿದ್ದಾರೆ. ಗೆದ್ದು ಕೇವಲ 13 ತಿಂಗಳಾಗಿದ್ದು, 13 ತಿಂಗಳಲ್ಲಿ ಏಳು ಬಾರಿ ಪತ್ನಿ ಹಾಗೂ ಮಕ್ಕಳನ್ನು ನೋಡಲು ಅಮೇರಿಕಾಗೆ ತೆರಳಿದ್ದಾರೆ. ಜೊತೆಗೆ ತಮ್ಮ ಆಪ್ತರನ್ನು ಭೇಟಿ ಮಾಡಲು ಆಗಾಗ ಬೆಂಗಳೂರಿಗೆ ಹೋಗುತ್ತಾರೆ. ಆದರೆ ರೈತರ ಸಮಸ್ಯೆಗಳ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಕ್ಷೇತ್ರದ ಮತದಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಕಾರ್ಯಕ್ರಮಕ್ಕೂ ಗೈರು: ದರ್ಶನ್ ಪುಟ್ಟಣ್ಣಯ್ಯ ಶಾಸಕರಾದ ಬಳಿಕ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇ ಕಡಿಮೆ. ಅವರು ಶಾಸಕರಾದ ಮೊದಲ ಸ್ವಾತಂತ್ರ್ಯ ದಿನಾಚರಣೆ, ರಾಜ್ಯೋತ್ಸವ, ಕೆಂಪೇಗೌಡ ಜಯಂತಿ ಸೇರಿದಂತೆ ಬಹುತೇಕ ಜಯಂತಿಗಳಿಗೆ ಗೈರಾಗುವ ಮೂಲಕ ಕ್ಷೇತ್ರದ ಜನರ ಆಕ್ರೋಶಕ್ಕೆ ಕಾರಣವಾಗಿದ್ದರು. ಇದೀಗ ಕಾವೇರಿಗೆ ಬಾಗಿನ ಅರ್ಪಿಸುವ ಕಾರ್ಯಕ್ರಮಕ್ಕೂ ಗೈರಾಗಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ನಡೆಗೆ ಕ್ಷೇತ್ರದಲ್ಲಿ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿದೆ.

ಗೂಡ್ಸ್ ವಾಹನ ಪಲ್ಟಿ: 15ಕ್ಕೂ ಹೆಚ್ಚು ಮಹಿಳೆಯರಿಗೆ ಗಾಯ

ಚಾಮರಾಜನಗರ, ಜು.30–ಕೂಲಿ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಗೂಡ್ಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ 15ಕ್ಕೂ ಹೆಚ್ಚು ಮಹಿಳೆಯರು ಗಾಯಗೊಂಡಿರುವ ಘಟನೆ ತಾಲೂಕಿನ ಹೊನ್ನಹಳ್ಳಿ ಸಮೀಪ ಮಂಗಳವಾರ ನಡೆದಿದೆ.

ತಾಲೂಕಿನ ಅಮಚವಾಡಿ ಗ್ರಾಮದಿಂದ ನಿಜಲಿಂಗನಪುರಕ್ಕೆ ಕೂಲಿಗಾಗಿ ಗೂಡ್ಸ್ ವಾಹನದಲ್ಲಿ ಮಹಿಳೆಯರು ತೆರಳುತ್ತಿದ್ದರು. ಈ ವೇಳೆ ಹೊನ್ನಹಳ್ಳಿ ಗ್ರಾಮದ ಬಳಿ ಚಾಲಕನ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಗಿದೆ. ಪರಿಣಾಮ ವಾಹನದಲ್ಲಿದ್ದ 20–25 ಮಹಿಳೆಯರ ಪೈಕಿ 15ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿದ್ದು, ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

ಸ್ಥಳಕ್ಕೆ ತೆರಳಿದ ಗ್ರಾಮಾಂತರ ಠಾಣೆ ಪೊಲೀಸರು, ಗಾಯಾಳುಗಳನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ವಾಹನವನ್ನು ವಶಕ್ಕೆ ಪಡೆದುಕೊಂಡಿರುವ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಆಸ್ಪತ್ರೆಗೆ ಶಾಸಕ ಭೇಟಿ: ವಿಷಯ ತಿಳಿದು ನಗರದ ಸಿಮ್ಸ್ ಆಸ್ಪತ್ರೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಉಪವಿಭಾಗಾಧಿಕಾರಿ ಮಹೇಶ್ ಭೇಟಿ ನೀಡಿ, ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.



ಚಾಮರಾಜನಗರ ತಾಲೂಕಿನ ಹೊನ್ನಹಳ್ಳಿ ಸಮೀಪ ಗೂಡ್ಸ್ ವಾಹನ ಪಲ್ಟಿಯಾಗಿರುವುದು.

ಕಿರಗಸೂರಲ್ಲಿ ಕಾಮಗಾರಿ ಪರಿಶೀಲನೆ



ಜಿಪಂ ಸಿಇಓ ಮೋನಾ ರೋಹಟ್ ಕಿರಗಸೂರು ಗ್ರಾಮದಲ್ಲಿ ನಡೆಯುತ್ತಿರುವ ನರೇಗಾ ಕಾಮಗಾರಿ ಮಾಹಿತಿ ಪಡೆದರು.

ಚಾಮರಾಜನಗರ, ಜು.30– ತಾಲೂಕಿನ ಮಾದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿರಗಸೂರು ಗ್ರಾಮದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಡೆಯುತ್ತಿರುವ ಕೆರೆ ಹೂಳೆತ್ತುವ ಕಾಮಗಾರಿ ಹಾಗೂ ಕಾಲುವೆ ಅಭಿವೃದ್ಧಿ ಕಾಮಗಾರಿ ಸ್ಥಳಕ್ಕೆ ಜಿಪಂ ಸಿಇಓ ಮೋನಾ ರೋಹಟ್ ಮಂಗಳವಾರ ಭೇಟಿ ನೀಡಿ, ಪರಿಶೀಲಿಸಿದರು.

ಇದೇ ವೇಳೆ ನರೇಗಾ ಯೋಜನೆಯಡಿ ಕೂಲಿ ಮೊತ್ತ ಹಾಗೂ ವೈಯಕ್ತಿಕ ಕಾಮಗಾರಿ ಕುರಿತು ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿ ಮಾಹಿತಿ ಪಡೆದರು. ಜಿಪಂ ಸಹಾಯಕ ನಿರ್ದೇಶಕ ಪ್ರಕಾಶ್ ಕುಮಾರ್, ಗ್ರಾಪಂ ಅಧ್ಯಕ್ಷ ರೂಪೇಶ್, ಸದಸ್ಯ ಮೋಹನ್‌ಕುಮಾರ್, ಪಿಡಿಓ ಭಾಗ್ಯಲಕ್ಷ್ಮೀ ಮತ್ತಿತರರು ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ಚಾ.ನಗರದಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ

ಚಾಮರಾಜನಗರ, ಜು.30–ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ದೇವಸ್ಥಾನ ಎದುರು ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಜೋಡಿರಸ್ತೆ ಮಾರ್ಗವಾಗಿ ಜಿಲ್ಲಾಡಳಿತ ಭವನದವರೆಗೆ ಮೆರವಣಿಗೆ ನಡೆಸಿದರು.

ಈ ವೇಳೆ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಕಾರ್ಯಕರ್ತರು ರಸ್ತೆಯಲ್ಲೇ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಪ್ರಸಕ್ತ ಸಾಲಿಗೆ 4000 ರೂ. ಮುಂಗಡ ನಿಗದಿಗೊಳಿಸಬೇಕು. ಕಳೆದ ಸಾಲಿನ ಪ್ರತಿಟನ್‌ಗೆ 150 ರೂ. ಲಾಭಾಂಶ ನೀಡಬೇಕು. ಸಕ್ಕರೆ ಕಾರ್ಖಾನೆಗಳ ಮುಖ್ಯದ್ವಾರದಲ್ಲಿ ಎಪಿಎಂಸಿ ಮುಖಾಂತರ ತೂಕದ ಯಂತ್ರ ಅಳವಡಿಸಬೇಕು. ಬೇರೆ ಜಿಲ್ಲೆಯ ಕಬ್ಬು ಸಾಗಣೆ ನಿರ್ಬಂಧ ಹೇರಬಾರದು. ಮುಕ್ತ ಮಾರುಕಟ್ಟೆಯಲ್ಲಿ ರೈತರು ಮಾರಾಟ ಮಾಡಿದರೆ ಹೆಚ್ಚಿನ ಬೆಲೆ ಸಿಗಲಿದೆ. ಕಬ್ಬು ಕಟಾವು, ಸಾಗಣೆ ಕೂಲಿಯನ್ನು ಕಾರ್ಖಾನೆಗಳು ಮನಬಂದಂತೆ ನಿಗದಿ ಮಾಡಿ ರೈತರನ್ನು ಸುಲಿಗೆ ಮಾಡುತ್ತಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ನಂತರ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಜಿಲ್ಲಾ ಉಪಾಧ್ಯಕ್ಷ ಮಲೆಯೂರು ಪ್ರವೀಣ್, ಕಾರ್ಯದರ್ಶಿ ಮಹೇಂದ್ರ ತಾಲೂಕು ಅಧ್ಯಕ್ಷ ಅರಳಿಕಟ್ಟೆ ಕುಮಾರ್, ಸುಜ್ಜಲೂರು ಜಯಸ್ವಾಮಿ, ಕುಂತೂರು ರವಿ, ತೇರಂಬಳ್ಳಿ ಬಸವರಾಜು, ಅಂಬಳೆ ಮಹದೇವಸ್ವಾಮಿ, ದೇವನೂರು ನಾಗೇಂದ್ರ ಮತ್ತಿತರರು ಭಾಗವಹಿಸಿದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.



ಪತ್ರಿಕಾ ವಿತರಕರಿಗೆ ಸನ್ಮಾನ...

ಕೊಳ್ಳೇಗಾಲ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಪತ್ರಿಕಾ ವಿತರಕರಾದ ರಫಿ ಉಲ್ಲಾಖಾನ್, ಸತೀಶ್, ಮಲ್ಲಿಕಾರ್ಜುನ, ಮಹದೇವ, ನಟೇಶ ಬಾಬು ಹಾಗೂ ದತ್ತಿ ಪ್ರಶಸ್ತಿ ಪುರಸ್ಕೃತ ರಾಜೇಶ್, ರಾಜಶೇಖರ್ ಅವರನ್ನು ಸನ್ಮಾನಿಸಲಾಯಿತು. ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಸಚಿವ ಎನ್.ಮಹೇಶ್, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ, ತಾಲೂಕು ಅಧ್ಯಕ್ಷ ಡಿ.ಸಿದ್ದರಾಜು, ಉಪವಿಭಾಗಾಧಿಕಾರಿ ಮಹೇಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಗೂಳಿಪುರ ನಂದೀಶ್ ಇದ್ದರು.

ಮೂರನೇ ಪುಟದಿಂದ

ಇದಾವುದರಲ್ಲೂ ನನ್ನ ಪಾತ್ರವಿಲ್ಲ

ತಮ್ಮ ಧರ್ಮಪತ್ನಿಯ ಜಮೀನಿಗೆ ಬದಲಾಗಿ 14 ನಿವೇಶನಗಳನ್ನು ತಮ್ಮ ಕುಟುಂಬಕ್ಕೆ ನೀಡಿದ್ದು, ಇದರಲ್ಲಿ ಯಾವುದೇ ಅವ್ಯವಹಾರ ಅಥವಾ ಭ್ರಷ್ಟಾಚಾರ ನಡೆದಿಲ್ಲ.

ಮುಡಾ ನಿವೇಶನ ಪಡೆಯಲು ಮುಖ್ಯಮಂತ್ರಿಯಾಗಿ ಅಧಿಕಾರ ದುರುಪಯೋಗ ಪಡಿಸಿಕೊಂಡಿಲ್ಲ. ಪ್ರಾಧಿಕಾರದ ತೀರ್ಮಾನದಂತೆ ತಮ್ಮ ಕುಟುಂಬಕ್ಕೆ ನಿವೇಶನ ಹಂಚಿಕೆಯಾಗಿದೆ. ಇದರಲ್ಲಿ ಸರ್ಕಾರದ ಪಾತ್ರವೂ ಇಲ್ಲ ಎಂದು ಪಕ್ಷದ ವರಿಷ್ಠರಿಗೆ ಸ್ಪಷ್ಟಪಡಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಜಾಯಿಷಿ ನೀಡಿರುವ ಮುಖ್ಯಮಂತ್ರಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಈಗಾಗಲೇ ತನಿಖೆ ನಡೆಸುತ್ತಿದೆ, ಆರೋಪ ಎದುರಿಸುತ್ತಿರುವ ಕೆಲವು ಅಧಿಕಾರಿಗಳ ಬಂಧನವೂ ಆಗಿದ್ದು, ಆರೋಪಿಗಳಿಂದ ಬಹಳಷ್ಟು ಪ್ರಮಾಣದಲ್ಲಿ ಹಣವನ್ನೂ ವಾಪಸ್ ಪಡೆಯಲಾಗಿದೆ.

ಹಗರಣದ ಮಾಹಿತಿ ಬಹಿರಂಗವಾಗುತ್ತಿದ್ದಂತೆ ಸಂಬಂಧಪಟ್ಟ ಸಚಿವರ ರಾಜೀನಾಮೆಯನ್ನೂ ಪಡೆಯಲಾಗಿದೆ, ಅಲ್ಲದೆ, ಅವರನ್ನು ತನಿಖಾ ಸಂಸ್ಥೆ ವಿಚಾರಣೆಗೂ ಒಳಪಡಿಸಿದೆ ಎಂಬುದಾಗಿ ಪ್ರಕರಣದ ಪೂರ್ಣ ವಿವರಗಳನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ. ಹಗರಣ ಸಂಬಂಧ ಕೇಂದ್ರ ಸರ್ಕಾರ ರಾಜಕೀಯ ಸೇಡಿನ ಕ್ರಮಕೈಗೊಳ್ಳುತ್ತಿದ್ದು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ದೂರಿನ ಆಧಾರದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ಮತ್ತು ಸಿಬಿಐ ತನಿಖೆ ನೆಪದಲ್ಲಿ ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡುತ್ತಿವೆ. ಮುಡಾ ಆಡಳಿತ ಲೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆಗೂ ಆದೇಶ ಮಾಡಿದ್ದೇನೆ ಎಂದು ಮುಖ್ಯಮಂತ್ರಿ ಸಮಜಾಯಿಷಿ ನೀಡಿದ್ದಾರೆ.

ಕರ್ನಾಟಕದಲ್ಲಿನ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ನಿರಾಧಾರ ಹಗರಣಗಳನ್ನೇ ಮುಂದಿಟ್ಟುಕೊಂಡು, ರಾಜಕೀಯ ದುರುದ್ದೇಶದಿಂದ ಬೀದಿಗಿಳಿದು ಹೋರಾಡುವ ನೆಪದಲ್ಲಿ ತಮ್ಮ ವರ್ಚಸ್ಸಿಗೆ ಮಸಿ ಬಳಿಯುವ ಯತ್ನದಲ್ಲಿ ತೊಡಗಿವೆ ಎಂದು ದೂರಿದ್ದಾರೆ.

ಕರ್ನಾಟಕ ವಿಧಾನ ಮಂಡಲದ ಅಧಿವೇಶನ ಸಂದರ್ಭ ದಲ್ಲೂ ಪ್ರತಿಪಕ್ಷ ಬಿಜೆಪಿ–ಜೆಡಿಎಸ್ ಎತ್ತಿದ ವಾಲ್ಮೀಕಿ ಹಗರಣ ಚರ್ಚೆಗೆ ಸದನದಲ್ಲೇ ಸಮರ್ಪಕ ಉತ್ತರ ನೀಡಿದ್ದು, ಆದಾಗ್ಯೂ ವಿರೋಧ ಪಕ್ಷಗಳು ಪ್ರಕರಣಗಳನ್ನು ಅನಗತ್ಯವಾಗಿ ಸಾರ್ವಜನಿಕವಾಗಿ ಚರ್ಚೆಯ ವಿಷಯವನ್ನಾಗಿಸುತ್ತಿವೆ ಎಂದು ಸಿದ್ದರಾಮಯ್ಯ ಹೈಕಮಾಂಡ್‌ಗೆ ತಿಳಿಸಿದ್ದಾರೆ.

ಕುಮಾರ ಕೃಪಾದಲ್ಲಿ ನ್ಯಾಯಾಂಗ ತನಿಖೆ

ಮೇಜು, ಕಂಪ್ಯೂಟರ್, ಇಂಟರ್‌ನೆಟ್, ಪ್ರಿಂಟರ್, ಸ್ಕ್ಯಾನರ್, ಲೇಖನ ಸಾಮಗ್ರಿ, ಕಡತಗಳನ್ನು ರಕ್ಷಿಸಿಡಲು ರ್‍ಯಾಕ್‌ಗಳು, ಡಿಟಿಪಿ ಆಪರೇಟರ್, ಸಹಾಯಕರು ಸೇರಿದಂತೆ ತನಿಖೆಗೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇಂದು ಮುಡಾ ಆಯುಕ್ತರು, ಸೂಪರಿಂಟೆಂಡಿಂಗ್ ಇಂಜಿನಿಯರ್‌ರನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದ ನ್ಯಾಯಮೂರ್ತಿಗಳು, ಕುಮಾರ ಕೃಪಾದಲ್ಲಿ ಸಭೆ ನಡೆಸಿ ಹಗರಣ ಕುರಿತು ಸಮಾಲೋಚನೆ ನಡೆಸಿದರು. ತಾವು ಕೇಳಿದಾಗ ಅಗತ್ಯ ದಾಖಲೆ, ಕಡತಗಳನ್ನು ಒದಗಿಸಿ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿಯ ವಿಚಾರಣೆಗೆ ಕಳುಹಿಸಬೇಕೆಂದು ಸೂಚನೆ ನೀಡಿದ್ದಾರೆ. ಇನ್ನೆರಡು ದಿನಗಳಲ್ಲಿ ತನಿಖೆಗೆ ಸಂಬಂಧಿಸಿದ ಅಧಿಸೂಚನೆ ಹೊರಬೀಳಲಿದ್ದು, ಆಯೋಗ ತನಿಖಾ ಕಾರ್ಯ ಆರಂಭಿಸಲಿದೆ. ಈ ಹಿಂದೆ ಸರ್ಕಾರ ರಚಿಸಿದ್ದ ಹಿರಿಯ ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದ ನಾಲ್ವರ ಸಮಿತಿಯು 10 ದಿನಗಳ ಕಾಲ ಮುಡಾ ಕಚೇರಿ ಸಭಾಂಗಣದಲ್ಲಿ ತನಿಖೆ ನಡೆಸಿತ್ತಾದರೂ, ನಂತರ ಸರ್ಕಾರ ಆ ಸಮಿತಿಯನ್ನು ರದ್ದುಗೊಳಿಸಿ ಏಕಸದಸ್ಯ ನ್ಯಾಯಾಂಗ ತನಿಖಾ ಆಯೋಗಕ್ಕೆ ತನಿಖಾ ಜವಾಬ್ದಾರಿ ಒಪ್ಪಿಸಿತ್ತು.

ಸಿದ್ದರಾಮಯ್ಯ ಸರ್ಕಾರ ಅಸ್ಥಿರಗೊಳಿಸುವ ಯತ್ನ!

ರಾಜ್ಯಪಾಲರು ವಿವರಣೆ ಕೋರಿ ಪತ್ರ ಬರೆದಿದ್ದಾರೆಂಬ ಮಾಹಿತಿ ಹಿನ್ನೆಲೆಯಲ್ಲಿ, ವಿಷಯವನ್ನು ಮತ್ತಷ್ಟು ಗಂಭೀರಗೊಳಿಸಲು ದೆಹಲಿ ಮಟ್ಟದಲ್ಲಿ ಪ್ರಯತ್ನಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಮುಡಾ ಹಗರಣ ಸಂಬಂಧ ಟಿ.ಜೆ. ಅಬ್ರಹಾಂ ನೀಡಿರುವ ದೂರಿನ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ವಿರುದ್ಧದ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡುವ ಪರಿಸ್ಥಿತಿ ಉದ್ಭವಿಸದಂತೆ ಪ್ರತಿ ತಂತ್ರಗಾರಿಕೆಯಲ್ಲಿ ರಾಜ್ಯ ಸರ್ಕಾರ ನಿರತವಾಗಿದೆ.

ದೆಹಲಿ ಮಟ್ಟದಲ್ಲಿ ರಾಜಕೀಯ ಪಿತೂರಿಗಳು ಆರಂಭವಾಗಿರುವ ಬೆನ್ನಲ್ಲೇ ರಾಜ್ಯ ಸರ್ಕಾರ ತನ್ನ ದಾಳ ಉರುಳಿಸಲು ಸಜ್ಜಾಗಿದ್ದು, ಬರುವ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಮಹತ್ವದ ನಿರ್ಧಾರ ಕೈಗೊಳುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮೊಕದ್ದಮೆ ಹೂಡಲು ರಾಜ್ಯಪಾಲರು ಅನುಮತಿ ನೀಡಬಹುದೆಂಬ ಶಂಕೆಗೆ ಕಾರಣವೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ. ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ, ಅವರ ವಿರುದ್ಧ ಶಿವಮೊಗ್ಗದ ನ್ಯಾಯವಾದಿಗಳಿಬ್ಬರು ಅಂದಿನ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರಿಗೆ ಮನವಿ ಸಲ್ಲಿಸಿ, ಮುಖ್ಯಮಂತ್ರಿಗಳ ವಿರುದ್ಧ ವಿಚಾರಣೆಗೆ ಅನುಮತಿ ಕೋರಿದ್ದರು.

ಈಗ ಸಿದ್ದರಾಮಯ್ಯ ವಿರುದ್ಧ ಅದೇ ತಂತ್ರಗಾರಿಕೆ ಬಳಸಲು ದೆಹಲಿ ಮಟ್ಟದಲ್ಲಿ ಯತ್ನಗಳು ನಡೆಯುತ್ತಿವೆ ಎಂಬ ಮಾತುಗಳು ಕೇಳಿಬರುತ್ತಿವೆ.

ಕಂಚು ಗೆದ್ದ ಮನು ಭಾಕರ್, ಸರಬ್ಜೋತ್ ಸಿಂಗ್

ಪರ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ವಿಶೇಷ ದಾಖಲೆ ಬರೆದರು. ಏಕೈಕ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ವೈಯಕ್ತಿಕವಾಗಿ 2 ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಎಂಬ ದಾಖಲೆಯನ್ನು ಮನು ಭಾಕರ್ ಬರೆದಿದ್ದಾರೆ.

ಸಿಂಗಲ್ಸ್‌ನಲ್ಲೂ ಮನು ಭಾಕರ್‌ಗೆ ಕಂಚು: ಇದಕ್ಕೂ ಮೊದಲು ಭಾನುವಾರ ನಡೆದಿದ್ದ ಸ್ಪರ್ಧೆಯಲ್ಲಿ ಮನು ಭಾಕರ್ ಅವರು 10 ಮೀಟರ್ ಏರ್ ಪಿಸ್ತೂಲ್ ಮಹಿಳೆಯರ ಸಿಂಗಲ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಭಾರತಕ್ಕೆ ಪ್ಯಾರಿಸ್ ಒಲಿಂಪಿಕ್‌ನ ಮೊದಲ ಪದಕ ನೀಡಿದ್ದರು. ಇದೇ ವೇಳೆ ಸರಬ್ಜೋತ್ ಸಿಂಗ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಪದಕ ಗೆದ್ದ 6ನೇ ಭಾರತೀಯ ಶೂಟರ್ ಎನಿಸಿಕೊಂಡರು.

ಭಾರತದ ಪರ ಒಲಿಂಪಿಕ್ಸ್ ಕ್ರೀಡಾಕೂಟಗಳಲ್ಲಿ ಈ ಹಿಂದೆ ಕೆ.ಡಿ.ಜಾಧವ್, ಮೇಜರ್ ಧ್ಯಾನ್‌ಚಂದ್, ಕರ್ಣಮ್ ಮಲ್ಲೇಶ್ವರಿ, ಅಭಿನವ್ ಬಿಂದ್ರಾ ಅವರು ವೈಯಕ್ತಿಕವಾಗಿ ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ. ಇನ್ನು ಸೈನಾ ನೆಹ್ವಾಲ್, ಪಿ.ವಿ.ಸಿಂಧೂ, ಸುಶೀಲ್ ಕುಮಾರ್, ನೀರಜ್ ಚೋಪ್ರಾ ಹಾಗೂ ಹಲವರು ಕೂಡ ಈ ಕ್ರೀಡಾಕೂಟದಲ್ಲಿ ಸ್ವರ್ಣ ಪದಕದ ಸಾಧನೆ ಮಾಡಿದ್ದಾರೆ. ಆದರೆ, ಭಾರತದ ಕ್ರೀಡಾಪಟುಗಳು ಇಲ್ಲಿವರೆಗೂ ಏಕೈಕ ಆವೃತ್ತಿಯಲ್ಲಿ 2 ವೈಯಕ್ತಿಕ ಪದಕಗಳನ್ನು ಗೆದ್ದಿಲ್ಲ. ಆದರೆ, ಶೂಟಿಂಗ್ ವಿಭಾಗದಲ್ಲಿ ಮನು ಭಾಕರ್ 2 ಪದಕ ಗೆದ್ದು ಇತಿಹಾಸ ಬರೆದಿದ್ದಾರೆ. ಇದೀಗ ಅವರು ಹ್ಯಾಟ್ರಿಕ್ ಪದಕ ಗೆಲ್ಲುವ ಅವಕಾಶ ಹೊಂದಿದ್ದು, 25 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಸ್ಪರ್ಧೆ ಮಾಡಲಿದ್ದಾರೆ.

ಮಂಗಳವಾರ ನಡೆದಿದ್ದ ಕಂಚಿನ ಪದಕ ಸ್ಪರ್ಧೆಯನ್ನು 16 ಅಂಕಗಳ ಸ್ವರೂಪದಲ್ಲಿ ಆಡಿಸಲಾಗಿತ್ತು. ಯಾವ ಜೋಡಿ ಮೊದಲು ಅಂಕಗಳನ್ನು ಕಲೆ ಹಾಕಿದರೆ ಅವರಿಗೆ ಜಯ ಘೋಷಣೆ ಮಾಡಲಾಗುತ್ತದೆ. ಭಾರತದ ಜೋಡಿ ಆರಂಭಿಕ ಸೀರಿಸ್‌ನಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಸೀರಿಸ್‌ಗಳಲ್ಲಿ ಬಲವಾಗಿ ಕಮ್‌ಬ್ಯಾಕ್ ಮಾಡಿ ಕೊರಿಯನ್ ಜೋಡಿಯನ್ನು ಮಣಿಸಿ ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿತು.

ಪ್ರಧಾನಿ ಮೋದಿ ಅಭಿನಂದನೆ: ಅದ್ಭುತ ಪ್ರದರ್ಶನ ತೋರಿ ವಿಜಯ ಸಾಧಿಸಿದ ಭಾರತದ ಜೋಡಿ ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್ ಅವರನ್ನು ಪ್ರಧಾನಿ ಮೋದಿ ಅಭಿನಂದಿಸಿದ್ದಾರೆ. ನಮ್ಮ ಶೂಟರ್‌ಗಳು ನಿರಂತರವಾಗಿ ನಮ್ಮನ್ನು ಹೆಮ್ಮೆ ಪಡಿಸುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಬರೆದಿದ್ದಾರೆ.

ಒಲಿಂಪಿಕ್‌ನಲ್ಲಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ಡಬಲ್ಸ್ ತಂಡ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದಕ್ಕಾಗಿ ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್ ಅವರಿಗೆ ಅಭಿನಂದನೆಗಳು. ಇಬ್ಬರೂ ಉತ್ತಮ ಕೌಶಲ್ಯ ಮತ್ತು ಟೀಮ್ ವರ್ಕ್ ತೋರಿದ್ದಾರೆ. ಇದು ಭಾರತಕ್ಕೆ ಖುಷಿ ತಂದಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಬಿಡಾಡಿ ದನಗಳು ಪಿಂಜರಾಪೋಲ್‌ಗೆ

ಅಡ್ಡಿಯಾಗುತ್ತಿದ್ದು ಅಪಘಾತಗಳು ಸಂಭವಿಸುತ್ತಿವೆ ಎಂದು ಸಾರ್ವಜನಿಕರು ದೂರು ನೀಡಿದ್ದರು. ಸಂಚಾರ ಪೊಲೀಸರು ಸಹ ಬಿಡಾಡಿ ದನಗಳಿಂದ ತೀವ್ರ ತೊಂದರೆಯಾಗುತ್ತಿರುವ ಬಗ್ಗೆ ಹಲವು ದೂರು ಸಲ್ಲಿಸಿದ್ದಾರೆ ಎಂದು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಸಭೆಗೆ ಮಾಹಿತಿ ನೀಡಿದರು.

ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡುವ ದನಗಳಿಂದ ವಾಹನ ಸಂಚಾರಕ್ಕೆ ಅಡ್ಡಿಯಾದಲ್ಲಿ ಮೊದಲ ಬಾರಿ 1000 ರೂ., 2ನೇ ಬಾರಿ 2,000 ರೂ. ದಂಡ ವಿಧಿಸಿ, ಮೂರನೇ ಬಾರಿ ಮತ್ತೆ ರಸ್ತೆಗೆ ಬಿಟ್ಟರೆ ಅಂತಹ ಜಾನುವಾರುಗಳನ್ನು ಪಿಂಜರಾಪೋಲ್‌ಗೆ ಒಪ್ಪಿಸಲು ಸಭೆಯು ಅನುಮೋದನೆ ನೀಡಿತು.

ತೆರಿಗೆಯಿಂದ ವಿನಾಯಿತಿ ನೀಡುವಂತೆ ಪೊಲೀಸ್–ಪಬ್ಲಿಕ್ ಶಾಲೆ ಮುಖ್ಯಸ್ಥರು ಮನವಿ ಮಾಡಿರುವ ವಿಷಯ ಕುರಿತು ಕೂಲಂಕುಷವಾಗಿ ಚರ್ಚಿಸಿ ನಿಯಮ ಮತ್ತು ಮಾರ್ಗಸೂಚಿಗಳಲ್ಲಿ ಅವಕಾಶವಿದ್ದರೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಆಡಳಿತಾಧಿಕಾರಿಗಳು ಸೂಚನೆ ನೀಡಿದರು.

ರಸ್ತೆ ಗುಂಡಿ ಮುಚ್ಚುವುದು, ರಸ್ತೆ, ಚರಂಡಿ, ಫುಟ್‌ಪಾತ್ ರಿಪೇರಿ, ಸರ್ಕಲ್ ಬ್ಯೂಟಿಫಿಕೇಷನ್ ಕಾಮಗಾರಿಗೆ ತಯಾರಿಸಿರುವ ಅಂದಾಜು ಪಟ್ಟಿಯಂತೆ ಟೆಂಡರ್ ಪ್ರಕ್ರಿಯೆಗೆ ಅನುಮತಿ ನೀಡಲೂ ಸಭೆಯು ತೀರ್ಮಾನಿಸಿದೆ.

ನಾಳೆ (ಜು. 31) ನಿವೃತ್ತರಾಗಲಿರುವ ಜಿ.ಸಿ. ಪ್ರಕಾಶ್ ಅವರಿಗೆ ಪಾಲಿಕೆ ಅಧಿಕಾರಿಗಳು ಇಂದು ಅಭಿನಂದಿಸಿ ಬೀಳ್ಕೊಟ್ಟರು. ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ, ಉಪ ಆಯುಕ್ತ (ಕಂದಾಯ) ದಾಸೇಗೌಡ, ಅಡಿಷನಲ್ ಡೆಪ್ಯುಟಿ ಕಮಿಷ್ನರ್ ಕುಸುಮಾಕುಮಾರಿ, ಮುಖ್ಯ ಲೆಕ್ಕಾಧಿಕಾರಿ ಕವಿತಾ, ಎಗ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ನಾಗರಾಜು, ದೀಪಕ್, ಅಶ್ವಿನ್, ಮಹೇಶ, ಎಲ್ಲಾ 9 ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮುಡಾ, ವಾಲ್ಮೀಕಿ ಹಗರಣಗಳಿಂದ ಸಿದ್ದರಾಮಯ್ಯ ಏಕಾಂಗಿ!

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೇಲಿ

- ಹಗರಣದಲ್ಲಿ ಕಾಂಗ್ರೆಸ್ ನಾಯಕರ ಹೆಸರು ಏಕೆ ಪ್ರಸ್ತಾಪಿಸುತ್ತಿಲ್ಲ
- ಮುಡಾ ರಿಪೇರಿ ಮಾಡಿ ಅಂದರೆ, ಏನೇನೊ ಹೇಳುತ್ತಿದ್ದಾರೆ



ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಜಿ.ಪಂ. ಮಾಜಿ ಸದಸ್ಯ ಚೆನ್ನಬಸಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.30(ಬಿಎಲ್‌ಯು)– ಮುಡಾ ಹಾಗೂ ವಾಲ್ಮೀಕಿ ನಿಗಮದಲ್ಲಿ ಹಗರಣಗಳಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಅಕ್ಷರಶಃ ಏಕಾಂಗಿ! ಇದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವ್ಯಂಗ್ಯೋಕ್ತಿ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಮೇಲಿನ ಆರೋಪಕ್ಕೆ ಸ್ಪಷ್ಟ ಉತ್ತರ ನೀಡಲಾಗದೆ ಸಿದ್ದರಾಮಯ್ಯ ತಡವರಿಸುತ್ತಿದ್ದಾರೆ. ದಾಖಲಾತಿ ಮೂಲಕ ಆರೋಪ ಸಾಬೀತು ಮಾಡಲಾಗದೆ ಹೆಚ್.ಡಿ.ದೇವೇಗೌಡರ ಕುಟುಂಬ, ಬಿ.ಎಸ್.ಯಡಿಯೂರಪ್ಪ ಕುಟುಂಬ ನಿವೇಶನ ಪಡೆದಿಲ್ಲವೇ ಎಂದೆಲ್ಲಾ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಮುಡಾದಲ್ಲಿ ಶೇ.50:50 ಅನುಪಾತದಡಿ ನಿವೇಶನ ಹಂಚಿಕೆ ಹಗರಣದ ಬಗ್ಗೆ ಸ್ಪಷ್ಟ ಉತ್ತರ ನೀಡಿ ಎಂದರೆ, ಇದನ್ನು ಬಿಟ್ಟು ಬೇರೆ ಏನೇನೊ ಮಾತನಾಡುತ್ತಿದ್ದಾರೆ. ಮುಡಾ ಗಬ್ಬೆದ್ದು ಹೋಗಿದೆ ಎಂದು ಸಿದ್ದರಾಮಯ್ಯ ಅವರೇ ಹೇಳಿಕೆ ನೀಡಿದ್ದಾರೆ. ಹೀಗಿರುವಾಗ ಇದನ್ನು ಸರಿಪಡಿಸದೆ ಅವರು ನಿವೇಶನ ಪಡೆದಿಲ್ಲವೇ, ಇವರು ನಿವೇಶನ ಪಡೆದಿಲ್ಲವೇ ಎಂದು ಅನಗತ್ಯ ವಿಚಾರ ಹೇಳುತ್ತಿದ್ದಾರೆ. ಆಡಳಿತದಲ್ಲಿರುವ ಸರ್ಕಾರ ಇಷ್ಟೊಂದು ಭಂಡತನ ಪ್ರದರ್ಶಿಸಬಾರದು. ಜೆಡಿಎಸ್ ಹಾಗೂ ಬಿಜೆಪಿ ನಾಯಕರ ಬಗ್ಗೆ ಆರೋಪ ಮಾಡುತ್ತಿರುವ ನೀವು ಕಾಂಗ್ರೆಸ್ ನಾಯಕರ ಬಗ್ಗೆ ಏಕೆ ಚಕಾರ ಎತ್ತುತ್ತಿಲ್ಲ ಎಂದು ವಿಶ್ವನಾಥ್ ಪ್ರಶ್ನಿಸಿದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಚನ್ನಬಸಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ದಿನೇಶ್‌ಕುಮಾರ್, ನಟೇಶ್ ಈಗ ವಿಧಾನಸೌಧದ ಭೈರತಿ ಸುರೇಶ್ ಆ್ಯಂಟಿ ಚೇಂಬರ್‌ನಲ್ಲಿ ಅವ್ಯವಹಾರ ಮುಂದುವರೆಸಿದ್ದಾರೆ

ಹಗರಣದ ಆರೋಪದಿಂದಾಗಿ ವರ್ಗಾವಣೆಗೊಂಡಿರುವ ಮುಡಾ ಹಿಂದಿನ ಆಯುಕ್ತ ದಿನೇಶ್‌ಕುಮಾರ್ ಹಾಗೂ ಇದಕ್ಕೂ ಹಿಂದಿನ ಮುಡಾ ಆಯುಕ್ತ ನಟೇಶ್ ಈಗಲೂ ಬೆಂಗಳೂರಿನ ವಿಧಾನಸೌಧದಲ್ಲಿ ಕುಳಿತು ಅವ್ಯವಹಾರ ಮಾಡುತ್ತಿದ್ದಾರೆ ಎಂದು ಹೆಚ್.ವಿಶ್ವನಾಥ್ ಆರೋಪಿಸಿದರು.

ನಾಯಿ ನರಿಗಳೆಲ್ಲಾ ಮುಖ್ಯಮಂತ್ರಿ ಕಚೇರಿ ಸೇರಿಕೊಂಡಿವೆ. ಅದರಲ್ಲೂ ದಿನೇಶ್‌ಕುಮಾರ್ ಹಾಗೂ ನಟೇಶ್ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಆ್ಯಂಟಿ ಚೇಂಬರ್‌ನಲ್ಲಿ ಕುಳಿತು ಅವ್ಯವಹಾರ ನಡೆಸುತ್ತಿದ್ದಾರೆ ಎಂದು ಆಪಾದಿಸಿದರು. ಮುಡಾ ಆಯುಕ್ತ ಸ್ಥಾನದಿಂದ ವರ್ಗಾವಣೆ ಆದ ದಿನದ ರಾತ್ರಿ ಕೂಡ ದಿನೇಶ್‌ಕುಮಾರ್ ಹಲವು ಆದೇಶಕ್ಕೆ ಸಹಿ ಮಾಡಿದ್ದಾರೆ. ಇದನ್ನು ನೋಡಿದರೆ ಅಕ್ರಮ ಎಸಗಲು ಇವರಿಗೆ ಎಷ್ಟು ಧೈರ್ಯ ಇತ್ತು ಎಂಬುದು ಸ್ಪಷ್ಟವಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಡಾ.ರಾಜೇಂದ್ರ ಮುಡಾ ಹಗರಣ ಸಂಬಂಧ ಸರ್ಕಾರಕ್ಕೆ ಬಹಳಷ್ಟು ಪತ್ರ ಬರೆದಿದ್ದಾರೆ. ಆದರೆ ಕೆಎಎಸ್ ಅಧಿಕಾರಿಯಾದ ದಿನೇಶ್ ಕುಮಾರ್ ಇದ್ಯಾವುದಕ್ಕೂ ಕೇರ್ ಮಾಡಿಲ್ಲ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಭೈರತಿ ಸುರೇಶ್ ಬೆಂಬಲ, ಕೃಪಾಶೀರ್ವಾದ ಇರುವ ಕಾರಣ ಅವರೇಕೆ ಹೆದರುತ್ತಾರೆ ಎಂದು ಪ್ರಶ್ನಿಸಿದ ವಿಶ್ವನಾಥ್, ತಪ್ಪಿತಸ್ಥರಿಗೆ ಸರ್ಕಾರದ ಕೃಪಾಕಟಾಕ್ಷವಿದೆ. ಆದ ಕಾರಣ ಈಗಲೂ ಅಕ್ರಮ ಮುಂದುವರೆಸಿದ್ದಾರೆ ಎಂದು ದೂರಿದರು.

ನಾನು ಹಾಗೂ ಶಾಸಕ ಟಿ.ಎಸ್. ಶ್ರೀವತ್ಸ ಹೊರತುಪಡಿಸಿ ಎಲ್ಲಾ ಪಕ್ಷದ ಶಾಸಕರು ಮುಡಾ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆಪಾದಿಸಿದರು.

ಅದೇನೆ ಇರಲಿ ಮುಡಾ ಹಾಗೂ ವಾಲ್ಮೀಕಿ ಹಗರಣದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ನಡೆಸುತ್ತಿರುವ ಪಾದಯಾತ್ರೆಯಲ್ಲಿ ನಾನು ಕೂಡ ಭಾಗವಹಿಸುತ್ತಿದ್ದೇನೆ ಎಂದು ವಿಶ್ವನಾಥ್ ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯರ ಶ್ವೇತವರ್ಣದ ಪಂಚೆ ಈಗ ಕಪ್ಪಾಗುತ್ತಿದೆ

ಮುಡಾ ಹಾಗೂ ವಾಲ್ಮೀಕಿ ಹಗರಣದಿಂದ ಸಿದ್ದರಾಮಯ್ಯ ಅವರ ಶ್ವೇತವರ್ಣದ ಶುಭ್ರ ಪಂಚೆ ಈಗ ಕಪ್ಪಾಗುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪರೋಕ್ಷವಾಗಿ ಭ್ರಷ್ಟಾಚಾರ ಆರೋಪ ಮಾಡಿದ್ದಾರೆ.

ಈಗಲೂ ಕಾಲ ಮಿಂಚಿಲ್ಲ. ನಿಮ್ಮ ಪತ್ನಿ ಪಡೆದುಕೊಂಡಿರುವ 14 ಮುಡಾ ನಿವೇಶನಗಳನ್ನು ಸರ್ಕಾರಕ್ಕೆ ಹಿಂದಿರುಗಿಸಿ. ಈ ಮೂಲಕ ನಿಮ್ಮ ಗೌರವ ಕಾಪಾಡಿಕೊಳ್ಳಿ. ಈಗಲೂ ಎಚ್ಚೆತ್ತುಕೊಳ್ಳಲಿಲ್ಲ ಅಂದರೆ ನಿಮ್ಮನ್ನು ದಾರಿ ತಪ್ಪಿಸುತ್ತಿರುವ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅಂತಹವರು ನಿಮ್ಮ ಮುಖಕ್ಕೆ ಪೂರ್ಣ ಕಪ್ಪು ಮಸಿ ಬಳಿದು ಬಿಡುತ್ತಾರೆ ಎಂದು ಎಚ್ಚರಿಸಿದರು. ಸಿದ್ದರಾಮಯ್ಯ ಪತ್ನಿ ಪಾರ್ವತಿ ಬಹಿರಂಗವಾಗಿ ಈ ತನಕ ಎಲ್ಲೂ ಕಾಣಿಸಿಕೊಂಡಿಲ್ಲ. ಅವರನ್ನು ನಾನು ಕೂಡ ಈ ತನಕ ನೋಡಿಲ್ಲ. ನಿವೇಶನ ಪಡೆದಿರುವ ಹಗರಣದಲ್ಲಿ ಅವರ ಯಾವುದೇ ಪಾತ್ರವಿಲ್ಲ. ಪಾರ್ವತಿ ಅವರಿಂದ ನಿಮಗೆ ಗೌರವವಿದೆ. ಆದರೆ ಈ ಹಗರಣದಿಂದ ನಿಮ್ಮ ಗೌರವವನ್ನು ನೀವೇ ಹರಾಜು ಹಾಕಿಕೊಳ್ಳುತ್ತಿದ್ದೀರಾ ಎಂದರು.

ರಿಯಲ್ ಎಸ್ಟೇಟ್ ನಡೆಸುವ ಭೈರತಿ ಸುರೇಶ್ ಪಕ್ಕದಲ್ಲಿ ಕೂರಿಸಿಕೊಂಡು ಮಾತನಾಡುತ್ತಿದ್ದೀರಾ. ನಿಮ್ಮ ಆರೋಪಕ್ಕೆ ಸರ್ಕಾರದ ಪ್ರಾಯೋಜಕತ್ವದ ಪತ್ರಿಕಾಗೋಷ್ಠಿ ನಡೆಸುತ್ತೀರಾ. ಈ ಮೂಲಕ ನಿಮ್ಮ ಗೌರವವನ್ನು ಬೇರೆ ಯಾರೂ ಕಳೆಯುತ್ತಿಲ್ಲ. ನೀವೇ ಕಳೆದುಕೊಳ್ಳುತ್ತಿದ್ದೀರಾ? ಎಂದರು. 40 ವರ್ಷದ ರಾಜಕಾರಣ ಮಾಡಿದ್ದಾರೆ. ನಾನು ಕಂಡಂತೆ ಸಿದ್ದರಾಮಯ್ಯ ಭ್ರಷ್ಟನಾಗಿರಲಿಲ್ಲ. ಆದರೆ ರಾಜಕೀಯದ ಸಂಧ್ಯಾಕಾಲದಲ್ಲಿ ಹಗರಣದ ಮಸಿ ಕೈಗೆ ಹಚ್ಚಿಕೊಳ್ಳುತ್ತಿದ್ದಾರೆ. ಯಾರನ್ನೊ ರಕ್ಷಣೆ ಮಾಡಲು ಇಂತಹ ತೀರ್ಮಾನ ಕೈಗೊಳ್ಳಬೇಡಿ. ಮುಡಾ ಹಗರಣವನ್ನು ಸಿಬಿಐ ತನಿಖೆಗೆ ಕೊಡಿ ಆಗ ಸತ್ಯಾಂಶ ಬಟಾಬಯಲಾಗುತ್ತದೆ ಎಂದು ಆಗ್ರಹಿಸಿದರು.

ಭೈರತಿ ಸುರೇಶ್‌ನನ್ನು ಜೈಲಿಗೆ ಕಳುಹಿಸಿಲ್ಲವೇಕೆ...!?

ಕಷ್ಟ ಬಂದಾಗ ನಿಮಗೆ ಅಹಿಂದ; ಸುಖ ಸಮಯದಲ್ಲಿ ಹಿಂದ ಸಾಕೆ

89 ಕೋಟಿ ರೂಪಾಯಿಯ ವಾಲ್ಮೀಕಿ ಹಗರಣದ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಸಚಿವರಾಗಿದ್ದ ನಾಗೇಂದ್ರನನ್ನು ಜೈಲಿಗೆ ಕಳುಹಿಸಿದ್ದೀರಾ, 5 ಸಾವಿರ ಕೋಟಿ ರೂ. ಮುಡಾ ಹಗರಣದ ಭೈರತಿ ಸುರೇಶ್‌ನನ್ನು ಏಕೆ ಜೈಲಿಗೆ ಕಳುಹಿಸದೆ ರಕ್ಷಣೆ ಮಾಡುತ್ತಿದ್ದಾರೆ. ಭೈರತಿ ಸುರೇಶ್ ತಮ್ಮ ಸಮುದಾಯದವರು ಎಂದು ಬೆಂಬಲ ನೀಡುತ್ತಿದ್ದೀರಾ ಎಂದು ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಪ್ರಶ್ನಿಸಿದ್ದಾರೆ. ಕಷ್ಟ ಬಂದಾಗ ನಿಮಗೆ ಅಹಿಂದ ಬೇಕು. ಸುಖದ ಸಮಯದಲ್ಲಿ ಹಿಂದ ಮಾತ್ರ ಸಾಕೆ ಎಂದು ಮರು ಪ್ರಶ್ನಿಸಿದ ವಿಶ್ವನಾಥ್, ಸಿದ್ದರಾಮಯ್ಯ ಅವರಿಂದ ಇಡೀ ಸಮುದಾಯದ ಮರ್ಯಾದೆ ಹೋಗಿದೆ ಎಂದು ವಾಗ್ದಾಳಿ ನಡೆಸಿದರು. ಭೈರತಿ ಸುರೇಶ್ ಮಾತ್ರವಲ್ಲದೆ ದಿನೇಶ್ ಕುಮಾರ್ ಹಾಗೂ ನಟೇಶ್‌ನನ್ನು ಕೂಡ ಜೈಲಿಗೆ ಕಳುಹಿಸಿ ಎಂದು ಒತ್ತಾಯಿಸಿದರು.

ವಾಲ್ಮೀಕಿ ಹಗರಣಕ್ಕೆ ಸಿದ್ದರಾಮಯ್ಯ ಅವರೇ ನೇರ ಹೊಣೆಗಾರರಾಗಿದ್ದಾರೆ. ಹಣಕಾಸು ಖಾತೆ ಹೊಂದಿರುವ ಅವರೇ ಈ ಹೊಣೆ ಹೊರದಿದ್ದರೆ ಬೇರೆ ಯಾರು ಹೊರುತ್ತಾರೆ. ವಾಲ್ಮೀಕಿ ನಿಗಮದ ಹಣ ತೆಲಂಗಾಣ, ಆಂಧ್ರಪ್ರದೇಶದ ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಹೋಗಿದೆ ಅಂದರೆ ಏನರ್ಥ ಎಂದು ಪ್ರಶ್ನಿಸಿದರು. ಕರ್ನಾಟಕದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಭ್ರಷ್ಟಾಚಾರ ಯಾವಾಗಲೂ ನಡೆದಿಲ್ಲ ಎಂದರು. ನಾನು 50:50 ಅನುಪಾತದಲ್ಲಿ ಯಾವುದೇ ನಿವೇಶನ ಪಡೆದಿಲ್ಲ. ಆದರೂ ಪದೇ ಪದೆ ನನ್ನ ಹೆಸರು ತಳಕು ಹಾಕುತ್ತಿದ್ದಾರೆ. ಅನವಶ್ಯಕವಾಗಿ ಆರೋಪ ಮಾಡುತ್ತಿದ್ದು, ಸರ್ಕಾರ ಸುಳ್ಳಿನ ಕಂತೆಯಾಗಿದೆ ಎಂದು ವಿಶ್ವನಾಥ್ ಆಪಾದಿಸಿದರು.

ಅಯೋಧ್ಯೆ ಬಾಲರಾಮನ ಕೆತ್ತಿದ್ದ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಡಾಕ್ಟರೇಟ್ ಪ್ರದಾನ



ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅರುಣ್ ಯೋಗಿರಾಜ್ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದರು.

ಮಥುರಾ, ಜು.30– ಅಯೋಧ್ಯೆ ರಾಮಲಲ್ಲಾ ಮೂರ್ತಿ, ಸ್ವಾಮಿ ವಿವೇಕಾನಂದರ ಪುತ್ಥಳಿ ಕೆತ್ತಿದ್ದ ಶಿಲ್ಪಿ ಅರುಣ್ ಯೋಗಿರಾಜ್ ಸೇರಿದಂತೆ ನಾಡಿನ ಆರು ಮಂದಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ.

ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಸೋಮವಾರ ಕನ್ಹಾ ನಗರ ಮಥುರಾ ತಲುಪಿದ್ದು, ಸಂಸ್ಕೃತಿ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಅರುಣ್ ಯೋಗಿರಾಜ್ ಸೇರಿದಂತೆ ನಾಡಿನ ಆರು ಮಂದಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದ ರಾಮನಾಥ್ ಕೋವಿಂದ್ ಅವರು, ಕಷ್ಟ ಬಂದಾಗ ಛಲ ಬಿಡದೆ ಗುರಿ ಮುಟ್ಟಲು ಶ್ರಮಿಸಬೇಕು ಎಂದರು. ನಾವು ಆಯ್ದುಕೊಂಡ ಹಾದಿಯಲ್ಲಿ ಮುಂದೆ ಸಾಗಿದರೆ, ನಾವು ನಮ್ಮ ಗಮ್ಯಸ್ಥಾನವನ್ನು ಖಂಡಿತವಾಗಿ ತಲುಪುತ್ತೇವೆ. ಪ್ರಸ್ತುತ ಯುಗದಲ್ಲಿ ವಿದ್ಯಾರ್ಥಿನಿಯರು ಹುಡುಗರನ್ನು ಮೀರಿಸುತ್ತಿದ್ದಾರೆ, ಇದು ಮಹಿಳಾ ಶಿಕ್ಷಣ ಮತ್ತು ಸಬಲೀಕರಣದ ಅಭಿಯಾನಕ್ಕೆ ಶಕ್ತಿ ನೀಡುತ್ತಿದೆ ಎಂದು ಅವರು ಹೇಳಿದರು.

ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಅಮೆರಿಕದ ವರದಿಯನ್ನು ಉಲ್ಲೇಖಿಸಿ, ಈ ವರದಿಯ ಪ್ರಕಾರ, ಭಾರತದ ಜನರ ಆರೋಗ್ಯದಲ್ಲಿ ದೊಡ್ಡ ಕುಸಿತವಾಗಿದೆ. ಅಧ್ಯಯನದ ಜೊತೆಗೆ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಿ ಎಂದರು. ಆರೋಗ್ಯಕರ ದೇಹ ಮತ್ತು ಉತ್ತಮ ಶಿಕ್ಷಣ ಆರೋಗ್ಯಕರ ಸಮಾಜಕ್ಕೆ ಅತ್ಯಗತ್ಯ. ಆರೋಗ್ಯವಾಗಿರಲು ಮತ್ತು ರೋಗಗಳಿಂದ ದೂರವಿರಲು ಯೋಗ ಮಾಡಿ ಎಂದರು.

ಇದೇ ವೇಳೆ ಸಂಸ್ಕೃತಿ ವಿಶ್ವವಿದ್ಯಾನಿಲಯದ ಕುಲಪತಿ ಸಚಿನ್ ಗುಪ್ತಾ ಮಾತನಾಡಿ, ಮಾಜಿ ರಾಷ್ಟ್ರಪತಿಗಳು ಆವರಣದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಅನಾವರಣಗೊಳಿಸಿದ್ದು, ಇದು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿದೆ. ಶಿಲ್ಪಿ ಅರುಣ್ ಯೋಗಿರಾಜ್ ಸೇರಿದಂತೆ ಆರು ಮಂದಿಗೆ ಗೌರವ ಪದವಿ ನೀಡಲಾಗಿದೆ ಎಂದು ತಿಳಿಸಿದರು.

ಜಿಪಿಟಿ ವೃಂದಕ್ಕೆ ವಿಲೀನಗೊಳಿಸಲು ಒತ್ತಾಯಿಸಿ ಪಿಎಸ್‌ಟಿ ಶಿಕ್ಷಕರ ಹೋರಾಟ

ಮೈಸೂರು, ಜು.30(ಎಸ್‌ಪಿಎನ್)– 2017ಕ್ಕೂ ಮುಂಚಿತವಾಗಿ ನೇಮಕವಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು (ಪಿಎಸ್‌ಟಿ) ಜ್ಯೇಷ್ಠತೆಯೊಂದಿಗೆ ಜಿಪಿಟಿ ವೃಂದಕ್ಕೆ ವಿಲೀನ ಮಾಡುವಂತೆ ಒತ್ತಾಯಿಸಿ ಆ.5ರಿಂದ ಹಂತಹಂತವಾಗಿ ಮುಷ್ಕರ ಹಮ್ಮಿಕೊಳ್ಳಲು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತೀರ್ಮಾನಿಸಿದ್ದು, ಈ ಹೋರಾಟಕ್ಕೆ ಮೈಸೂರು ಘಟಕದ ಪದಾಧಿಕಾರಿಗಳು ಬೆಂಬಲ ವ್ಯಕ್ತಪಡಿಸಿದ್ದಾರೆ. ಆ.5ರಂದು ಆಯಾಯ ತಾಲೂಕು ಹಂತದಲ್ಲಿ ಅಲ್ಲಿನ ಶಾಸಕರು ಹಾಗೂ ತಹಸೀಲ್ದಾರ್‌ಗೆ ಶಿಕ್ಷಕರು ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸುವುದು. ಆ.7ರಂದು ಜಿಲ್ಲಾ ಹಂತದಲ್ಲಿ ಜಿಪಂ ಸಿಇಓ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಪತ್ರ ಸಲ್ಲಿಸಲು ನಿರ್ಧರಿಸಲಾಗಿದೆ. ಅಂತಿಮವಾಗಿ ಆ.12ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮುಷ್ಕರ ಆರಂಭವಾಗಲಿದ್ದು, ಈ ಮುಷ್ಕರದಲ್ಲಿ ಮೈಸೂರಿನ ಶಿಕ್ಷಕರು ಭಾಗಿಯಾಗಲಿದ್ದಾರೆ.

ರಾಜ್ಯಪಾಲರಾಗಿ ವಿಜಯಶಂಕರ್ ಪ್ರಮಾಣ ವಚನ ಸ್ವೀಕಾರ



ಮೇಘಾಲಯ ರಾಜಧಾನಿ ಶಿಲ್ಲಾಂಗ್ ರಾಜ ಭವನದಲ್ಲಿ ಮಂಗಳವಾರ ರಾಜ್ಯಪಾಲರಾಗಿ ಸಿ.ಹೆಚ್.ವಿಜಯಶಂಕರ್ ಅಧಿಕಾರ ವಹಿಸಿಕೊಂಡರು. ಇದಕ್ಕೂ ಮುನ್ನ ಮೇಘಾಲಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ವೈದ್ಯನಾಥನ್ ಪ್ರಮಾಣ ವಚನ ಬೋಧಿಸಿದರು.

ವಿಶೇಷ ಮಕ್ಕಳ ಶಾಲೆಯ ಎಂ.ಶಾಂತಾಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ ಪ್ರದಾನ



ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ವಿಶೇಷ ಮಕ್ಕಳ ಶಾಲೆಯ ಗೌರವ ಕಾರ್ಯದರ್ಶಿ ಎಂ.ಶಾಂತಾ ಅವರಿಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ ನೀಡಲಾಯಿತು.

ಮೈಸೂರು, ಜು. 30– ಮೈಸೂರಿನ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ನಡೆದ ಶ್ರೀ ದುರ್ಗಾ ಫೌಂಡೇಶನ್ 5ನೇ ವರ್ಷದ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಮೈಸೂರಿನ ಕುವೆಂಪುನಗರದ ನಿವಾಸಿ ಬಸವೇಶ್ವರ ಶೈಕ್ಷಣಿಕ ಮತ್ತು ಸಾಮಾಜಿಕ ಟ್ರಸ್ಟ್ ಸಂಸ್ಥಾಪಕರು ಹಾಗೂ ನವಚೇತನ ವಿಶೇಷಚೇತನ ಮಕ್ಕಳ ಶಾಲೆಯ ಗೌರವ ಕಾರ್ಯದರ್ಶಿ ಎಂ.ಶಾಂತಾ ಅವರಿಗೆ ಕರ್ನಾಟಕ ಸೇವಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕಲಾವಿದ ಶಶಿಧರ್ ಕೋಟೆ, ಶ್ರೀ ದುರ್ಗಾ ಫೌಂಡೇಷನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಸಂಗೀತಾ ಗಾಯಕ ಶಶಿಧರ್ ಕೋಟೆ, ಸಮಾಜ ಸೇವಕಿ ಮಮತಾ ದೇವರಾಜ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಹಿರಿಯ ಪತ್ರಕರ್ತ ಅನಿಲ್ ಕುಮಾರ್, ರೂಪದರ್ಶಿ ಶೋಭಾ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹಾಗೂ ಮುತ್ತಣ್ಣ, ಬಿಬಿಎಂಪಿ ಮುಖ್ಯ ಆಯುಕ್ತರ ಸಂಪರ್ಕ ಅಧಿಕಾರಿ ಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಮಕ್ಕಳ ಚರ್ಮರೋಗ ತಜ್ಞರ ಸಮಾವೇಶಕ್ಕೆ ಡಾ.ಹೆಚ್.ಹನುಮಂತಪ್ಪರಿಗೆ ಆಹ್ವಾನ



ಮೈಸೂರು,ಜು.30–ರಾಷ್ಟ್ರೀಯ ಮಕ್ಕಳ ಚರ್ಮರೋಗ ತಜ್ಞರ ಸಮಾವೇಶ ಹಾಗೂ ರಜತ ಮಹೋತ್ಸವ ಆ.2ರಿಂದ 4ರವರೆಗೆ ಚೆನ್ನೈನಲ್ಲಿ ನಡೆಯಲಿದ್ದು, ಈ ಸಮಾವೇಶದ ವೈಜ್ಞಾನಿಕ ವಿಚಾರಗೋಷ್ಠಿಯೊಂದರಲ್ಲಿ (Anti inflammatory Diseases In Children) ಮೈಸೂರಿನ ಖ್ಯಾತ ಚರ್ಮರೋಗ ತಜ್ಞರಾದ ಡಾ.ಹೆಚ್.ಹನುಮಂತಪ್ಪ ಭಾಗವಹಿಸಲಿದ್ದಾರೆ. ಇವರು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪಾಲ್ಗೊಂಡು, ಅನೇಕ ಅತಿಥಿ ಉಪನ್ಯಾಸಗಳನ್ನು ನೀಡಿದ್ದಾರೆ. ರಾಷ್ಟ್ರೀಯ ಮಕ್ಕಳ ಚರ್ಮರೋಗ ತಜ್ಞರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆಗಳ ಮೂಲಕ ಅನೇಕ ಪ್ರಶಸ್ತಿ ಮತ್ತು ಪುರಸ್ಕಾರ ಪಡೆದಿದ್ದಾರೆ.

ತಾಲೂಕು ಪಂಚಾಯಿತಿ ಇಓಗಳ ವರ್ಗಾವಣೆ

ಮೈಸೂರು, ಜು.30(ಎಸ್‌ಪಿಎನ್)– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ತಾಲೂಕು ಪಂಚಾಯಿತಿ (ತಾಪಂ) ಇಓಗಳನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವರ್ಗಿಗೊಳಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಮೈಸೂರು ಜಿಲ್ಲೆ ಹುಣಸೂರು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಿ.ಕೆ. ಮನು ಅವರನ್ನು ಕೊಡಗು ಜಿಲ್ಲೆ ಕುಶಾಲನಗರ ತಾಪಂ ಇಓ ಹುದ್ದೆಗೆ, ಸೋಮವಾರಪೇಟೆ ತಾಪಂಗೆ ತುಮಕೂರು ಜಿಲ್ಲೆ ಗುಬ್ಬಿ ತಾಪಂ ಇಓ ವಿ.ಪರಮೇಶ್ ಕುಮಾರ್, ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಸ್. ಸತೀಶ್ ಅವರನ್ನು ನಾಗಮಂಗಲ ತಾಪಂಗೆ, ಮೈಸೂರು ಜಿಲ್ಲೆ ಹುಣಸೂರು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಿ.ಕೆ. ಮನು ವರ್ಗಾವಣೆಯಿಂದ ತೆರವಾಗಿದ್ದ ಹುದ್ದೆಗೆ ವಿಜಯಪುರ ತಾಪಂ ಇಓ ಕೆ.ಹೊಂಗಯ್ಯ ಅವರನ್ನು ವರ್ಗಾಯಿಸಿದೆ.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಪಂ ಇಓ ಹುದ್ದೆಗೆ, ಮೈಸೂರು ಜಿಲ್ಲೆ ಸರಗೂರು ತಾಪಂ ಇಓ ಕೆ.ಸುಷ್ಮಾ, ಮೈಸೂರು ತಾಪಂ ಇಓ ಎಂ.ಎಸ್. ಗಿರಿಧರ್ ವರ್ಗಾವಣೆಯಿಂದ ಖಾಲಿ ಇದ್ದ ಜಾಗಕ್ಕೆ, ತಿ.ನರಸೀಪುರ ತಾಪಂ ಇಓ ಸಿ.ಕೃಷ್ಣ, ಮಂಡ್ಯ ಜಿಲ್ಲೆ ಮದ್ದೂರು ತಾಪಂ ಇಓ ಎಲ್.ಸಂದೀಪ್ ವರ್ಗಾವಣೆಯಿಂದ ತೆರವಾದ ಜಾಗಕ್ಕೆ, ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಪಂ ಇಓ ರಾಮಲಿಂಗಯ್ಯ ಅವರನ್ನು ನಿಯೋಜಿಸಲಾಗಿದೆ.

ನಿಧನ



ಸಿ.ಆರ್.ಯೋಗಾನರಸಿಂಹ

ಮೈಸೂರು, ಜು. 30–ಮೈಸೂರಿನ ವೀಣೆ ಶೇಷಣ್ಣ ರಸ್ತೆ ನಿವಾಸಿ ಮತ್ತು ನಿವೃತ್ತ ಮುಖ್ಯೋಪಾಧ್ಯಾಯರಾದ ಸಿ.ಆರ್.ಯೋಗಾನರಸಿಂಹ (60) ಮಂಗಳವಾರ ಬೆಳಗ್ಗೆ ಹೃದಯಾಘಾತದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಶಶಿಕಲಾ, ಮಕ್ಕಳಾದ ಸುಹಾಸ್ ಮತ್ತು ಸೌಜನ್ಯ, ಸಹೋದರರಾದ ವಕೀಲ ಮತ್ತು ನೋಟರಿ ಸಿ.ಆರ್.ಸೀತಾರಾಮ್ ಮತ್ತು ವಕೀಲ ಸಿ.ಆರ್.ರಾಜಗೋಪಾಲ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು.


ಮೈಸೂರು ಮಿತ್ರ

ನಂಜನಗೂಡು ಕ್ಷೇತ್ರದ ಸಮಗ್ರ ಅಭಿವೃದ್ಧಿ ಕನಸು ನನಸಿಗೆ

ತಂದೆ ಹಾದಿಯಲ್ಲೇ ಸಾಗುತ್ತಿರುವ ಶಾಸಕ ದರ್ಶನ್



ಕಾಡುಪ್ರಾಣಿಗಳ ಹಾವಳಿಯಿಂದ ರೈತರಿಗೆ ಆಗುತ್ತಿದ್ದ ಸಮಸ್ಯೆ ತಿಳಿಯಲು ಕಾಡಂಚಿನ ಗ್ರಾಮಗಳಿಗೆ ಭೇಟಿ ನೀಡಿದ್ದ ಶಾಸಕ ದರ್ಶನ್



ಗಾಂಧೀಜಿಯವರು ಭೇಟಿ ನೀಡಿದ್ದ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಪಾದಯಾತ್ರೆ ನಡೆಸಿದ ಸಂದರ್ಭ

ನಂಜನಗೂಡು, ಜು.30– ಶಾಸಕರಾಗಿ ತಂದೆ, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರಂತೆ ಜನಸೇವೆ ಹಾಗೂ ನಂಜನಗೂಡಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಶಾಸಕ ದರ್ಶನ್ ಅವರು ತಂದೆಗೆ ತಕ್ಕ ಮಗ ಎನಿಸಿದ್ದಾರೆ.

ನಂಜನಗೂಡನ್ನು ಮಾದರಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸುವ ಕನಸು ಹೊತ್ತಿರುವ ಶಾಸಕ ದರ್ಶನ್ ಅವರು ಅದಕ್ಕಾಗಿ ಶ್ರಮಿಸುತ್ತಿದ್ದಾರೆ. 90 ಕೋಟಿ ವೆಚ್ಚದ ದೇವನೂರು ಏತ ನೀರಾವರಿ ಯೋಜನೆಗೆ ಅನುದಾನ ತಂದಿದ್ದು, ಕೌಲಂದೆ ಭಾಗದ ಕೆರೆಗಳನ್ನು ತುಂಬಿಸಿ ಬರಡು ಭೂಮಿಯನ್ನು ಹಸಿರಾಗಿಸಲು ಮುಂದಾಗಿದ್ದಾರೆ. ಅಲ್ಲದೇ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದ ಪುನರುತ್ಥಾನಕ್ಕಾಗಿ 43 ಕೋಟಿ, ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ಸಾಮಾನ್ಯ ಜನರ ಬೀದಿಗಳ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆಂದು 20 ಕೋಟಿ ಅನುದಾನ ತಂದಿದ್ದಾರೆ. 2006ರಲ್ಲಿ ಆರಂಭವಾಗಿ 2 ದಶಕ ಕಳೆದರೂ ಸಹ ಪೂರ್ಣಗೊಳ್ಳದ ನಗರದ ಒಳಚರಂಡಿ ಯೋಜನೆಗೆ ಸರ್ಕಾರದಿಂದ 20 ಕೋಟಿ ಅನುದಾನ ತಂದು ಒಳಚರಂಡಿ ಸಮಸ್ಯೆಗೆ ಮುಕ್ತಿ ಕೊಡಿಸುವ ಸಂಕಲ್ಪ ಮಾಡಿದ್ದಾರೆ.

ಕಾಡುಪ್ರಾಣಿಗಳ ಹಾವಳಿ ತಡೆಗೆ ಕ್ರಮ: ಕಾಡಂಚಿನ ಜನತೆಯ ಸಂಕಷ್ಟ ಅರಿಯಲು ರಾತ್ರಿ ವೇಳೆ ಕಾಡಂಚಿನ ಗ್ರಾಮಗಳಿಗೆ ಶಾಸಕ ದರ್ಶನ್ ಭೇಟಿ ನೀಡಿ ಪರಿಶೀಲನೆ ನಡೆಸಿ ಕಾಡುಪ್ರಾಣಿಗಳ ಹಾವಳಿಯಿಂದ ಜನತೆಯನ್ನು ರಕ್ಷಿಸಲು ಸಂಕಲ್ಪ ಮಾಡಿ ಕಾಡುಪ್ರಾಣಿ ಹಾವಳಿ ತಡೆಗೆ ಕಾಡಿನುದ್ದಕ್ಕೂ ರೈಲ್ವೆ ಬ್ಯಾರಿಕೇಡ್ ಅಳವಡಿಸುವುದರೊಂದಿಗೆ ಪರಿಹಾರ ಎಂದು ಅರ್ಥೈಸಿಕೊಂಡು ಅದಕ್ಕಾಗಿ ಸರ್ಕಾರದಿಂದ 11 ಕೋಟಿ ಬಿಡುಗಡೆ ಮಾಡಿಸಿ ರೈಲ್ವೆ ಬ್ಯಾರಿಕೇಡ್ ಅಳವಡಿಸಿ ವೆಸ್ ನಿರ್ಮಿಸುವ ಕಾಮಗಾರಿ ಆರಂಭಿಸಿದ್ದಾರೆ. ಅಲ್ಲದೇ ತಾಲೂಕಿನಾದ್ಯಂತ ವಿವಿಧ ಸಮುದಾಯ ಭವನ ನಿರ್ಮಾಣಕ್ಕೆಂದು 2.5 ಕೋಟಿ ಅನುದಾನ ತಂದಿದ್ದಾರೆ. ಜೊತೆಗೆ ಕಾಡಂಚಿನ ಗ್ರಾಮ ಕಂದೇಗಾಲದಲ್ಲಿ ರೈತರ ಅನುಕೂಲಕ್ಕಾಗಿ ಹೊಸದಾಗಿ 2 ಕೋಟಿ ವೆಚ್ಚದಲ್ಲಿ ಶಾಸಕರ ನಿಧಿಯಿಂದ ಪಶು ಆಸ್ಪತ್ರೆ ಆರಂಭಿಸಿದ್ದಾರೆ. ಸಣ್ಣ ನೀರಾವರಿ ಇಲಾಖೆಯಿಂದ 5 ಕೋಟಿ ವೆಚ್ಚದಲ್ಲಿ ಹುಲ್ಲಹಳ್ಳಿ ಮತ್ತು ನಗರದ ಅಯ್ಯಪ್ಪಸ್ವಾಮಿ ದೇವಾಲಯದ ಬಳಿ ತಡೆಗೋಡೆ ಮತ್ತು ಸೋಪಾನಕಟ್ಟೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ್ದಾರೆ. ಜೊತೆಗೆ ಒಂದೇ ವರ್ಷದಲ್ಲಿ ತಾಲೂಕಿನ ವಳಗೆರೆ, ಎಲಚಗೆರೆ, ಹೆಡಿಯಾಲ, ಹುಲ್ಲಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ಸಬ್ ಸ್ಟೇಷನ್ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

ಶಿಕ್ಷಣಕ್ಕೆ ಒತ್ತು: ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಒತ್ತು ನೀಡಿರುವ ಶಾಸಕ ದರ್ಶನ್ ಆದಿವಾಸಿ ಜನರ ಶಿಕ್ಷಣಕ್ಕಾಗಿ ತಾಲೂಕಿನ ವೆಂಕಟಗಿರಿ ಹಾಡಿಯ, ನಾಗಣಾಪುರ ಹಾಡಿಯಲ್ಲಿ ತಲಾ 3.5 ಕೋಟಿ ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಬುಡಕಟ್ಟು ಆಶ್ರಮ ವಸತಿ ಶಾಲೆ ನಿರ್ಮಾಣಕ್ಕೆ ಚಾಲನೆ ನೀಡಿದ್ದಾರೆ.

ತಂದೆ ದಿ.ಆರ್.ಧ್ರುವನಾರಾಯಣ್ ಅವರು ತಮ್ಮ ಜನ್ಮ ದಿನದಂದು ಹಾಡಿ ಜನರೊಂದಿಗೆ ಸಮಯ ಕಳೆಯುತ್ತಿದ್ದನ್ನು ಮನಗಂಡು ತಾವೂ ಅದೇ ಹಾದಿಯಲ್ಲಿ ಸಾಗಿ ಹಾಡಿಯ ಜನರಿಗೆ ಶಾಲು ಕಂಬಳಿ ನೀಡಿ ಅವರೊಂದಿಗೆ ಜನ್ಮದಿನ ಆಚರಿಸಿಕೊಂಡು ಇತರ ಜನಪ್ರತಿನಿಧಿಗಳಿಗೆ ಮಾದರಿಯಾಗಿದ್ದಾರೆ.

ರಾಜಕೀಯ ಅನುಭವವಿಲ್ಲದಿದ್ದರೂ ತಂದೆ ಹಾದಿಯಲ್ಲಿ ಸಾಗಿ ಒಂದೇ ವರ್ಷದಲ್ಲಿ ಅನುಭವಿ ರಾಜಕಾರಣಿಯಂತೆ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿರುವುದಲ್ಲದೆ ಸದನದಲ್ಲೂ ಕೂಡ ಸಕ್ರಿಯವಾಗಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವ ಮೂಲಕ ಜನಸೇವೆಯಲ್ಲಿ ತೊಡಗಿ ತಂದೆಗೆ ತಕ್ಕ ಮಗ ಎನಿಸಿಕೊಂಡಿದ್ದಾರೆ.

ಅಪ್ಪಣ್ಣನವರ ವಚನಗಳು ಎಲ್ಲಾ ಕಾಲಕ್ಕೂ ಪ್ರಸ್ತುತ

ಹಡಪದ ಅಪ್ಪಣ್ಣ ಜಯಂತಿಯಲ್ಲಿ ಶಾಸಕ ಅನಿಲ್



ಹಡಪದ ಅಪ್ಪಣ್ಣ ಜಯಂತಿಯನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಸರಗೂರು, ಜು.30– ಹಡಪದ ಅಪ್ಪಣ್ಣನವರ ವಚನಗಳು ಎಲ್ಲಾ ಕಾಲಕ್ಕೂ ಪ್ರಸ್ತುತ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಹಡಪದ ಅಪ್ಪಣ್ಣನವರ ಜಯಂತಿಯಲ್ಲಿ ಮಾತನಾಡಿದ ಅವರು, ಯಾವುದೇ ಒಂದು ಸಮುದಾಯ ಅಭಿವೃದ್ಧಿಯಾಗಲು ಶಿಕ್ಷಣ, ಸಂಘಟನೆ ಹಾಗೂ ಹೋರಾಟದಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಲ್ಲಾ ಮಹನೀಯರ ಜಯಂತಿಗಳನ್ನು ಪ್ರತಿವರ್ಷ ತಪ್ಪದೇ ಆಚರಿಸುವಂತಾಗಬೇಕು. ಅವರು ಸಾರಿದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರುವಂತಾಗಬೇಕು ಎಂದರು.

ಜಯಂತಿ, ಸಮಾರಂಭಗಳು ಜನಾಂಗಗಳ ಬೇಕು ಬೇಡಗಳ ವೇದಿಕೆಯಾಗಬೇಕು. ಇಂತಹ ವೇದಿಕೆಗಳಲ್ಲಿ ತಮ್ಮ ಸಮಸ್ಯೆಗಳನ್ನು ನಿವೇದಿಸಿಕೊಂಡಲ್ಲಿ ಪರಿಹಾರ ಕಂಡುಕೊಳ್ಳಲು ಸಹಾಯವಾಗುತ್ತದೆ. ಸವಿತಾ ಸಮಾಜದವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಉನ್ನತ ಶಿಕ್ಷಣ ಪಡೆಯುವಂತಾಗಬೇಕು. ಅಂತಹವರಿಗೆ ಸರ್ಕಾರದ ನೆರವು ದೊರಕಿಸಿಕೊಡಲು ಶ್ರಮಿಸುತ್ತೇನೆ ಎಂದರು.

ಸವಿತಾ ಸಮಾಜದ ಸಮುದಾಯ ಭವನಕ್ಕೆ ನಿವೇಶನ ದೊರಕಿಸಿಕೊಡುವುದಲ್ಲದೆ ಭವನ ನಿರ್ಮಾಣಕ್ಕೂ ಅನುದಾನ ಮಂಜೂರು ಮಾಡಿಸಿಕೊಡುತ್ತೇನೆ. ಪಪಂ ವತಿಯಿಂದ ಸಿಎ ನಿವೇಶನವನ್ನು ನಮ್ಮ ತಂದೆಯವರ ಹೆಸರಿನಲ್ಲಿ ಮಂಜೂರು ಮಾಡಿಕೊಡಲು ಮುಂಗಡ ಹಣ ನೀಡುವುದಾಗಿ ತಿಳಿಸಿದರು.

ತಾಲೂಕು ಸವಿತಾ ಸಮಾಜದ ಅಧ್ಯಕ್ಷ ನರಸಿಂಹ, ತಹಸೀಲ್ದಾರ್ ರುಕಿಯಾ ಬೇಗಂ, ಜಿಪಂ ಮಾಜಿ ಸದಸ್ಯರಾದ ಪಿ.ರವಿ, ಕೆ.ಚಿಕ್ಕವೀರನಾಯಕ, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿದರು.

ತಾಪಂ ಇಓ ಸುಷ್ಮಾ, ಕಸಾಪ ಅಧ್ಯಕ್ಷ ವೈ.ಡಿ.ರಾಜಣ್ಣ, ತಾಲೂಕು ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಶಿಕ್ಷಕರಾದ ನಿಂಗರಾಜು, ದಾಸಾಚಾರಿ, ಪಪಂ ಮಾಜಿ ಅಧ್ಯಕ್ಷೆ ರಾಧಿಕಾ, ಮಾಜಿ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಶಿವಕುಮಾರ್, ಚಲುವಕೃಷ್ಣ, ಮುಖಂಡರಾದ ನವೀನ್, ರಮೇಶ್, ಸ್ವಾಮಿ, ಪುಟ್ಟಹನುಮಯ್ಯ, ಸವಿತಾ ಸಮಾಜದ ಟೌನ್ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ರವಿಕುಮಾರ್, ರಾಜು, ಗೌರವಾಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಪ್ರಭ, ಖಜಾಂಚಿ, ಕಾಳಶೆಟ್ಟಿ, ಗಡಿ ಯಜಮಾನರಾದ ಚಂದ್ರಶೇಖರ್, ಯಜಮಾನರಾದ ಮುರಾರಿ, ಮಾಜಿ ಅಧ್ಯಕ್ಷರಾದ ಕುಮಾರ್, ಮಹೇಶ್, ನಾಗರಾಜು, ಎಂ.ಮಹೇಶ್, ಗೋವಿಂದರಾಜು, ಹೆಚ್.ಡಿ.ಕೋಟೆ ಸವಿತಾ ಸೇವಾ ಸಮಾಜ ಅಧ್ಯಕ್ಷ ರೇವಣ್ಣ, ಹ್ಯಾಂಡ್ ಪೋಸ್ಟ್ ಅಧ್ಯಕ್ಷ ಸುರೇಶ್, ಜಿ.ಬಿ.ಸರಗೂರು ಅಧ್ಯಕ್ಷ ವೆಂಕಟೇಶ್, ಹಂಪಾಪುರ ಅಧ್ಯಕ್ಷ ಕಾಂತರಾಜು, ಹೆಡಿಯಾಲ ಅಧ್ಯಕ್ಷ ಮಹೇಶ್, ಮಡಿಕೆಹುಂಡಿ ಅಧ್ಯಕ್ಷ ನಂಜುಂಡಸ್ವಾಮಿ, ಮಹಿಳಾ ಅಧ್ಯಕ್ಷೆ ಗೀತಾ ಸೇರಿದಂತೆ ಇನ್ನಿತರರಿದ್ದರು. ಇದೇ ವೇಳೆ ಸಮಾಜದ ಹಿರಿಯರನ್ನು ಅಭಿನಂದಿಸಲಾಯಿತು.

ತಿ.ನರಸೀಪುರದಲ್ಲಿ ಹಡಪದ ಅಪ್ಪಣ್ಣ, ಡಾ.ಫ.ಗು.ಹಳಕಟ್ಟಿ ಜಯಂತಿ

ವಚನಗಳು ವಿಶ್ವ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ

ಚಿಕ್ಕಮಗಳೂರಿನ ಎನ್.ಆರ್.ಪುರ ಬಸವಕೇಂದ್ರದ ಬಸವಯೋಗಿ ಪ್ರಭು ಅಭಿಪ್ರಾಯ



ಕಾರ್ಯಕ್ರಮದಲ್ಲಿ ಹಡಪದ ಅಪ್ಪಣ್ಣ ಹಾಗೂ ಫ.ಗು.ಹಳಕಟ್ಟಿ ಭಾವಚಿತ್ರಗಳಿಗೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ, ಜು.30– ಹಡಪದ ಅಪ್ಪಣ್ಣನವರು ವಚನಗಳ ಮೂಲಕ ಸಮಾಜ ಸುಧಾರಣೆಗೆ ಮುಂದಾದರೆ, ಡಾ.ಫ.ಗು.ಹಳಕಟ್ಟಿ ಅವರು ವಚನಕಾರರು ರಚಿಸಿದ ವಚನಗಳನ್ನು ಸಂಗ್ರಹಿಸಿ ಮುದ್ರಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದರು ಎಂದು ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರ ಬಸವ ಕೇಂದ್ರದ ಬಸವಯೋಗಿ ಪ್ರಭು ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಹಡಪದ ಅಪ್ಪಣ್ಣ ಹಾಗೂ ಡಾ.ಫ.ಗು.ಹಳಕಟ್ಟಿ ಜಯಂತಿಯಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಸಮಾಜದ ಸುಧಾರಣೆಗೆ ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಅಲ್ಲಮಪ್ರಭು, ಸಿದ್ದರಾಮ ಸೇರಿದಂತೆ ಮೊದಲಾದವರು ಸರಳ ಭಾಷೆಯ ವಚನಗಳ ಮೂಲಕ ಸಮಾಜದಲ್ಲಿದ್ದ ಅಂಕುಡೊಂಕುಗಳನ್ನು ತಿದ್ದಲು ಮುಂದಾದರು. ಅವರ ವಚನಗಳಿಂದ ಜನಸಾಮಾನ್ಯರು ಬದಲಾಗಲು ಸಾಧ್ಯವಾಯಿತು. ವಚನಗಳು ವಿಶ್ವ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ಎಂದರು.

ಇಂದಿನ ಯುವಜನತೆ ವಚನಗಳನ್ನು ಓದಿ ಅದರಲ್ಲಿರುವ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಜೊತೆಗೆ ಸದೃಢ ಭಾರತ ನಿರ್ಮಾಣಕ್ಕೆ ಮುಂದಾಗಬೇಕು ಎಂದರು. ಪ್ರಪ್ರಥಮ ಪ್ರಜಾಪ್ರಭುತ್ವದ ಸಂಸತ್ತು ಎಂದೇ ಹೆಸರಾದ ಅನುಭವ ಮಂಟಪದಲ್ಲಿ ಬಸವಣ್ಣನವರ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ಹಡಪದ ಅಪ್ಪಣ್ಣನವರು ಎಲ್ಲರಿಗೂ ಮಾದರಿಯಾಗಿದ್ದರು. ಅಪ್ಪಣ್ಣನವರು 250ಕ್ಕೂ ಹೆಚ್ಚು ವಚನಗಳನ್ನು ಅಪ್ಪಣ್ಣ ಪ್ರಿಯ ಚನ್ನಬಸವಣ್ಣ ಎಂಬ ಅಂಕಿತನಾಮದಿಂದ ರಚಿಸಿದ್ದಾರೆ ಎಂದರು. ಬಸವಣ್ಣನವರಿಗೆ ಅಪ್ಪಣ್ಣ ಪ್ರಾಣವೇ ಆಗಿದ್ದರು. ಇದಕ್ಕೆ ಸಾಕ್ಷಿ ಕಲ್ಯಾಣ ಕ್ರಾಂತಿಯ ಕೊನೆಯ ದಿನಗಳ ಕುರಿತ ಶೂನ್ಯ ಸಂಪಾದನೆಯಲ್ಲಿನ ವಿವರಗಳಿಂದ ನಮಗೆ ತಿಳಿಯುತ್ತದೆ. ಒಬ್ಬ ಕಾರ್ಯದರ್ಶಿ ಹೇಗೆ ಕಾರ್ಯ ನಿರ್ವಹಿಸಬೇಕೆಂಬುದಕ್ಕೆ ಅಪ್ಪಣ್ಣ ಉದಾಹರಣೆಯಾಗಿ ನಿಲ್ಲುತ್ತಾರೆ. ಆದರೆ ನಮ್ಮಲ್ಲಿ ಹಡಪದ ಅಪ್ಪಣ್ಣನ ಕುರಿತು, ಅವರ ರಚಿಸಿದ ವಚನಗಳ ಕುರಿತು ಹಾಗೂ ಅವರ ಜೀವನದ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಮಾತನಾಡಿ, ಡಾ.ಫ.ಗು.ಹಳಕಟ್ಟಿ ಅವರು ವಚನ ಸಾಹಿತ್ಯ ಸಂಗ್ರಹ ಮತ್ತು ವಚನಗಳ ಕೊಡುಗೆ ಮೂಲಕ ವ್ಯಕ್ತಿತ್ವ ವಿಕಸನ ಹಾಗೂ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಅವರು ಹಳ್ಳಿ ಹಳ್ಳಿಗಳನ್ನು ಸುತ್ತಿ ಓಲೆಗರಿಗಳಲ್ಲಿ ಬರೆದ ವಚನ ಸಾಹಿತ್ಯವನ್ನು ಸಂಗ್ರಹಿಸಿ ತಮ್ಮ ಸ್ವಂತ ಹಣದಿಂದ ಮುದ್ರಣ ಮಾಡುವುದರೊಂದಿಗೆ ಸಾರ್ವಜನಿಕರಿಗೆ ದೊರಕುವಂತೆ ಮಾಡಿದರು ಎಂದರು.

ಇದೇ ವೇಳೆ ಸವಿತಾ ಸಮಾಜದ ಟೌನ್ ಅಧ್ಯಕ್ಷ ಶಿವರುದ್ರಸ್ವಾಮಿ ಹಾಗೂ ಹೋಬಳಿ ಒಕ್ಕೂಟದ ಅಧ್ಯಕ್ಷ ಬಿ.ಸಿದ್ದೇಶ್ ಅವರನ್ನು ಸನ್ಮಾನಿಸಲಾಯಿತು. ತಾಪಂ ಇಓ ಕೃಷ್ಣ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಕೃಷಿ ಸಹಾಯಕ ನಿರ್ದೇಶಕಿ ಸುಹಾಸಿನಿ, ಸವಿತಾ ಸಮಾಜದ ಟೌನ್ ಕಾರ್ಯದರ್ಶಿ ಸಿದ್ದರಾಜು, ಅವಿನಾಶ್, ಖಜಾಂಚಿ ನಿಂಗರಾಜು, ಸೋಸಲೆ ದೇವರಾಜು, ಮೂಗೂರು ನಾಗೇಂದ್ರ, ಕಸಬಾ ಶಂಕರ್, ಚೆಲುವರಾಜು, ಚಿಕ್ಕಣ್ಣ, ಟೈಲರ್ ಸುರೇಶ್ ಮತ್ತಿತರಿದ್ದರು.

ಜ್ವರದಿಂದ ಬಳಲುತ್ತಿದ್ದ ವಿದ್ಯಾರ್ಥಿ ಸಾವು



ಹುಣಸೂರು, ಜು.30– ತೀವ್ರ ಜ್ವರದಿಂದ ಬಳಲುತ್ತಿದ್ದ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ತಾಲೂಕಿನ ರತ್ನಪುರಿಯಲ್ಲಿ ನಡೆದಿದೆ.

ತಾಲೂಕಿನ ರತ್ನಪುರಿ ಗ್ರಾಮದ ನಿವಾಸಿ ನಾಸೀರ್ ಅವರ ಪುತ್ರ ಅವೇಜ್ (13) ಮೃತಪಟ್ಟ ಬಾಲಕ. ಈತ ಗ್ರಾಮದ ಸಿಕೆಎಂಸಿ ಶಾಲೆಯಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಎನ್ನಲಾಗಿದೆ. ಕಳೆದ 3 ದಿನಗಳಿಂದ ಜ್ವರದಿಂದ ಬಳಲುತ್ತಿದ್ದ ಈತ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ. ಆದರೆ ತೀವ್ರ ಅಸ್ವಸ್ಥಗೊಂಡಿದ್ದ ಬಾಲಕನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಅವೇಜ್ ಸಾವನ್ನಪ್ಪಿದ್ದಾನೆ.

ಅಂಬೇಡ್ಕರ್‌ಗೆ ಅಪಮಾನ ಖಂಡಿಸಿ ತಹಸೀಲ್ದಾರ್ ವಿರುದ್ಧ ಪ್ರತಿಭಟನೆ



ತಹಸೀಲ್ದಾರ್ ಪೂರ್ಣಿಮಾ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಕೆ.ಆರ್.ನಗರ, ಜು.30– ಡಾ.ಅಂಬೇಡ್ಕರ್‌ಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ ಪಟ್ಟಣದ ತಾಲೂಕು ಕಚೇರಿ ಎದುರು ಪರಿಶಿಷ್ಟ ಜಾತಿ, ಪಂಗಡದ ವತಿಯಿಂದ ತಹಸೀಲ್ದಾರ್ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ತಹಸೀಲ್ದಾರ್ ಕಚೇರಿಯಲ್ಲಿ ಜಾಗೃತಿ ಸಮಿತಿ ಸಭೆಗೆ ಪರಿಶಿಷ್ಟ ಜಾತಿ, ಪಂಗಡದ ಮುಖಂಡರನ್ನು ಏಕೆ ಆಹ್ವಾನಿಸುತ್ತಿಲ್ಲ ಎಂದು ಚರ್ಚೆ ನಡೆಯುತ್ತಿದ್ದ ವೇಳೆ ತಹಸೀಲ್ದಾರ್ ಪೂರ್ಣಿಮಾ ಅವರು ಕೂಗಾಟ ನಿಲ್ಲಿಸಿ ಇದು ದಂಡಾಧಿಕಾರಿಗಳ ಕಚೇರಿ. ನಿಮ್ಮ ಅಂಬೇಡ್ಕರ್ ಅವರ ಸಂವಿಧಾನ ಹೇಳಿರುವಂತೆ ಹೆಣ್ಣು ಮಗಳಿಗೆ ಗೌರವ ಕೊಡುವುದನ್ನು ಕಲಿಯಿರಿ ಎಂದಿದ್ದಾರೆ. ಈ ಮಾತಿನಿಂದ ಆಕ್ರೋಶಗೊಂಡ ಪ.ಜಾತಿ/ಪಂಗಡದ ಮುಖಂಡರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ಸ್ಥಳಕ್ಕಾಗಮಿಸುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದರು.

ಮುಖಂಡ ಹನಸೋಗೆ ನಾಗರಾಜ್ ಮಾತನಾಡಿ, ದಲಿತರಾದ ನಮಗೆ ನಿಮ್ಮ ಅಂಬೇಡ್ಕರ್ ಎಂದು ಹೇಳಿದ್ದಾರೆ ಎಂದಿರುವ ತಹಸೀಲ್ದಾರ್ ಅವರು ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದಾರೆ. ನಮಗೆ ಅಪಮಾನವಾದರೆ ಸಹಿಸುತ್ತೇವೆ. ಆದರೆ ಅಂಬೇಡ್ಕರ್ ಅವರಿಗೆ ಅಪಮಾನವಾದರೆ ಸಹಿಸುವುದಿಲ್ಲ. ಹೀಗಾಗಿ ಇಂತಹ ಬೇಜವಾಬ್ದಾರಿ ಹೇಳಿಕೆ ನೀಡಿರುವ ಅಧಿಕಾರಿ ನಮಗೆ ಬೇಡ ಕೂಡಲೇ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕಾಗಮಿಸಿದ ಸಾಲಿಗ್ರಾಮ ತಹಸೀಲ್ದಾರ್ ನರಗುಂದ, ಶಿರಸ್ತೇದಾರ್ ಅಸ್ಲಾಂ ಪಾಷ ಪ್ರತಿಭಟನಾಕಾರರನ್ನು ಸಮಾಧಾನಗೊಳಿಸಿ ಇನ್ನು ಮೂರ್ನಾಕು ದಿನದಲ್ಲಿ ವರ್ಗಾವಣೆಯಾಗುತ್ತಿರುವ ತಹಸೀಲ್ದಾರ್ ಅವರ ವಿರುದ್ಧ ಪ್ರತಿಭಟನೆ ಮಾಡಬೇಡಿ. ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಸಿಎಂ ಕಾರ್ಯಕ್ರಮದಲ್ಲಿರುವುದರಿಂದ ಇಲ್ಲಿಗೆ ಬರಲು ಸಾಧ್ಯವಿಲ್ಲ. ತಹಸೀಲ್ದಾರ್ ಪೂರ್ಣಿಮಾ ಕ್ಷಮೆ ಕೇಳುತ್ತಾರೆ. ವಿಷಯ ದೊಡ್ಡದು ಮಾಡಬೇಡಿ ಎಂದು ಮನವಿ ಮಾಡಿದರು.

ಇದೇ ವೇಳೆ ತಹಸೀಲ್ದಾರ್ ಪೂರ್ಣಿಮಾ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರಲ್ಲಿ ಕ್ಷಮೆಯಾಚಿಸಿದ ಹಿನ್ನಲೆಯಲ್ಲಿ ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಜಾಗೃತಿ ಸಮಿತಿ ಸದಸ್ಯರಾದ ಕುಮಾರ್, ಕಾಳಯ್ಯ, ಸುರೇಶ್, ತಾಪಂ ಮಾಜಿ ಸದಸ್ಯ ಶ್ರೀನಿವಾಸ್ ಪ್ರಸಾದ್, ಪ.ಪಂಗಡದ ಕೆ.ಆರ್.ನಗರದ ತಾಲೂಕು ಅಧ್ಯಕ್ಷ ನರಸಿಂಹ ನಾಯಕ, ಸಾಲಿಗ್ರಾಮ ತಾಲುಕು ಅಧ್ಯಕ್ಷ ಮಹದೇವ, ನಂದೀಶ, ಕೃಷ್ಣಯ್ಯ, ಮುರುಗೇಶ, ಬಸವೇಶ, ಗುರುಸ್ವಾಮಿ, ಸುರೇಶ, ಜಯರಾಮ್, ಗುರುಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಕ್ರೀಡೆ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಪೂರಕ

ಹುಣಸೂರು, ಜು.30– ಕ್ರೀಡೆ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಪೂರಕ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ ಅಭಿಪ್ರಾಯಪಟ್ಟರು.

ನಗರದ ಗುರು ಭವನದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಒಳಾಂಗಣ ಕ್ರೀಡೆಗಳಾದ ಕರಾಟೆ, ಚೆಸ್, ಯೋಗಾಸನ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ್ ಕುಮಾರ್ ಮಾತನಾಡಿ, ಶಿಕ್ಷಣ ಇಲಾಖೆ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಅಲ್ಲದೇ ಪೋಷಕರ ಸಹಕಾರದಿಂದ ಕ್ರೀಡಾ ಚಟುವಟಿಕೆಗಳನ್ನು ತಾಲೂಕಿನಲ್ಲಿ ಹಮ್ಮಿಕೊಳ್ಳಲು ಸಹಾಯಕವಾಗಿದೆ ಎಂದರು. ಕರಾಟೆ ಶಿಕ್ಷಕರಾದ ಮನು ಮತ್ತು ರಮೇಶ ಅವರನ್ನು ಸನ್ಮಾನಿಸಲಾಯಿತು.


ವೇದಿಕೆಯಲ್ಲಿ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಲೋಕೇಶ್ ಹೆಚ್.ಎಸ್, ದೈಹಿಕ ಶಿಕ್ಷಣ ಶಿಕ್ಷಕರಾದ ರಮೇಶ್, ಜಯರಾಂ, ಪಾಂಡು, ದಾಸಯ್ಯ, ನಿವೃತ್ತ ದೈಹಿಕ ಶಿಕ್ಷಕರಾದ ಶಿವಣ್ಣ, ಕ್ರೀಡಾಪಟುಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

ಪಿರಿಯಾಪಟ್ಟಣ: ಇಂದು ಶಾಲೆಗಳಿಗೆ ರಜೆ

ಪಿರಿಯಾಪಟ್ಟಣ, ಜು.30– ತಾಲೂಕಿನಲ್ಲಿ ವರುಣನ ಆರ್ಭಟ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ತಹಸೀಲ್ದಾರ್ ಮತ್ತು ಉಪನಿರ್ದೇಶಕರ ಆದೇಶದನ್ವಯ ಜು.31ರಂದು ತಾಲೂಕಿನ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಅಂಗನವಾಡಿಗಳಿಗೆ ರಜೆ ನೀಡಲಾಗಿದೆ ಎಂದು ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ. ಈ ರಜೆಯನ್ನು ಮುಂದಿನ ಶನಿವಾರಗಳಂದು ಪೂರ್ಣ ತರಗತಿ ನಡೆಸುವ ಮೂಲಕ ಸರಿದೂಗಿಸಲು ಸೂಚಿಸಲಾಗಿದೆ.

ಸಂಘವನ್ನು ಲಾಭದತ್ತ ಕೊಂಡೊಯ್ಯಲು ಶ್ರಮಿಸಿದ್ದೇನೆ

ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ



ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷ ಮಲ್ಲಣ್ಣ ಮಾತನಾಡಿದರು.

ತಿ.ನರಸೀಪುರ, ಜು.30– ಆಡಳಿತ ಮಂಡಳಿ ಸದಸ್ಯರ ಸಹಕಾರದಿಂದ ಸಂಘದ ಅಧ್ಯಕ್ಷನಾಗಿ 2 ಅವಧಿ ಪೂರೈಸಿದ್ದು, ನಷ್ಟದಲ್ಲಿದ್ದ ಸಂಘವನ್ನು ಲಾಭದತ್ತ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ತಿಳಿಸಿದರು.

ಪಟ್ಟಣದ ಸಹಕಾರ ಸಂಘದ ಆವರಣದಲ್ಲಿ ಮಂಗಳವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2015ರಲ್ಲಿ ಮೊದಲ ಬಾರಿಗೆ ಅಧ್ಯಕ್ಷನಾಗಿ ಆಯ್ಕೆಯಾದಾಗ ಸಂಘ 80 ಲಕ್ಷ ರೂ. ನಷ್ಟದಲ್ಲಿತ್ತು. ಸಂಘದ ಸದಸ್ಯರ ಸಹಕಾರದಿಂದಾಗಿ ಹಂತ ಹಂತವಾಗಿ ಸಂಘವನ್ನು ಅಭಿವೃದ್ಧಿಗೊಳಿಸಿದ್ದು, ಇಂದು ಸಂಘವು ನಿವ್ವಳ ಲಾಭ ಗಳಿಸಿದೆ. ಸಂಘದ ಸದಸ್ಯರಿಗೆ ವಿವಿಧ ಯೋಜನೆಯಡಿ 8 ಕೋಟಿ ಸಾಲ ನೀಡಲಾಗಿದೆ 50 ಲಕ್ಷ ರೂ. ವೆಚ್ಚದಲ್ಲಿ ಸಂಘದ ನೂತನ ಬಿಲ್ಡಿಂಗ್ ಕಟ್ಟಿಸಲಾಗಿದೆ. ಎರಡು ಅವಧಿಯಲ್ಲಿ ತೃಪ್ತಿಕರವಾಗಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮುಂದಿನ ಮಾರ್ಚ್‌ನಲ್ಲಿ ಚುನಾವಣೆ ಬರಲಿದ್ದು, ಮತ್ತೆ ಅವಕಾಶ ಸಿಕ್ಕರೆ ಸಂಘವನ್ನು ತಾಲೂಕಿನಲ್ಲೇ ಮಾದರಿ ಮಾಡಬೇಕೆಂಬ ಆಶಯ ಹೊಂದಿದ್ದೇನೆ ಎಂದರು.

ನಿವ್ವಳ ಲಾಭ ನಷ್ಟಕ್ಕೆ ಜಮಾ: ಪ್ರಸಕ್ತ ಸಾಲಿನಲ್ಲಿ ಸಂಘ 9,34,440 ರೂ. ಲಾಭ ಗಳಿಸಿದ್ದು, ಸದರಿ ಲಾಭವನ್ನು ಹಿಂದಿನ ಸಾಲುಗಳ ಕ್ರೋಢಿಕೃತ ನಿವ್ವಳ ನಷ್ಟ 17,88,263 ರೂ.ಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದ್ದು, ಉಳಿಕೆ ನಿವ್ವಳ ನಷ್ಟ 8,53,823 ರೂ. ಮೊಬಲಗನ್ನು ಮುಂಬರುವ ಸಾಲಿನಲ್ಲಿ ಹೋಗಲಾಡಿಸಿ ಸಂಘವನ್ನು ನಿವ್ವಳ ಲಾಭದತ್ತ ಕೊಂಡೊಯ್ಯಲಾಗುತ್ತದೆ ಎಂದರು.

ಸಂಘವು 2023–24ನೇ ಸಾಲಿಗೆ 'ಬಿ' ತರಗತಿಯಲ್ಲಿ ಮುಂದುವರೆದಿದ್ದು, 'ಎ' ತರಗತಿಗೆ ಬಡ್ತಿ ಪಡೆಯಲು ಸಹಕಾರ ಸಂಘದಿಂದ ಸಾಲ ಪಡೆದಿರುವ ಸದಸ್ಯರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿ ಮಾಡಿ ಸಹಕರಿಸುವಂತೆ ಮನವಿ ಮಾಡಿದರು.

552 ಸದಸ್ಯರಿಗೆ ಸಾಲ ವಿತರಣೆ

ಪ್ರಸಕ್ತ ಸಾಲಿನಲ್ಲಿ 552 ಮಂದಿಗೆ ಕೆಸಿಸಿ ಕಬ್ಬು ಬೆಳೆ ಸಾಲವಾಗಿ 5,68,54,000 ಕೋಟಿ ರೂ. ಸಾಲ ವಿತರಿಸಲಾಗಿದೆ. ಸಂಘವು ವಿವಿಧ ಸಂಘ ಸಂಸ್ಥೆಗಳಲ್ಲಿ 45,54,495 ರೂ. ಹೂಡಿಕೆ ಮಾಡಿದೆ. ಸಂಘದಲ್ಲಿ 1390 ಸದಸ್ಯರು ಷೇರುದಾರರಿದ್ದು ಅವರಿಂದ 80,21,990 ರೂ. ಷೇರು ಬಂಡವಾಳ ಸಂಗ್ರಹಿಸಲಾಗಿದೆ. ಇದರಲ್ಲಿ ಪ.ಜಾತಿ/ಪಂಗಡದ ಷೇರು, ನಾಮಿನಲ್ ಷೇರು ಹಾಗೂ ಹಿಂದುಳಿದ ವರ್ಗದ ಷೇರುಗಳು ಸೇರಿವೆ ಎಂದು ಮಲ್ಲಣ್ಣ ತಿಳಿಸಿದರು.

ಬಿಲಿಗೆರೆಹುಂಡಿ ಗುರುಮಲ್ಲೇಶ್ವರ ದಾಸೋಹ ಮಠದ ಗುರುಸ್ವಾಮಿ, ಉಪಾಧ್ಯಕ್ಷೆ ನಾಗಮ್ಮ, ನಿರ್ದೇಶಕರಾದ ಎಂ.ನಾಗರತ್ನ, ಎನ್.ಶೇಖರ್, ಟಿ.ಸಿ.ಫಣೀಶ್ ಕುಮಾರ್, ಮಹಾಲಿಂಗಪ್ಪ, ಕೆ..ನಂಜುಂಡಸ್ವಾಮಿ, ಬಿ..ಚಂದ್ರಮ್ಮ, ದೊಡ್ಡ ಬಸವಯ್ಯ, ಸಾವಿತ್ರಮ್ಮ, ಮನ್ನೇಹುಂಡಿ ಪರಶಿವ, ಟಿ.ಜಿ. ಗುರುಪ್ರಸಾದ್, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಸ್.ಶೇಖರ್, ಪ್ರಭಾರ ಕಾರ್ಯನಿರ್ವಹಣಾಧಿಕಾರಿ ಡಿ.ಎಂ.ಶಿವಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಸುಬ್ರಹ್ಮಣ್ಯ, ಕಾರ್ಯದರ್ಶಿ ರಘುನಂದನ್, ಸದಸ್ಯರಾದ ಬಸವರಾಜು, ಸುನೀಲ್, ಸ್ವಾಮಿ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್ಎಂಆರ್ ಪ್ರಕಾಶ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಮಾಜಿ ಸದಸ್ಯ ಎನ್.ಲೋಕೇಶ್, ಕಲಾವಿದ ಶ್ರೀಹರಿ, ಮಹೇಶ್, ನಾಗೇಶ್, ಎನ್.ಲೋಕೇಶ್, ಎ.ಜಿ.ವೆಂಕಟೇಶ್, ರಾಜಶೇಖರ್, ಸ್ವಾಮಿ, ಲಕ್ಷ್ಮಣ್ ಮತ್ತಿತರಿದ್ದರು.

ಗುಣಮಟ್ಟದ ಹಾಲು ಉತ್ಪಾದನೆಯಲ್ಲಿ ಹೆಚ್.ಡಿ.ಕೋಟೆಗೆ 3ನೇ ಸ್ಥಾನ

ಮೈಮುಲ್ ನಿರ್ದೇಶಕ ಈರೇಗೌಡ



ವಿಶೇಷ ತರಬೇತಿ ಕಾರ್ಯಕ್ರಮವನ್ನು ಮೈಮುಲ್ ನಿರ್ದೇಶಕ ಈರೇಗೌಡ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜು.30– ಗುಣಮಟ್ಟದ ಹಾಲು ಉತ್ಪಾದನೆಯಲ್ಲಿ ಜಿಲ್ಲೆಗೆ ಹೆಚ್.ಡಿ. ಕೋಟೆ ತಾಲೂಕು 3ನೇ ಸ್ಥಾನ ಪಡೆದಿದ್ದು, ದಿನಕ್ಕೆ ಒಂದು ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ ಎಂದು ಮೈಮುಲ್ ನಿರ್ದೇಶಕ ಈರೇಗೌಡ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮೈಮುಲ್ ಉಪ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಂಡಳಿ ಬೆಂಗಳೂರು, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಡೈರಿಗಳ ಸಿಇಓಗಳಿಗೆ ಆಯೋಜಿಸಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಡೈರಿಯಲ್ಲಿ ಗುಣಮಟ್ಟದ ಹಾಲು ಶೇಖರಿಸುವ ಉದ್ದೇಶದಿಂದ ಕಾರ್ಯದರ್ಶಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯದರ್ಶಿಗಳು ಹೈನುಗಾರಿಗೆ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು.

ರಾಜ್ಯದ ಬಹುತೇಕ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ರೈತರಿಂದ ಪಡೆಯುತ್ತಿರುವ ಹಾಲಿನ ದರ ಕಡಿಮೆ ಮಾಡಲಾಗಿದೆ. ಆದರೆ ಮೈಸೂರಿನ ಆಡಳಿತ ಮಂಡಳಿ ಶೀಘ್ರ ಸಭೆ ನಡೆಸಿ ಹಾಲಿನ ದರ ಕಡಿಮೆ ಮಾಡಲಿದ್ದೇವೆ. ಹಾಗಾದರೆ ಮಾತ್ರ ನಷ್ಟದಿಂದ ದೂರವಾಗಲು ಸಾಧ್ಯವಾಗಲಿದೆ ಎಂದರು.

> ಕಾರ್ಯದರ್ಶಿಗಳು ಡಿಗ್ರಿ ತೇರ್ಗಡೆಯಾಗಿದ್ದರೆ ಸೂಪರ್‌ವೈಸರ್ ಹುದ್ದೆಗೆ ಅರ್ಜಿ ಹಾಕಲು ಮೊದಲ ಆದ್ಯತೆ ಇರುತ್ತದೆ. ಹೀಗಾಗಿ ಅದನ್ನು ಸದುಪಯೋಗಪಡಿಸಿಕೊಳ್ಳಬೇಕು. ಕಾರ್ಯದರ್ಶಿ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ಹಾಗೂ ಹಾಸ್ಟೆಲ್ ವ್ಯವಸ್ಥೆ ಮಾಡಲಾಗುತ್ತದೆ.
>
> – **ಈರೇಗೌಡ,** ಮೈಮುಲ್ ನಿರ್ದೇಶಕ.

ಕೆಲವು ವರ್ಷಗಳ ಹಿಂದೆ ತಾಲೂಕು ಹೈನುಗಾರಿಕೆಯಲ್ಲಿ ಬಹಳ ಹಿಂದೆ ಉಳಿದಿತ್ತು. ನಾವು ಮತ್ತು ಅಧಿಕಾರಿಗಳ ಪರಿಶ್ರಮದಿಂದ 116 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸಲಾಗಿದೆ. ಮುಂದಿನ ದಿನದಲ್ಲೂ ಮತ್ತಷ್ಟು ಸಂಘಗಳನ್ನು ಪ್ರಾರಂಭಿಸಿ ಹೈನುಗಾರಿಕೆಯಲ್ಲಿ ತಾಲೂಕನ್ನು ಜಿಲ್ಲೆಗೆ ದ್ವಿತೀಯ ಅಥವಾ ಮೊದಲ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಹೈನುಗಾರಿಕೆಯಿಂದ ಆರ್ಥಿಕವಾಗಿ ಸಬಲರಾಗಬಹುದು ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಮೇಲ್ವಿಚಾರಕರಾದ ಆರೀಫ್ ಇಕ್ಬಾಲ್, ವಿಸ್ತರಣಾಧಿಕಾರಿಗಳಾದ ಜಯಂತ್ ಕುಮಾರ್, ರಾಮಪ್ಪ ಬಾರ್ಕಿ, ಯೋಗೀಶ್, ಜಗದಾಂಬ, ತಾಹಿರ ಗರಗ, ಸಹಕಾರ ಯೂನಿಯನ್ ಉಪನ್ಯಾಸಕರಾದ ವಿಶ್ವೇಶ್ವರಯ್ಯ, ಡಾ. ಜಯಪ್ರಕಾಶ್, ಸಿಬ್ಬಂದಿಗಳಾದ ಅರುಣ್, ಉಮೇಶ್ ಇತರರಿದ್ದರು.

ಕೆಜಿ ಕೊಪ್ಪಲಲ್ಲಿ ವಿಜೃಂಭಣೆಯ ಚಾಮುಂಡೇಶ್ವರಿ ಹಬ್ಬ

ಉತ್ಸವಮೂರ್ತಿ ಮೆರವಣಿಗೆಗೆ ಸಾಕ್ಷಿಯಾದ ಸಹಸ್ರಾರು ಭಕ್ತರು



ಪ್ರತಿವರ್ಷ ಮೂರು ಆಷಾಢ ಶುಕ್ರವಾರ ಕಳೆದ ಬಳಿಕ ಗ್ರಾಮದಲ್ಲಿ ಚಾಮುಂಡೇಶ್ವರಿ ಹಬ್ಬ ಆಚರಿಸುವುದು ತಲತಲಾಂತರದಿಂದ ನಡೆದು ಬಂದಿದ್ದು, ಅಂತೆಯೇ ಇಂದು ಗ್ರಾಮದಲ್ಲಿ ಹಬ್ಬದ ಸಂಭ್ರಮ ಕಳೆಗಟ್ಟಿತ್ತು. ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಮಾಂಸಾಹಾರ ಒಳಗೊಂಡಂತೆ ಹಬ್ಬದ ಅಡುಗೆ ಮಾಡಿ ನೆಂಟರಿಷ್ಟರಿಗೆ ಉಣಬಡಿಸಿ, ತಾವೂ ಸವಿದು ಸಂಭ್ರಮಿಸಿದರು. ಹೊಸ ಉಡುಗೆ ತೊಡುಗೆ ಧರಿಸಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ದೇವಸ್ಥಾನದಲ್ಲಿ ಜು.27ರ ಶನಿವಾರ ಚಾಮುಂಡೇಶ್ವರಿ ತಾಯಿಯ ವರ್ಧಂತಿಯ ವಿಶೇಷ ಪೂಜಾ ಕೈಂಕರ್ಯ ಸಹ ನಡೆಸಲಾಗಿತ್ತು





ಮೈಸೂರಿನ ಕೆಜಿ ಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಎದುರು ಮಂಗಳವಾರ ಉತ್ಸವ ಮೂರ್ತಿ ಮೆರವಣಿಗೆ ಕಣ್ತುಂಬಿಕೊಳ್ಳಲು ನೆರೆದಿದ್ದ ಸಹಸ್ರಾರು ಭಕ್ತರು. (ಬಲಚಿತ್ರ) ಇದೇ ವೇಳೆ ಬೆಂಗಳೂರಿನ ದಕ್ಷ ಪೊಲೀಸ್ ಅಧಿಕಾರಿ ಎಸಿಪಿ ಚಂದನ್ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಗ್ರಾಮದ ಮುಖಂಡರಾದ ನಿಂಗಪ್ಪ, ರಾಜಣ್ಣ, ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ದೇವರಾಜು, ಮಾಜಿ ಕಾರ್ಪೋರೇಟರ್‌ಗಳಾದ ಶಂಕರ್, ಗೋಪಿ ಇತರರಿದ್ದಾರೆ.

ಮೈಸೂರು, ಜು.30(ಪಿಎಂ)– ನಗರದ ಕನ್ನೇಗೌಡನಕೊಪ್ಪಲಿನಲ್ಲಿ (ಕೆಜಿ ಕೊಪ್ಪಲು) ಮಂಗಳವಾರ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹಬ್ಬ ವಿಜೃಂಭಣೆಯಿಂದ ಜರುಗಿತು. ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿ ಮೆರವಣಿಗೆಗೆ ಸಹಸ್ರಾರು ಭಕ್ತರು ಸಾಕ್ಷಿಯಾಗಿ ಭಕ್ತಿಯ ಪರಾಕಾಷ್ಠೆ ಮೆರೆದರು.

ಇಲ್ಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಭಕ್ತರ ದಂಡೇ ಹರಿದು ಬಂದಿತ್ತು. ಗ್ರಾಮದ ಹಿರಿಯರು, ಕಿರಿಯರು, ಮಕ್ಕಳು ದೇವಾಲಯದ ಬಳಿ ನೆರೆದು, ದೇವಿಯ ಕೃಪೆಗೆ ಪಾತ್ರರಾದರು. ಇಡೀ ಗ್ರಾಮದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿ ಮೆರವಣಿಗೆ ಜರುಗಿ, ಮರಳಿ ದೇವಸ್ಥಾನಕ್ಕೆ ಬರುವ ವೇಳೆಗೆ ಇಲ್ಲಿ ನೆರೆದಿದ್ದ ಸಹಸ್ರಾರು ಭಕ್ತರು ನಾಡದೇವತೆಗೆ ತಮ್ಮ ಭಕ್ತಿ ಸಮರ್ಪಿಸಿ, ಭಕ್ತಿಭಾವದಲ್ಲಿ ಮಿಂದೆದ್ದರು.

ದೇವಸ್ಥಾನದಲ್ಲಿ ಇಂದು ಬೆಳಗ್ಗೆ 6.30ಕ್ಕೆ ಮಹಾ ಮಂಗಳಾರತಿ ನೆರವೇರಿತು. ಆ ಮೂಲಕ ಆರಂಭಗೊಂಡ ಪೂಜಾ ಕೈಂಕರ್ಯ ರಾತ್ರಿವರೆಗೂ ನಡೆಯಿತು. ಬೆಳಗ್ಗೆಯಿಂದಲೇ ಗ್ರಾಮಸ್ಥರು, ಅವರ ನೆಂಟರಿಷ್ಟರು ದೇವಸ್ಥಾನಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ತಾಯಿಗೆ ಹಬ್ಬದ ವಿಶೇಷ ಪೂಜೆ ನೆರವೇರಿಸಿ ದೇವಿ ದರ್ಶನ ಪಡೆದು ಪುನೀತರಾದರು.

ಬೆಳಗ್ಗೆ 11.30ಕ್ಕೆ ದೇವಸ್ಥಾನದಲ್ಲಿ ಉತ್ಸವ ಮೂರ್ತಿಯ ಪೂಜಾ ವಿಧಿವಿಧಾನದೊಂದಿಗೆ ಮೆರವಣಿಗೆಗೆ ಚಾಲನೆ ದೊರೆಯಿತು. ಬಳಿಕ ಕೆಜಿ ಕೊಪ್ಪಲಿನ ದೇವರ ಕೊಳದಿಂದ ಮೆರವಣಿಗೆ ಹೊರಟಿತು. 'ಕನ್ನಕರಡಿ' ಪೂಜಿಸಿಕೊಂಡು ಮುಂದೆ ಸಾಗಿದ ಉತ್ಸವ ಮೂರ್ತಿ ಮೆರವಣಿಗೆಯು ಸರಸ್ವತಿಪುರಂ, ಕೆಜಿ ಕೊಪ್ಪಲು, ಜಯನಗರ, ಪೈಲ್ವಾನ್ ಬಸವಯ್ಯನವರ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿತು. ತಮಟೆ, ಓಲಗ, ಬ್ಯಾಂಡ್, ಕೀಲು ಕುದುರೆ ಹಾಗೂ ಮಂಗಳ ವಾದ್ಯದೊಂದಿಗೆ ವಿಜೃಂಭಣೆಯಿಂದ ನಡೆದ ಮೆರವಣಿಗೆಯು ಸಂಜೆ ವೇಳೆಗೆ ಮರಳಿ ದೇವಸ್ಥಾನ ತಲುಪಿತು.

ಹೂಮಾಲೆಗಳಿಂದ ಅಲಂಕೃತಗೊಂಡಿದ್ದ ಉತ್ಸವ ಮೂರ್ತಿಯು ದೇವಸ್ಥಾನದ ಬಳಿಗೆ ಬರುವ ವೇಳೆಗೆ ಹಣ್ಣು ಕಾಯಿ ಅರ್ಪಿಸಲು ಕಾದಿದ್ದ ಭಕ್ತರು ಮೆರವಣಿಗೆಯಲ್ಲಿ ಚಾಮುಂಡೇಶ್ವರಿ ಕಂಡ ಕೂಡಲೇ ಜೈಕಾರ ಕೂಗಿ ತಮ್ಮ ಭಕ್ತಿಯನ್ನು ತಾಯಿ ಚಾಮುಂಡಿಗೆ ಸಲ್ಲಿಸಿದರು. ದೇವಸ್ಥಾನದ ಬಳಿ ರಸ್ತೆಯಲ್ಲಿ ಎರಡೂ ಬದಿಯಲ್ಲಿ ಕಾದು ನಿಂತಿದ್ದ ಭಕ್ತ ಸಮೂಹ ಉತ್ಸವ ಮೂರ್ತಿ ಕಂಡೊಡನೆ ಸಂಭ್ರಮ ವ್ಯಕ್ತಪಡಿಸಿದರು. ಅಲ್ಲದೆ, ಉತ್ಸವ ಮೂರ್ತಿ ಎದುರಾಗುತ್ತಿದ್ದಂತೆ ಚಾಮುಂಡೇಶ್ವರಿಗೆ ಜೈಕಾರ ಹಾಕಿ, ತಾವು ತಂದಿದ್ದ ತೆಂಗಿನ ಕಾಯಿ ಒಡೆದು, ಬಾಳೆಹಣ್ಣು ಮುರಿದು ಪೂಜೆ ಸಲ್ಲಿಸಿ ಭಕ್ತಿಯಲ್ಲಿ ತೇಲಿದರು.

ಮಹಿಳೆಯರು, ಮಕ್ಕಳು ಸೇರಿದಂತೆ ಅನೇಕರು ಉತ್ಸವ ಮೂರ್ತಿ ಎದುರಾಗುತ್ತಿದ್ದಂತೆ ಸಾಷ್ಟಾಂಗ ನಮಸ್ಕಾರ ಮಾಡಿ, ಇಷ್ಟಾರ್ಥ ಪ್ರಾಪ್ತಿಗಾಗಿ ದೇವಿಯನ್ನು ಬೇಡಿದರು. ಅಲ್ಲದೆ, ಅನೇಕರು ಉತ್ಸವ ಮೂರ್ತಿಗೆ ಅಲಂಕರಿಸಿದ್ದ ಹೂವಾಲೆಗಳನ್ನು ಸ್ವೀಕರಿಸಿ, ಭಕ್ತಿಯಿಂದ ಇರಿಸಿಕೊಂಡರು. ಹಲವರು ಈ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಇದೇ ವೇಳೆ ವಿದ್ಯುತ್ ದೀಪಗಳ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ದೇವಸ್ಥಾನವು ಭಕ್ತರ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿತು. ಉತ್ಸವ ಮೂರ್ತಿ ದೇವಸ್ಥಾನ ತಲುಪುತ್ತಿದ್ದಂತೆ ದೇವಾಲಯದ ಒಳಗೆ ಪ್ರವೇಶಿಸಲಾರಂಭಿಸಿದ ಭಕ್ತರು, ಗರ್ಭಗುಡಿಯಲ್ಲಿರುವ ದೇವಿಯ ದರ್ಶನ ಪಡೆದರು. ಹೂವಿನಲಂಕಾರದಲ್ಲಿ ಕಂಗೊಳಿಸುತ್ತಿದ್ದ ತಾಯಿ ಚಾಮುಂಡಿ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು.

ಎಸಿಪಿ ಚಂದನ್ ಭಾಗಿ: ಬೆಂಗಳೂರಿನ ದಕ್ಷ ಎಸಿಪಿ ಚಂದನ್ ಸಹ ದೇವಾಲಯಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ತಾಯಿಯ ದರ್ಶನ ಪಡೆದರು. ಇದೇ ವೇಳೆ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಆರ್.ಲಿಂಗಪ್ಪ, ಪಾಲಿಕೆ ಮಾಜಿ ಸದಸ್ಯರಾದ ಜೆ.ಗೋಪಿ, ಶಂಕರ್ ಸೇರಿದಂತೆ ಮತ್ತಿತರರು ಹಾಜರಿದ್ದರು. ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಧರ್ಮದರ್ಶಿ ನಿಂಗಪ್ಪ, ಅಧ್ಯಕ್ಷ ಗಿರೀಶ್ ಡಿ.ಗೌಡ, ಗೌರವಾಧ್ಯಕ್ಷ ನಿಂಗಣ್ಣ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡ ಸಣ್ಣೇಗೌಡ ಉಪಸ್ಥಿತರಿದ್ದರು.

ಮೈಸೂರಿನ ವಿವಿಧೆಡೆ ಸಂಭ್ರಮದ ಚಾಮುಂಡೇಶ್ವರಿ ಹಬ್ಬ

ಮೈಸೂರು, ಜು.30(ಪಿಎಂ)– ಮೈಸೂರಿನ ವಿವಿಧಡೆ ಶ್ರೀ ಚಾಮುಂಡೇಶ್ವರಿ ಹಬ್ಬ ಮಂಗಳವಾರ ಭಕ್ತಿಭಾವದೊಂದಿಗೆ ಆಚರಿಸಲ್ಪಟ್ಟಿತು. ವಿವಿಧ ಸಂಘ–ಸಂಸ್ಥೆಗಳು ಚಾಮುಂಡೇಶ್ವರಿ ಹಬ್ಬ ಆಚರಿಸುವ ಮೂಲಕ ನಾಡದೇವತೆಗೆ ಪೂಜಾ ಕೈಂಕರ್ಯ ನೆರವೇರಿಸಿದವು.

ವಿಶೇಷವಾಗಿ ಎಲ್ಲೆಡೆ ಅನ್ನಸಂತರ್ಪಣೆ ಕಾರ್ಯಕ್ರಮದ ಮೂಲಕ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಎಲ್ಲೆಡೆ ಚಾಮುಂಡೇಶ್ವರಿ ಹಬ್ಬದ ಶುಭ ಸಂದೇಶ ಇರುವ ಕಟೌಟ್‌ಗಳು ರಾರಾಜಿಸಿದವು. ಶನಿವಾರವೂ ಚಾಮುಂಡೇಶ್ವರಿ ದೇವಿಯ ವರ್ಧಂತಿ ಪ್ರಯುಕ್ತ ಇದೇ ರೀತಿಯಲ್ಲಿ ನಗರದೆಲ್ಲೆಡೆ ಪೂಜಾ ಕೈಂಕರ್ಯ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಗಳು ನಡೆದಿದ್ದವು. ಅಂತೆಯೇ ಹಲವು ಸಂಘ–ಸಂಸ್ಥೆಗಳು, ಯುವಕರ ಬಳಗಗಳು ನಾಳೆಯೂ (ಬುಧವಾರ) ಚಾಮುಂಡೇಶ್ವರಿ ಹಬ್ಬ ಆಯೋಜಿಸಿ, ಅನ್ನಸಂತರ್ಪಣೆ ಕಾರ್ಯಕ್ರಮ ನಡೆಸಿ ದೇವಿಗೆ ಭಕ್ತಿಯ ಪರಾಕಾಷ್ಠೆ ಮೆರೆಯಲಿವೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶಾಸ್ತ್ರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆಡ್‌ಪೂಲ್ & ವೊಲ್ವೆರಿನ್ (ಇಂ)	4 ಪ್ರದರ್ಶನಗಳು
ಸಂಗಂ	
ಕಾಟನ್‌ಪೇಟೆ ಗೇಟ್ (ಕ)	4 ಪ್ರದರ್ಶನಗಳು
ಲಿಡೋ	
ರಾಜಹುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನರಬಲಿ (ತೆ)	4 ಪ್ರದರ್ಶನಗಳು
ಪ್ರಭಾ	
ರಕ್ತಾಕ್ಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.8ಕ್ಕೆ, ಬೆ.10.40ಕ್ಕೆ, ರಾಯನ್ (ತ): ಮ.1.20ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಕ್ತಾಕ್ಷ (ಕ): ಬೆ.10.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಮ.12.50ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಲೆವೆಲ್ ಕ್ರಾಸ್ (ಮ): ಬೆ.10.25ಕ್ಕೆ.
ಸ್ಕ್ರೀನ್ 3	ಬ್ಯಾಡ್ ನ್ಯೂಸ್ (ಹಿಂ): ಬೆ.10.30ಕ್ಕೆ, ಸಂ.4.15ಕ್ಕೆ, ರೂಪಾಂತರ (ಕ): ಮ.1.15ಕ್ಕೆ, ಫ್ಯಾಮಿಲಿ ಡ್ರಾಮಾ (ಕ): ರಾ.7.10ಕ್ಕೆ, ರುದ್ರವೀಣಾ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.35ಕ್ಕೆ, ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಾಕಿ: ಐರ್ಲೆಂಡ್ ವಿರುದ್ಧ ಭಾರತಕ್ಕೆ ಭರ್ಜರಿ ಗೆಲುವು

ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟ–2024

ನಾಕೌಟ್‌ಗೆ ಹತ್ತಿರವಾದ ಟೀಂ ಇಂಡಿಯಾ, ಆ.1ರಂದು ಬೆಲ್ಜಿಯಂ ವಿರುದ್ಧ ಸೆಣಸಾಟ



ಪ್ಯಾರಿಸ್, ಜು.30– ಒಲಿಂಪಿಕ್ ಕ್ರೀಡಾಕೂಟದಲ್ಲಿ 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿರುವ ಹರ್ಮನ್‌ಪ್ರೀತ್ ಸಿಂಗ್ ಸಾರಥ್ಯದ ಭಾರತ ಪುರುಷರ ಹಾಕಿ ತಂಡ ತನ್ನ 3ನೇ ಲೀಗ್ ಪಂದ್ಯದಲ್ಲಿ ಅಪಾಯಕಾರಿ ಐರ್ಲೆಂಡ್ ಎದುರು 2–0 ಗೋಲುಗಳ ಆಕರ್ಷಕ ಜಯ ದಾಖಲಿಸಿದೆ. ಆ ಮೂಲಕ ನಾಕೌಟ್ ಹಂತಕ್ಕೆ ಮತ್ತಷ್ಟು ಹತ್ತಿರವಾಗಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಅನ್ನು 2–1 ಗೋಲುಗಳಿಂದ ಮಣಿಸಿದ್ದ ಭಾರತ 2ನೇ ಪಂದ್ಯದಲ್ಲಿ ಸೋಲಿನ ದವಡೆಯಿಂದ ಪಾರಾಗಿ ಅರ್ಜೆಂಟೀನಾ ಎದುರು 1–1 ಅಂತರದ ರೋಚಕ ಡ್ರಾ ಸಾಧಿಸಿತ್ತು. ಇದೀಗ 3ನೇ ಪಂದ್ಯದಲ್ಲಿ ಐರ್ಲೆಂಡ್ ಎದುರು ಅಧಿಕಾರಯುತ ಜಯ ದಕ್ಕಿಸಿಕೊಂಡಿದೆ. ಪಂದ್ಯದಲ್ಲಿ ಭಾರತ ಗಳಿಸಿದ ಎರಡೂ ಗೋಲ್‌ಗಳು ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರ ಸ್ಟಿಕ್‌ನಿಂದ ಮೂಡಿಬಂದವು ಎಂಬುದು ವಿಶೇಷ. ಈ ಗೆಲುವಿನೊಂದಿಗೆ ಭಾರತ ಬಿ ಗುಂಪಿನಲ್ಲಿ ಬಲಿಷ್ಠ ಬೆಲ್ಜಿಯಂ ಮತ್ತು ಆಸ್ಟ್ರೇಲಿಯಾ ತಂಡಗಳನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ.

ಭಾರತ ಮೇಲುಗೈ: ಪಂದ್ಯದಲ್ಲಿ ಭಾರತ ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿತು. ಪಂದ್ಯದ ಮೊದಲ ಅವಧಿಯಲ್ಲೇ ಸಿಕ್ಕ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ಇಂಡಿಯಾ ಖಾತೆ ತೆರೆಯುವಲ್ಲಿ ಯಶಸ್ವಿಯಾಯಿತು. ಡ್ರ್ಯಾಗ್ ಫ್ಲಿಕ್ ಸ್ಪೆಷಲಿಸ್ಟ್ ಹಾಗೂ ನಾಯಕ ಹರ್ಮನ್‌ಪ್ರೀತ್ ಸಿಂಗ್ ಏಕಾಗ್ರತೆಯಿಂದ ಎದುರಾಳಿ ಕೀಪರ್‌ಗೆ ಚಳ್ಳೆಹಣ್ಣು ತಿನ್ನಿಸಿ ಚೆಂಡನ್ನು ಗೋಲ್ ಪೆಟ್ಟಿಗೆ ಸೇರಿಸುವ ಮೂಲಕ ಮೊದಲ ಅವಧಿ ಅಂತ್ಯಕ್ಕೆ 1–0 ಅಂತರದ ಮೇಲುಗೈ ತಂದರು. ಬಳಿಕ ಎರಡನೇ ಅವಧಿಯಲ್ಲಿ ಅಂದರೆ 19ನೇ ನಿಮಿಷದಲ್ಲಿ ಭಾರತ ತಂಡ ಗೋಲ್ ಅಂತರವನ್ನು 2–0ಗೆ ವಿಸ್ತರಿಸಿತು. ಸಿಕ್ಕ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲ್ ಪ್ರಮಾಣ ಹೆಚ್ಚಿಸಿಕೊಳ್ಳುವಲ್ಲಿ ಭಾರತ ಸಫಲವಾಯಿತು. ಎರಡನೇ ಅವಧಿಯ ಮುಕ್ತಾಯಕ್ಕೆ 2–0 ಅಂತರದ ಮೇಲುಗೈ ಹೊಂದಿದ್ದ ಭಾರತ ತಂಡ ಬಳಿಕ ತನ್ನ ಡಿಫೆನ್ಸ್ ಭದ್ರಪಡಿಸಿಕೊಂಡು ರಕ್ಷಣಾತ್ಮಕ ಆಟವಾಡಿತು. ಎದುರಾಳಿ ತಂಡಕ್ಕೆ ಗೋಲ್ ಬಾರಿಸುವ ಯಾವುದೇ ಅವಕಾಶ ನೀಡದೆ ಗೋಲ್‌ಪಟ್ಟಿಗೆ ಕಾಯ್ದುಕೊಂಡು 60 ನಿಮಿಷಗಳ ಆಟದ ಅಂತ್ಯಕ್ಕೆ ಗೆಲುವನ್ನು ತನ್ನದಾಗಿಸಿಕೊಂಡಿತು.

ಐರ್ಲೆಂಡ್ ಪರ ಅಂತಿಮ ನಿಮಿಷಗಳಲ್ಲಿ ಸ್ಟಾರ್ ಸ್ಟ್ರೈಕರ್‌ಗಳಾದ ಪೀಟರ್ ಬ್ರೌನ್, ಕೈಲ್ ಮಾರ್ಷಲ್ ಮತ್ತು ಡರಾಗ್ ವಾಲ್ಷ್ ಸರ್ವ ಪ್ರಯತ್ನ ಮಾಡಿದರೂ ಭಾರತದ ಡಿಫೆನ್ಸ್ ಮುರಿಯಲು ಸಾಧ್ಯವಾಗಲಿಲ್ಲ. ಟೂರ್ನಿಯಲ್ಲಿ ಈ ಗೆಲುವು ಭಾರತದ ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ. ಭಾರತ ಆ.1ರಂದು ತನ್ನ ಮುಂದಿನ ಪಂದ್ಯ ಆಡಲಿದ್ದು, ವಿಶ್ವ ಚಾಂಪಿಯನ್ಸ್ ಬೆಲ್ಜಿಯಂ ಎದುರು ಕಾದಾಟ ನಡೆಸಲಿದೆ.

ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್ ಜೋಡಿಗೆ ಗೆಲುವು

ಪ್ಯಾರೀಸ್: ಭಾರತದ ಬ್ಯಾಡ್ಮಿಂಟನ್ ತಾರಾ ಜೋಡಿ ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರ ಗೆಲುವಿನ ಓಟ ಪ್ಯಾರಿಸ್ ಒಲಿಂಪಿಕ್‌ನಲ್ಲಿ ಮುಂದುವರೆದಿದೆ.



ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಈವೆಂಟ್‌ನಲ್ಲಿ ಇಂಡೋನೇಷ್ಯಾದ ಮುಹಮ್ಮದ್ ರಿಯಾಂಟೊ ಮತ್ತು ಫಜರ್ ಅಲ್ಫಿಯಾ ಜೋಡಿಯನ್ನು 21–13, 21–13 ನೇರ ಸೆಟ್‌ಗಳಿಂದ ಸೋಲಿಸಿದರು. ಪಂದ್ಯ ಗೆಲ್ಲಲು ಸಾತ್ವಿಕ್ ಮತ್ತು ಚಿರಾಗ್ ಜೋಡಿ 40 ನಿಮಿಷಗಳನ್ನು ತೆಗೆದುಕೊಂಡು ಕ್ವಾರ್ಟರ್ ಫೈನಲ್ ತಲುಪಿತು.

ಸಾತ್ವಿಕ್ ಮತ್ತು ಚಿರಾಗ್ ಮೊದಲ ಸುತ್ತಿನಲ್ಲಿ 5–3 ಮುನ್ನಡೆಯೊಂದಿಗೆ ಉತ್ತಮ ಆರಂಭ ಮಾಡಿತು. ಆದರೆ ನಂತರ ಎರಡೂ ತಂಡಗಳ ಸ್ಕೋರ್‌ಗಳು 5–5 ಮತ್ತು 7–7 ರಲ್ಲಿ ಸಮಗೊಂಡವು. ಭಾರತದ ಜೋಡಿ 9–8 ಅಂಕಗಳೊಂದಿಗೆ ಸತತ 3 ಅಂಕಗಳೊಂದಿಗೆ 12–8 ಮುನ್ನಡೆ ಸಾಧಿಸಿತು. ಇಂಡೋನೇಷ್ಯಾದ ಜೋಡಿ 2ನೇ ಸೆಟ್‌ನಲ್ಲಿ ಕ್ರಾಸ್ – ಕೋರ್ಟ್ ಡ್ರಾಪ್‌ಗಳು ಮತ್ತು ಶಕ್ತಿಯುತ ಫ್ಲಾಟ್ ಡ್ರೈವ್‌ಗಳನ್ನು ಹೊಡೆಯುವ ಮೂಲಕ ಪ್ರಾಬಲ್ಯ ಸಾಧಿಸಲು ಯತ್ನಿಸಿದರಾದರೂ ಸಾತ್ವಿಕ್ ಮತ್ತು ಚಿರಾಗ್ ಪ್ರತಿದಾಳಿ ನಡೆಸಿದರು. ಇದರೊಂದಿಗೆ ಮೊದಲ ಸೆಟ್ ಅನ್ನು 21–13 ರಿಂದ ಗೆದ್ದುಕೊಂಡರು. ಈ ಸೆಟ್ ಸೋತರೂ ಇಂಡೋನೇಷ್ಯಾ ಜೋಡಿ ಪಂದ್ಯದ ಉದ್ದಕ್ಕೂ ಭಾರತದ ಜೋಡಿಗೆ ಕಠಿಣ ಸವಾಲು ನೀಡಿತು.

ಬಳಿಕ ಎರಡನೇ ಸೆಟ್‌ನಲ್ಲೂ ತಮ್ಮ ಪ್ರದರ್ಶನ ಮುಂದುವರೆಸಿದ ಭಾರತ ಇದರಲ್ಲೂ 21–13 ಅಂತರದಿಂದ ಪಂದ್ಯ ಗೆದ್ದುಕೊಂಡಿತು. ಈ ಗೆಲುವಿನೊಂದಿಗೆ ಭಾರತದ ಜೋಡಿ ತಮ್ಮ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿದೆ. ಕ್ವಾರ್ಟರ್ ಫೈನಲ್‌ನಲ್ಲಿ ಯಾರನ್ನು ಎದುರಿಸಲಿದೆ ಎಂಬು ಮುಂದಿನ ಪಂದ್ಯಗಳ ಮೂಲಕ ನಿರ್ಧಾರವಾಗಲಿದೆ.

ಟೇಬಲ್ ಟೆನ್ನಿಸ್‌ನಲ್ಲಿ ಇತಿಹಾಸ ಬರೆದ ಮಣಿಕಾ ಬಾತ್ರಾ

ಪ್ಯಾರಿಸ್: ಭಾರತದ ಟೇಬಲ್ ಟೆನ್ನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಆ ಮೂಲಕ ಟಿಟಿ ಸಿಂಗಲ್ಸ್ ಸ್ಪರ್ಧೆಯಲ್ಲಿ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದ ಮೊದಲ ಭಾರತೀಯ ಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿಶ್ವದ 18ನೇ ಶ್ರೇಯಾಂಕಿತೆ ಫ್ರಾನ್ಸ್‌ನ ಆಟಗಾರ್ತಿ ಪ್ರೀತಿಕಾ ಪಾವೇಡೆ ವಿರುದ್ಧ 4–0 ಅಂತರದಿಂದ 29 ವರ್ಷದ ಮಣಿಕಾ ಬಾತ್ರಾ ಐತಿಹಾಸಿಕ ಜಯ ದಾಖಲಿಸಿದರು. ಪಂದ್ಯ ಆರಂಭದಿಂದ (11–9 11–6 11–9 11–7) ಕೊನೆವರೆಗೂ ಬಾತ್ರಾ ಎದುರಾಳಿ ವಿರುದ್ಧ ಪ್ರಾಬಲ್ಯ ಮೆರೆದರು.



ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ 19 ವರ್ಷ ವಯಸ್ಸಿನ ಪ್ರೀತಿಕಾ ಅವರಿಂದ ಮಣಿಕಾ ಬಾತ್ರಾ ಪ್ರಬಲ ಪೈಪೋಟಿ ಎದುರಿಸಿದರು. ಆರಂಭದಲ್ಲಿ, 8–8 ರಿಂದ ಸಮಬಲದ ಹೋರಾಟ ಕಂಡರು. ಬಳಿಕ ಅನುಭವಿ ಬಾತ್ರಾ ಒಲಿಂಪಿಕ್ಸ್ ಇತಿಹಾಸದಲ್ಲೇ ಟೇಬಲ್ ಟೆನ್ನಿಸ್‌ನಲ್ಲಿ ಭಾರತದ ಪರವಾಗಿ ಅತ್ಯಂತ ಸ್ಮರಣೀಯ ಪಂದ್ಯವಾಡಿದರು. ಕಠಿಣ ಸವಾಲಿನ ನಡುವೆಯೇ ಮೊದಲ ಸುತ್ತಿನಲ್ಲಿ 11–9 ಅಂತರದಿಂದ ಬಾತ್ರಾ ಮೇಲುಗೈ ಸಾಧಿಸಿದರು. ಎರಡನೇ ಸುತ್ತಿನಲ್ಲಿ 3–1 ಅಂತರದ ಮುನ್ನಡೆ ಗಳಿಸಿದರು. ಮತ್ತೊಂದೆಡೆ, ಪ್ರೀತಿಕಾ ಸಮಬಲದ ಹೋರಾಟ ನೀಡಲು ನಿರಂತರವಾಗಿ ಪ್ರಯತ್ನಿಸಿದರು. ಆದರೆ ಅವರ ಸಣ್ಣಪುಟ್ಟ ತಪ್ಪುಗಳನ್ನೇ ಸಮರ್ಥವಾಗಿ ಬಳಸಿಕೊಂಡು ಬಾತ್ರಾ ಪಂದ್ಯದ ಮೇಲೆ ಹಿಡಿತ ಸಾಧಿಸಿ ಗೆಲುವು ತಮ್ಮದಾಗಿಸಿಕೊಂಡರು.

ಲಂಕಾ ವಿರುದ್ಧ ಟಿ20 ಸರಣಿ ಕ್ಲೀನ್‌ಸ್ವೀಪ್ ಮಾಡಿದ ಭಾರತ



ಕೊಲಂಬೊ, ಜು.30– ಬ್ಯಾಟಿಂಗ್, ಬೌಲಿಂಗ್ ಹಾಗೂ ಫೀಲ್ಡಿಂಗ್ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ಸಂಘಟಿತ ಪ್ರದರ್ಶನ ನೀಡಿದ ಭಾರತ, ಶ್ರೀಲಂಕಾ ವಿರುದ್ಧದ ಮೂರನೇ ಟಿ20 ಪಂದ್ಯವನ್ನು ಸೂಪರ್ ಓವರ್‌ನಲ್ಲಿ ಗೆದ್ದುಕೊಂಡಿದೆ. ಆ ಮೂಲಕ ಲಂಕಾ ತವರಿನಲ್ಲೇ 3 ಪಂದ್ಯಗಳ ಟಿ20 ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಿದೆ.

ಗೆಲುವಿಗೆ 138 ರನ್ ಗುರಿ ಪಡೆದ ಲಂಕಾ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 137 ರನ್ ಗಳಿಸಲಷ್ಟೇ ಶಕ್ತವಾಗಿ ಪಂದ್ಯ ಡ್ರಾ ಆಯಿತು. ಇದರಿಂದ ಮ್ಯಾಚ್ ಸೂಪರ್ ಓವರ್‌ನತ್ತ ತಿರುಗಿತು. ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಂಕಾ ತಂಡ 2 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಪೆವಿಲಿಯನ್‌ಗೆ ಮರಳಿತು. ಆದರೆ ಟೀಂ ಇಂಡಿಯಾ ಪರ ಕಣಕ್ಕಿಳಿದ ನಾಯಕ ಸೂರ್ಯಕುಮಾರ್, ಮಹೀಶ್ ತೀಕ್ಷಣ ಬೌಲಿಂಗ್‌ನಲ್ಲಿ ಮೊದಲ ಎಸೆತದಲ್ಲೇ ಬೌಂಡರಿ ಚಚ್ಚಿ ನೀರು ಕುಡಿದಂತೆ ಮ್ಯಾಚ್ ಗೆಲ್ಲಿಸಿದರು.

ಕೊನೆ 2 ಓವರ್ ಥ್ರಿಲ್ಲಿಂಗ್: ಲಂಕಾ ಗೆಲುವಿಗೆ ಕೊನೆ 2 ಓವರ್‌ಗಳಲ್ಲಿ ಗೆಲುವಿಗೆ 9 ರನ್ ಬೇಕಿತ್ತು. ಆದರೆ 19ನೇ ಓವರ್ ಬೌಲಿಂಗ್ ಮಾಡಿದ ರಿಂಕು ಸಿಂಗ್ 2 ಪ್ರಮುಖ ವಿಕೆಟ್ ಕಿತ್ತು, ಕೇವಲ 3 ರನ್ ಬಿಟ್ಟುಕೊಟ್ಟರು. ಕೊನೆ ಓವರ್‌ನಲ್ಲಿ 5 ರನ್ ಬೇಕಿದ್ದಾಗ ನಾಯಕ ಸೂರ್ಯಕುಮಾರ್ ಯಾದವ್ ಅವರೇ ಖುದ್ದು ಬೌಲಿಂಗ್‌ಗೆ ಇಳಿದರು. ಮೊದಲ ಎಸೆತದಲ್ಲಿ ರನ್ ಬಿಟ್ಟುಕೊಡದ ಸೂರ್ಯ 2–3ನೇ ಎಸೆತಗಳಲ್ಲಿ ಬ್ಯಾಕ್ ಟು ಬ್ಯಾಕ್ ವಿಕೆಟ್ ಕಿತ್ತರು. 4ನೇ ಎಸೆತದಲ್ಲಿ 1 ರನ್ ಬಿಟ್ಟುಕೊಟ್ಟರು. 5ನೇ ಎಸೆತದಲ್ಲಿ ರನೌಟ್‌ಗೆ ಸುಲಭ ಸಾಧ್ಯತೆ ಇದ್ದರೂ ಕೊಂಚ ಗಲಿಬಿಲಿಯಿಂದ ಸೂರ್ಯ 2 ರನ್ ಕೈಚೆಲ್ಲಿದರು. ಕೊನೇ ಎಸೆತದಲ್ಲಿ ಲಂಕಾ ಬ್ಯಾಟರ್‌ಗಳು 2 ರನ್ ಕದಿಯುವಲ್ಲಿ ಯಶಸ್ವಿಯಾದ ಪರಿಣಾಮ ಮ್ಯಾಚ್ ಸೂಪರ್ ಓವರ್‌ನತ್ತ ತಿರುಗಿತು.

ಚೇಸಿಂಗ್ ಮಾಡಿದ ಲಂಕಾ ಪರ ಆರಂಭಿಕರಾದ ಪಥುಮ್ ನಿಸ್ಸಾಂಕ 26, ಕುಸಲ್ ಮೆಂಡಿಸ್ 43, ಕುಸಲ್ ಪೆರೇರಾ 46 ರನ್ ಬಾರಿಸಿದರು. ಲಂಕಾ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದ ಟೀಂ ಇಂಡಿಯಾ ಪರ ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ರಿಂಕು ಸಿಂಗ್, ಸೂರ್ಯಕುಮಾರ್ ಯಾದವ್ ತಲಾ 2 ವಿಕೆಟ್ ಪಡೆದು ಮಿಂಚಿದರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಭಾರತದ ಪರ ಜೈಸ್ವಾಲ್ 10, ಶುಭಮನ್ ಗಿಲ್ 39, ಶಿವಂ ದುಬೆ 13, ಸೂರ್ಯ 8, ರಿಂಕು ಸಿಂಗ್ 1, ರಿಯಾನ್ ಪರಾಗ್ 26, ವಾಷಿಂಗ್ಟನ್ ಸುಂದರ್ 25 ಹಾಗೂ ರವಿ ಬಿಷ್ಣೋಯಿ 8 ರನ್ ಗಳಿಸಿದರೇ ಸಿರಾಜ್, ಸಂಜು ಸ್ಯಾಮ್ಸನ್ ಶೂನ್ಯ ಸುತ್ತಿದರು. ಲಂಕಾ ಪರ ಮಹೀಶ್ ತೀಕ್ಷಣ 3, ವಾನಿಂದು ಹಸರಂಗ 2, ಚಾಮಿಂದು ವಿಕ್ರಮಸಿಂಘೆ, ಆಶಿತಾ ಫರ್ನಾಂಡೋ, ರಮೇಶ್ ಮೆಂಡೀಸ್ ತಲಾ ಒಂದೊಂದು ವಿಕೆಟ್ ಪಡೆದರು. ವಾಷಿಂಗ್‌ಟನ್ ಸುಂದರ್ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರೆ, ಸೂರ್ಯಕುಮಾರ್ ಯಾದವ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಬೇಸಿಗೆ ರೇಸ್

4ನೇ ದಿನ, ಬುಧವಾರ, 31–7–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಕಾಗಿನೆಲೆ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಅಗೆನೆಸ್ಟ್ ಆಲ್ ಆಡ್ಸ್ 2. ಇನ್‌ಎಕ್ಸಕ್ಟಬಲ್ 3. ನಿಶಾಕ್

II. ಟ್ರಾಂಬೆ ಪ್ಲೇಟ್ –1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.2.30ಕ್ಕೆ
1. ಸ್ಪೆಕ್ಟಾಕ್ಯುಲರ್ 2. ಪ್ರಿನ್ಸ್ ಕಾರ್ಪೊರೇಟರ್ 3. ಕಾವರೋಜ್ಹಿ

III. ತಕ್ಷಶಿಲಾ ಪ್ಲೇಟ್ –1200 ಮೀ. ಡಿII. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಮಿಚೆಲಿ ಪ್ರೈಡ್ 2 ಆರ್‌ಮಾಮೆಂಟ್ 3. ಪರ್ಫೆಕ್ಟ್ ಎಂಪ್ರೆಸ್

IV. ಸೋಮವಾರಪೇಟೆ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಮಾಸ್ಟರಿ 2. ವಾಟ್ ಈಸ್ ದಿಸ್ 3. ಸೆರೈ

V. ಮೈಸೂರ್ ಫಿಲಿಸ್ ಟ್ರೈಯಲ್ ಸ್ಟೆಕ್ಸ್–1400 ಮೀ. 3 ವರ್ಷ (ಟರ್ಮ್ಸ್) ಸಂಜೆ 4.00ಕ್ಕೆ
1. ಗೋಲ್ಡ್ ರೈಡ್ 2. ಜೈಲಿ

VI. ತಕ್ಷಶಿಲಾ ಪ್ಲೇಟ್ –1200 ಮೀ. ಡಿI. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಸಿಲ್ವರ್ ಸ್ಟ್ರಿಂಗ್ 2. ಸೈಂಟ್ ಎಮಿಲಿಯನ್ 3. ಔರ್ಲಿ

VII. ಲಾಯಲ್ ಪ್ರಿನ್ಸ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಡೈನಾಮಿಕ್ ಫೋರ್ಸ್ 2. ಜ್ಯೂವೆಲ್ ಥೀಪ್ 3. ಹೀರೋಯಿಸಮ್

ದಿನದ ಅತ್ಯುತ್ತಮ	ಸ್ಪೆಕ್ಟಾಕ್ಯುಲರ್
ಡಬ್ಬಲ್	ಮಾಸ್ಟರಿ, ಗೋಲ್ಡ್ ರೈಡ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ

ಕ್ರಿಸ್ಟೀನ್ ಪ್ರೇಮಾ ನಿಧನ



ಮೈಸೂರು, ಜು.30– ಮೈಸೂರು ಶ್ರೀರಾಂಪುರ 2ನೇ ಹಂತದ ಎಲ್‌ಐಸಿ ಬಡಾವಣೆ ನಿವಾಸಿ ಕ್ರಿಸ್ಟೀನ್ ಪ್ರೇಮಾ(75) ಮಂಗಳವಾರ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 3 ಗಂಟೆಗೆ ಗಾಂಧಿ ನಗರದ ಕ್ರೈಸ್ತರ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.


ತಾಯಿ ಚಾಮುಂಡೇಶ್ವರಿ ಆಶೀರ್ವಾದದೊಂದಿಗೆ
ಶ್ರೀ ಗಗನ್‌ದೀಪ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು :
ಕ್ರಿಸ್ಟಲ್ ಗ್ರೂಪ್ಸ್


ಗೌರವ ನಮನಗಳೊಂದಿಗೆ
ಕಾಯಕಯೋಗಿ ಮಾಜಿ ಸಂಸದರು, ಕೆಪಿಸಿಸಿ ಕಾರ್ಯಾಧ್ಯಕ್ಷರು
ದಿ|| ಆರ್.ಧ್ರುವನಾರಾಯಣ್‌ರವರ
63ನೇ ಹುಟ್ಟುಹಬ್ಬದ ಸ್ಮರಣಾರ್ಥವಾಗಿ
ಬೃಹತ್ ಉದ್ಯೋಗ ಮೇಳ
ದಿನಾಂಕ:
31.07.2024 ಬುಧವಾರ
ಬೆಳಗ್ಗೆ 9 ರಿಂದ
ಸಂಜೆ 5 ರವರೆಗೆ
ಸ್ಥಳ:
ಜೆಎಸ್‌ಎಸ್ ಮಂಗಳ ಮಂಟಪ
ನಂಜನಗೂಡು
ಕೆ.ಮಾರುತಿ
ಜಿ.ಪಂ. ಮಾಜಿ ಸದಸ್ಯರು, ನಂಜನಗೂಡು
ಹಾಗೂ ಅಧ್ಯಕ್ಷರು, ಜಿಲ್ಲಾ
ಕಾಂಗ್ರೆಸ್ ಹಿಂದುಳಿದ ವರ್ಗ
ಕೆ.ಜಿ.ಕುರಹಟ್ಟಿ ಮಹೇಶ್
ಅಧ್ಯಕ್ಷರು, ನಂಜನಗೂಡು
ಬ್ಲಾಕ್ ಕಾಂಗ್ರೆಸ್ ಸಮಿತಿ
ಸಿ.ಎಂ.ಶಂಕರ್
ಅಧ್ಯಕ್ಷರು, ನಂಜನಗೂಡು
ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ
ಶ್ರೀಕಂಠನಾಯಕ
ಅಧ್ಯಕ್ಷರು, ಹುಲ್ಲಹಳ್ಳಿ
ಬ್ಲಾಕ್ ಕಾಂಗ್ರೆಸ್ ಸಮಿತಿ
ನಾಗೇಶ್ ರಾಜ್
ತಾಲ್ಲೂಕು ಪಂಚಾಯಿತಿ
ಮಾಜಿ ಅಧ್ಯಕ್ಷರು, ನಂಜನಗೂಡು
ಪ್ರಕಟಣೆ: ನಂಜನಗೂಡು-ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ನಗರ ಕಾಂಗ್ರೆಸ್ ಸಮಿತಿ, ನಂಜನಗೂಡು